Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–26 | ಜೂನ್ 23–29, 2025 | ಪುಟ 16 | ರೂ.10/–
Volume-19 | Issue-26 | June 23-29, 2025 | Pages 16 | Price. 10/-



THE HINDU
India's National Newspaper

President Proclaims National Emergency

"Security of India Threatened by Internal Disturbances"

Preventive Arrests: Press Censorship Imposed

PM Explains Action

ತುರ್ತು ಪರಿಸ್ಥಿತಿಗೆ 50 ವರ್ಷಗಳು: ಪ್ರಜಾಪ್ರಭುತ್ವಕ್ಕೆ ಹೊಸ ಅಪಾಯಗಳು



ಬಾಲ್ಯ ವಿವಾಹ: ಭವಿಷ್ಯ ಹೊಸಕಿ ಹಾಕುವ ಉರುಳು

ಐ.ಟಿ. ವಲಯದಲ್ಲಿ ಆಧುನಿಕ ಗುಲಾಮಗಿರಿ ಹೇರುವ ಪ್ರಯತ್ನಗಳು

ಅಮೇರಿಕಾ ಮತ್ತು ಜಿ-7 ಯುದ್ಧ ಖೋರತನ

ಸೈನ್ಯದೊಳಗೆ ಸಂವಿಧಾನ ರಚನೆಯ ಚರ್ಚೆ

ಭಾಗ 30

ಜಿ.ಎನ್. ನಾಗರಾಜ್

"ಇಂಗ್ಲೆಂಡ್‌ನಲ್ಲಿರುವ ಅತಿ ಬಡವರಿಗೂ ಅತಿ ಶ್ರೀಮಂತರಿಗಿರುವಂತೆಯೇ ತಮ್ಮದೇ ಆದ ಬದುಕು ಇದೆ. ಒಂದು ಸರ್ಕಾರದ ಅಡಿಯಲ್ಲಿ ವಾಸಿಸುವವರು ಮೊದಲು ಆ ಸರ್ಕಾರದಡಿಯಲ್ಲಿ ಇರುವುದಕ್ಕೆ ತಮ್ಮ ಒಪ್ಪಿಗೆ ನೀಡಬೇಕು. ಇಂಗ್ಲೆಂಡಿನ ಅತಿ ಬಡವನಿಗೂ ಆ ಸರ್ಕಾರದಡಿಯಲ್ಲಿ ಇರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಇಲ್ಲದಿದ್ದರೆ ಆ ಸರ್ಕಾರಕ್ಕೆ ಬದ್ಧನಾಗಿರಬೇಕಿಲ್ಲ."


ಇದು ಲೆವೆಲರ್ ವಿಚಾರದ ಕಮ್ಯಾಂಡರನೊಬ್ಬ ಸೈನ್ಯ ಮಂಡಳಿಯ ಸಭೆಯಲ್ಲಿ ಸರ್ಕಾರವನ್ನು ಆರಿಸುವ ಮತದಾನದ ಹಕ್ಕು ಯಾರಿಗೆ ಎಂಬ ಬಗ್ಗೆ ಹೇಳಿದ ಮಾತು.

ಆದರೆ ಆ ಸೈನ್ಯದ ಮಹಾ ದಂಡನಾಯಕರಲ್ಲೊಬ್ಬ, ಕ್ರೋಮ್‌ವೆಲ್‌ನ ಅಳಿಯ, ಗ್ರಾಂಡಿಗಳ ಮುಖಂಡನಿಗೆ ಈ ಮಾತು ಬಹಳ ಸಿಟ್ಟು ತರಿಸಿತು' ಇದು ಹೇಗೆ ಸಾಧ್ಯ? ಇದನ್ನು ಬಿಲ್ಕುಲ್ ಒಪ್ಪಲಾಗುವುದಿಲ್ಲ ಎಂದ. ಆ ಗ್ರಾಂಡೀಗಳನ್ನು ಕಾಡಿದ ದೊಡ್ಡ ಪ್ರಶ್ನೆ:

ಪ್ರಕೃತಿ ಸಹಜವಾಗಿ, ದೇವರು ಸೃಷ್ಟಿ ಮಾಡಿದಂತೆ ಎಲ್ಲರೂ ಸಮಾನರು ಎಂದು ನೀವು ಭಾವಿಸುತ್ತೀರಲ್ಲ, ಅದೇ ಪ್ರಕೃತಿ ಸಹಜ ಹಕ್ಕಿನಿಂದ ಅವರನ್ನು ಅವನ ಕಣ್ಣಿಗೆ ಕಾಣುವ ಎಲ್ಲ ವಸ್ತುಗಳಲ್ಲಿ–ಆಹಾರ, ಪಾನೀಯ, ಉಡುಪುಗಳಲ್ಲೂ ಸಮಾನತೆ ಬಯಸಿ ಅವುಗಳನ್ನು ತೆಗೆದುಕೊಂಡು ಬಳಸ ಬಯಸಿದರೆ?

ಮತದಾನದ ಹಕ್ಕು, ಆಸ್ತಿಯ ಹಕ್ಕಿನ ಬಗ್ಗೆ ತಾತ್ವಿಕ ವರ್ಗ ಸಂಘರ್ಷ:

ರಾಜ್ಯ ಎಂದರೆ ಭೂಮಿ–ಒಂದು ಭೌಗೋಳಿಕ ಪ್ರದೇಶ. ರಾಜ ಅದರ ಒಡೆಯ. ಆಡಳಿತ ಮಾಡುವುದೆಂದರೆ ಆ ಭೂಮಿಯನ್ನು ಆಳುವುದು, ಅದನ್ನು ರಕ್ಷಿಸಿಕೊಳ್ಳುವುದು. ಅದನ್ನು ಅವನು ತನ್ನಂತಹ ಹಲವರಿಗೆ ಹಂಚಿಕೊಟ್ಟಿರುತ್ತಾನೆ ಅಥವಾ ತಲೆಮಾರುಗಳ ಕಾಲದಿಂದ ಹಲವರ ಒಡೆತನದಲ್ಲಿರುತ್ತದೆ. ಈಗ ಆಳುವವರನ್ನು ಆಯ್ಕೆ ಮಾಡುವುದೆಂದರೆ ಆ ಭೂಮಿಯನ್ನು ಆಳುವವರನ್ನು, ರಕ್ಷಿಸಿಕೊಳ್ಳುವವರನ್ನು ಆಯ್ಕೆ ಮಾಡುವುದಲ್ಲವೇ? ನೆಲದ ರಕ್ಷಣೆಯ ಬಗ್ಗೆ ಅತ್ಯಂತ ಹೆಚ್ಚು ಆಸಕ್ತಿ, ಹೊಣೆಗಾರಿಕೆ (ಸ್ಟೇಕ್) ಯಾರಿಗಿರುತ್ತದೆ? ಅದರ ಒಡೆಯರಿಗಲ್ಲವೇ? ಆದ್ದರಿಂದ ಯಾರು ನೆಲದ ಒಡೆತನ ಹೊಂದಿದ್ದಾರೋ ಅವರು ಮಾತ್ರ ಆ ರಾಜ್ಯದ ಆಳುವವರನ್ನು ಆಯ್ಕೆ ಮಾಡಲು ಹಕ್ಕುಬಾಧ್ಯರು. ಆದ್ದರಿಂದ ಅವರು ಮಾತ್ರ ಮತದಾರರಾಗಿರಬೇಕು ಎಂಬುದು ಈ ಆಸ್ತಿವಂತರ ತರ್ಕ.


Foundations of Freedom;
OR AN
AGREEMENT
OF THE
PEOPLE:
Proposed as a Rule for future Government in the Establishment of a firm and lasting PEACE.
Drawn up by severall wel-affected Persons, and tendered to the consideration of the Generall Councell of the ARMY.
And now offered to the Consideration of all Persons who are at liberty by Printing or otherwise, to give their Reasons, for, or against it.
Unto which is annexed severall Grievances by some Persons, offered to be inserted in the said Agreement, but adjudged only necessary to be insisted on, as fit to be removed by the next
REPRESENTATIVES.
Publish'd for satisfaction of all honest Interests.
London, Printed for R. Smithurst, 1648.

ಹೀಗೆ ಮತದಾನದ ಹಕ್ಕು ಎಂದರೆ, ಪ್ರಜೆಗಳು ಎಂದರೆ ಭೂ ಒಡೆತನ ಉಳ್ಳವರು. ಅವರು "ಆಸ್ತಿವಂತರಲ್ಲದ ಐದರಲ್ಲಿ ನಾಲ್ಕು ಭಾಗದ ಜನರಿಗೆ ಮತದಾನದ ಹಕ್ಕು ಸಿಕ್ಕರೆ ಆಗ ಅವರು ಆ ಅಧಿಕಾರವನ್ನು ಆಸ್ತಿಯ ಪರಿಕಲ್ಪನೆಯನ್ನು ನಾಶ ಮಾಡಲು ಉಪಯೋಗಿಸುತ್ತಾರೆ" ಎಂದು ಅವರ ಆಸ್ತಿ ಮೋಹ ಮತ್ತು ಭಯವನ್ನು ವ್ಯಕ್ತಪಡಿಸಿದರು.

ಲೆವಲರ್ ದಂಡನಾಯಕ ಈ ಮಾತಿಗೆ "ಓ, ಹಾಗಾದರೆ ಈ ಆಸ್ತಿವಂತ ಒಂದು ಭಾಗ ಆಸ್ತಿಯಿಲ್ಲದ ಐದರಲ್ಲಿ ನಾಲ್ಕು ಭಾಗವನ್ನು ಮರ ಕಡಿಯುವ, ನೀರು ಸೇರುವುದ ಕೂಲಿಗಳಾಗಿ ದುಡಿಸಿಕೊಳ್ಳುವ ಉದ್ದೇಶವೇ? ದೇಶದ ಬಹುದೊಡ್ಡ ಭಾಗವನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದೇ?" ಎಂದು ಪ್ರಶ್ನಿಸಿದರು.

ಮತ್ತೊಬ್ಬ ಲೆವಲರ್ ಸೈನಿಕ, "ಬಹಳ ಕಡಿಮೆ ಆಸ್ತಿ ಅಥವಾ ಆಸ್ತಿಯಿಲ್ಲದ ನಾವು ಹಲವು ಸಾವಿರ ಜನರು ಪ್ರಾಣವನ್ನು ಒತ್ತೆಯಿಟ್ಟು ಹೋರಾಡಿದ್ದೇವೆ. ಹುಟ್ಟಿನಿಂದ ನಾವು ಈ ದೇಶದ ಹಕ್ಕು ಹೊಂದಿದ್ದೇವೆ ಎಂದು ತಿಳಿದುಕೊಂಡಿದ್ದೆವು. ಆದರೆ ಈಗ ನೋಡಿದರೆ ಯಾರಿಗೆ ಆಸ್ತಿಯಿಲ್ಲವೋ ಅವರಿಗೆ ಈ ರಾಜ್ಯದಲ್ಲಿ ಯಾವ ಹಕ್ಕೂ ಇಲ್ಲ ಎಂದು ಹೇಳುತ್ತಿದ್ದೀರಿ. ಹಾಗಾದರೆ ನಮಗೆ ಮೋಸ ಮಾಡಲಾಗಿದೆ" ಎಂದರು. ಹೀಗೆ ಮತದಾನದ ಹಕ್ಕಿನ ಪ್ರಶ್ನೆ ಆಸ್ತಿಯ ಪ್ರಶ್ನೆಯಾಯಿತು. ಅಷ್ಟೇ ಅಲ್ಲ, ವರ್ಗ ಸಂಘರ್ಷದ ವಿಷಯವಾಯಿತು.

ಸೇನೆಯಲ್ಲಿ ಸಂವಿಧಾನ ರಚನೆಯ ಚರ್ಚೆ:

ಇಂತಹ ಎಲ್ಲ ಆಡಳಿತದ ಅಧಿಕಾರದ ರಚನೆಯ ವಿಷಯಗಳು ನಮ್ಮ ದೇಶದಲ್ಲಿ ಚರ್ಚೆಯಾಗಿದ್ದು, ಅವುಗಳ ಬಗ್ಗೆ ತೀರ್ಮಾನಗಳನ್ನು ಮಾಡಿದ್ದು ಅದಕ್ಕಾಗಿಯೇ ವಿಶೇಷವಾಗಿ ಎಲ್ಲ ಪ್ರದೇಶಗಳಿಂದ ಆರಿಸಲಾಗಿದ್ದ ಸದಸ್ಯರುಗಳನ್ನು ಉಳ್ಳ ಸಂವಿಧಾನ ಸಭೆಯಲ್ಲಿ. ಅದರಲ್ಲಿ ವರ್ಷಗಟ್ಟಲೆ ಚರ್ಚೆಗಳು. ಹಲವು ಉಪಸಮಿತಿಗಳು.

ಇದು ಬಹುಮಟ್ಟಿಗೆ ವಿಶ್ವದ ಎಲ್ಲ ದೇಶಗಳ ಪದ್ಧತಿ. ಆದರೆ ಬ್ರಿಟನ್‌ನಲ್ಲಿ ಈ ಚರ್ಚೆಗಳು ಸೇನೆಯಲ್ಲಿ. ಅಲ್ಲಿ ಕೂಡಾ ಈ ಚರ್ಚೆಗಳು 1647 ರ ಅಕ್ಟೋಬರ್ 18 ರಿಂದ ಪ್ರಕ್ರಿಯೆ ಆರಂಭವಾಗಿ ಅದೇ ತಿಂಗಳ 29 ರಿಂದ ನವಂಬರ್ 8 ರವರೆಗೂ ಚರ್ಚೆ ನಡೆಯಿತು. ಅದೂ ಕೂಡಾ ರಾಜನ ವಿರುದ್ಧ ಸೆಣೆಸಿದ ಸಾಮಾನ್ಯ ಸೈನಿಕರು ಹಠ ಹಿಡಿದು ಚರ್ಚೆಗೆ ತಂದದ್ದು. ಸೇನೆಯ ಮಹಾ ದಂಡ ನಾಯಕರು, ಹಲವು ದಂಡನಾಯಕರುಗಳು ಗ್ರಾಂಡೀಗಳು ಎಂದು ಕರೆಯಲ್ಪಡುವವರಿಗೆ ಸುತರಾಂ ಇಷ್ಟವಿಲ್ಲದಿದ್ದರೂ ಅವರು ಒಪ್ಪಿಕೊಳ್ಳಲೇಬೇಕಾಯಿತು.

ಹಿಂದಿನ ಲೇಖನಗಳಲ್ಲಿ ವಿವರಿಸಿದಂತೆ ಲೆವಲರ್ಸ್‌ಗಳ ಪ್ರಜಾಪ್ರಭುತ್ವೀಯ ವಿಚಾರ ಗಳಿಂದ ದುಡಿಯುವ ವರ್ಗಗಳ ಬಹು ದೊಡ್ಡ ಸಂಖ್ಯೆಯ ಸೈನಿಕರು ಪ್ರಭಾವಿತರಾಗಿದ್ದರಲ್ಲ. ಅವರಿಂದ ಆಯ್ಕೆಯಾದ ಪ್ರತಿನಿಧಿಗಳೆಲ್ಲ ಸಹಿ ಮಾಡಿ ಹಲವು ತಿಂಗಳುಗಳಿಂದ ಹೊಸ ಹೊಸ ಮನವಿಗಳನ್ನು ದಂಡನಾಯಕರುಗಳಿಗೆ, ಪಾರ್ಲಿಮೆಂಟ್‌ಗೆ ಸಲ್ಲಿಸುತ್ತಾ ಬಂದಿದ್ದರು.

ಆದರೆ ಅಕ್ಟೋಬರ್ 18 ರಂದು ಮಹಾ ದಂಡನಾಯಕರಿಗೆ ಸಲ್ಲಿಸಿದ ಮನವಿಯಲ್ಲಿದ್ದ ಅಂಶಗಳು ಬಹಳ ಗಂಭೀರವಾಗಿದ್ದವು. ಆದರೆ ಅಷ್ಟು ಮಾತ್ರ ಅಲ್ಲ, ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳಿಗೆ ವಿರುದ್ಧವಾಗಿ ಪಾರ್ಲಿಮೆಂಟ್‌ನ ಬಹುಮತ ಪಡೆದಿದ್ದ ಮಹಾ ಶ್ರೀಮಂತರ ಮಸಲತ್ತುಗಳ ವಿರುದ್ಧವಾಗಿ ಸೈನಿಕರ ಬೆಂಬಲ ಅವರಿಗೆ ಬೇಕಾಗಿತ್ತು. ಆದರೆ ಸೈನಿಕರ ನಡುವೆ ಕ್ರೋಮ್‌ವೆಲ್ ಮೇಲೆ ರಾಜನ ಜೊತೆ ರಾಜಿಯ ಕಾರಣ ವ್ಯಾಪಕ ಸಂಶಯ ಹರಡುತ್ತಿತ್ತು.

ಆದ್ದರಿಂದ ಮನಸ್ಸಿಲ್ಲದಿದ್ದರೂ ಸೈನಿಕರ ಅಭಿಪ್ರಾಯಗಳಿವೆ ಕಿವಿಗೊಡುವಂತೆ ಕಾಣಿಸಿಕೊಳ್ಳಲು ಮತ್ತು ಅವರ ಮೇಲೆ ತನ್ನ ಹಿಡಿತ ಉಳಿಸಿಕೊಳ್ಳಲು ಸೈನ್ಯ ಸಮಿತಿಯಲ್ಲಿ ಈ ಅಂಶಗಳ ಚರ್ಚೆಗೆ ಒಪ್ಪಿದ. ಈ ಚರ್ಚೆಗಾಗಿ ಸೈನಿಕರ ಲೆವಲರ್ಸ್ ಪ್ರತಿನಿಧಿಗಳು ಮತ್ತಷ್ಟು ಸ್ಪಷ್ಟತೆಯಿಂದ ಒಂದು ದಸ್ತಾವೇಜಿನ ಕರಡನ್ನು ತಯಾರಿಸಿದರು. ಅದನ್ನು ಮುದ್ರಿಸಿ ಹಂಚಿದರು.

ಅಗ್ರಿಮೆಂಟ್ ಆಫ್ ಪೀಪಲ್ (ಜನತೆಯ ಒಪ್ಪಂದ) ಎಂಬ ಸಂವಿಧಾನ

ಈ ದಸ್ತಾವೇಜನ್ನು "ಅಗ್ರೀಮೆಂಟ್ ಆಫ್ ಪೀಪಲ್" (ಜನತೆಯ ಒಪ್ಪಂದ) ಎಂದು ಕರೆದಿದ್ದರು. "ವಿ ದ ಪೀಪಲ್ ಆಫ್ ಇಂಡಿಯಾ," "ಭಾರತದ ಜನತೆಯಾದ ನಾವು" ನಮಗೆ ಈ ಸಂವಿಧಾನವನ್ನು ಕೊಟ್ಟುಕೊಂಡದ್ದೇವೆ ಎಂಬ ಭಾರತದ ಸಂವಿಧಾನದ ಪೀಠಿಕೆಯನ್ನು ಈ ಮಾತುಗಳು ನೆನಪಿಸುತ್ತವೆ. ಇಪ್ಪತ್ತನೆಯ ಶತಮಾನದ ನಮ್ಮ ಸಂವಿಧಾನದ ಮಾತುಗಳ ಪಿತಾಮಹ (ಅಜ್ಜ) ಜನತೆಯ ಒಪ್ಪಂದ ಎಂಬ 17ನೆಯ ಶತಮಾನದ ಈ ಮಾತು.

ಜಗತ್ತಿನ ಇತಿಹಾಸದಲ್ಲಿ ಮೊತ್ತ ಮೊದಲು ಕಾಣಿಸಿದ ಈ ಮಾತು ಮುಂದೆ ಒಂದು ಶತಮಾನದ ನಂತರ ಬ್ರಿಟಿಷ್ ವೈಜ್ಞಾನಿಕ ತತ್ವಶಾಸ್ತ್ರಜ್ಞ ಹಾಬ್ಸ್ ಫ್ರೆಂಚ್ ಕ್ರಾಂತಿಯ ಕಾಲದ ತತ್ವಶಾಸ್ತ್ರಜ್ಞ ವಾಲ್ಟರ್ ರೂಸೋರವರಿಂದ ಹೆಚ್ಚು ಪರಿಚಿತವಾಗಿರುವ ಬಹು ಮುಖ್ಯವಾದ ಪರಿಕಲ್ಪನೆ. ಪ್ರಜಾಪ್ರಭುತ್ವದ ಆಧಾರಭೂತವಾದ ಪರಿಕಲ್ಪನೆ (ಗಮನಿಸಿ: ಈ ಒಂದು ಪರಿಕಲ್ಪನೆಯನ್ನು ವಿವರಿಸುವುದಕ್ಕೇ ರೂಸೋ ಒಂದು ಪುಸ್ತಕವನ್ನೇ ಬರೆದರು.) ಜನರು ತಮ್ಮ ನಡುವೆ ಒಂದು ಒಪ್ಪಂದ ಮಾಡಿಕೊಳ್ಳುವ ಮೂಲಕ ಹೊಸ ಆಡಳತಾಧಿಕಾರವನ್ನು ಅಸ್ತಿತ್ವಕ್ಕೆ ತರಬೇಕು. ಇಂತಹ ಒಪ್ಪಂದ ಮಾತ್ರವೇ ಅದಕ್ಕೆ ನೈತಿಕ ಆಧಾರ ಎಂಬುದು ಅದರ ಸಾರ.

ಜನರು ಇಂತಹ ಒಪ್ಪಂದವನ್ನು ರೂಪಿಸಿಕೊಳ್ಳುವ ಅವಶ್ಯಕತೆ ಏನಿದೆ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಲೆವಲರ್ಸ್ ಈ ರೀತಿ ಅದನ್ನು ವಿವರಿಸಿದ್ದಾರೆ:

ಸಾವಿರಾರು ವರ್ಷಗಳಿಂದ ರಾಜ ಪ್ರಭುತ್ವ ಅಸ್ತಿತ್ವದಲ್ಲಿತ್ತು. ಈಗ ಅದನ್ನು ಸೋಲಿಸಲಾಗಿದೆ. ಇದು ಒಬ್ಬ ರಾಜನ ಬದಲಾಗಿ ಮತ್ತೊಬ್ಬ ರಾಜನನ್ನು ತರುವ ಪ್ರಯತ್ನವಲ್ಲ. ರಾಜಾಡಳಿತ ಎಂಬುದೇ ಜನರ ಬದುಕನ್ನು ನಾಶ ಮಾಡುವ ವ್ಯವಸ್ಥೆ. ಅದನ್ನು ಕಿತ್ತೊಗೆಯಬೇಕು ಎನ್ನುವ ಮಹಾ ಸಂಘರ್ಷ.

ರಾಜಪ್ರಭುತ್ವವನ್ನು ಕಿತ್ತೊಗೆದ ಕೂಡಲೇ ಅದಕ್ಕೆ ಮೊದಲಿನ ಜೀವನ ವ್ಯವಸ್ಥೆ, ಪ್ರಕೃತಿ ಸಹಜ ಬದುಕು ಅಸ್ತಿತ್ವಕ್ಕೆ ಮರಳುತ್ತದೆ. ಆ ಪ್ರಕೃತಿ ಸಹಜ ಬದುಕಿನಲ್ಲಿ ಮಾನವರಿಗೆ ಕೆಲವು ಪ್ರಕೃತಿ ದತ್ತವಾದ ಹಕ್ಕುಗಳು ಇದ್ದವು. ಅವು ಮಾನವರ ಮೂಲಭೂತ ಹಕ್ಕುಗಳು. (ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ನೆನಪು ಬಂತೇ! ಅದರ ಮೂಲ ಇಲ್ಲಿದೆ). ಆಗ ಮನುಷ್ಯರು ತಮ್ಮ ಸಮುದಾಯಗಳನ್ನು ಮುನ್ನಡೆಸುವವರನ್ನು ತಾವೇ ಅಯ್ಕೆ ಮಾಡಿಕೊಳ್ಳುತ್ತಿದ್ದರು. ಅಂತಹ ಪ್ರಕೃತಿ ಸಹಜ ಸ್ಥಿತಿಗೆ ನಾವು ಮರಳಬೇಕು ಎಂಬುದು ಲೆವಲರ್ಸ್ ಮುಂದಿಟ್ಟವಾದ.

ರಾಜಪ್ರಭುತ್ವದ ದಬ್ಬಾಳಿಕೆಯಲ್ಲಿ ಮಾನವರ ಈ ಮೂಲಭೂತ ಹಕ್ಕುಗಳು ಇಲ್ಲವಾಗಿದ್ದವು. ಅವು ಮತ್ತೆ ಮಾನವರಿಗೆ ದಕ್ಕುವಂತಹ ಪ್ರಭುತ್ವ ಅಸ್ತಿತ್ವಕ್ಕೆ ತರಬೇಕು. ಈ ಹಕ್ಕುಗಳಲ್ಲಿ ತಮಗೆ ಯಾವ ರೀತಿಯ ಆಡಳಿತ ಬೇಕು, ಯಾರು ಆಡಳಿತ ಮಾಡಬೇಕು ಎಂಬುದನ್ನು ತೀರ್ಮಾನ ಮಾಡುವುದು ಕೂಡಾ ಅಂತಹ ಮೂಲಭೂತ ಹಕ್ಕು. ಆದ್ದರಿಂದ ಅಂತಹ ಒಂದು ರಾಜ್ಯದಲ್ಲಿ ಯಾರೆಲ್ಲ ಒಳಗೊಳ್ಳುವವರೋ ಅವರೆಲ್ಲ ನೀಡುವ ಒಪ್ಪಿಗೆಯ ಮೂಲಕ ಮಾತ್ರ ಅಂತಹ ರಾಜ್ಯದ ಪ್ರಭುತ್ವ ಅಸ್ತಿತ್ವಕ್ಕೆ ಬರಬೇಕು ಎಂಬ ಮೂಲ ತತ್ವವನ್ನು ಲೆವಲರ್ಸ್ ಪ್ರತಿಪಾದಿಸಿದರು.

ಧಾರ್ಮಿಕ ಸ್ವಾತಂತ್ರ್ಯದಿಂದ ಹುಟ್ಟಿದ ಜನತೆಯ ಒಪ್ಪಿಗೆಯ ಪರಿಕಲ್ಪನೆ:

ಬೈಬಲ್ ಅನ್ನು ಜನರ ಭಾಷೆಗೆ ಅನುವಾದ ಮಾಡಿದಾಗ ಅದರಲ್ಲಿ ಇದ್ದ ಸರಳ ಆರಾಧನೆ, ಸಮಾನತೆಯ ತತ್ವಗಳು ಜನರ ತಿಳುವಳಿಕೆಗೆ ಬಂದ ಬಗ್ಗೆ ಹಿಂದಿನ ಲೇಖನಗಳಲ್ಲಿ ವಿವರಿಸಲಾಗಿದೆ. ಆಗ ಜನರು ವೈಭವದ ಚರ್ಚ್‌ಗಳನ್ನು ತಿರಸ್ಕರಿಸಿದರು. ತಾವೇ ಬೈಬಲ್ ಅನ್ನು ಓದಿಕೊಂಡು, ತಾವೇ ಅದರ ವಿವರಣೆ ಮಾಡಿಕೊಳ್ಳುವ ಪಂಥಗಳು ಅಸ್ತಿತ್ವಕ್ಕೆ ಬಂದವು. ತಮ್ಮಲ್ಲೇ ಒಬ್ಬನನ್ನು ಪಾದ್ರಿಯಾಗಿ ಆಯ್ಕೆ ಮಾಡಿಕೊಂಡರು. ತಮ್ಮ ಚರ್ಚ್‌ನ ನಿಯಮಗಳನ್ನು ತಾವೇ ರೂಪಿಸಿಕೊಂಡರು.

ಅಂತಹುದೇ ಪ್ಯುರಿಟನ್ ಪಂಥಕ್ಕೆ ಲೆವಲರ್ಸ್ ಸೇರಿದ್ದರಲ್ಲ. ಜನರು ತಮ್ಮ ಚರ್ಚ್‌ನ ನಿಯಮಗಳನ್ನು ಅದಕ್ಕೆ ಸೇರಿದವರೇ ಒಪ್ಪಿ ರೂಪಿಸಿಕೊಂಡರಲ್ಲ, ಪಾದ್ರಿಯನ್ನೂ ಆಯ್ಕೆ ಮಾಡಿಕೊಂಡರಲ್ಲ. ಇದೇ ತತ್ವ ರಾಜ್ಯದ, ದೇಶದ ಆಡಳಿತವನ್ನು ಜನರ ಒಪ್ಪಿಗೆಯ ಮೇಲೇ ರೂಪುಗೊಳ್ಳಬೇಕೆಂದು ಲೆವಲರ್ಸ್‌ಗಳು ಜನತೆಯ ಒಪ್ಪಂದದ ತತ್ವವನ್ನು ಮುಂದಿಟ್ಟರು. ವೈಭವದ ಪೋಪ್ ಚರ್ಚ್ ವಿರುದ್ಧವಾಗಿ ಜನತೆಯ ಚರ್ಚ್‌ಗಳು ರೂಪುಗೊಂಡ ಕಾಲದಿಂದ ಈ ತತ್ವ ಜನರ ಮನಸ್ಸಿನಲ್ಲಿ ಹಬ್ಬಿತ್ತು.

ಲೆವಲರ್ಸ್‌ಗಳು ಈ "ಜನತೆಯ ಒಪ್ಪಂದ" ಮುಂದಿಡುವ ಮೂಲಕ ಮನುಷ್ಯರ ಈ ಮೂಲಭೂತ ಹಕ್ಕುಗಳು ಆಗಿಂದಾಗ್ಗೆ ಬರುವ ಹೋಗುವ ಪಾರ್ಲಿಮೆಂಟ್‌ಗಳು ಬದಲಾಯಿಸುವಂತದ್ದಲ್ಲ. ಪ್ರಕೃತಿ ಸಹಜ ಮೂಲಭೂತ ಹಕ್ಕುಗಳು ಎಂದು ಪ್ರತಿಪಾದಿಸಿದರು. ಒಂದು ಪ್ರಭುತ್ವದ ಅಡಿಪಾಯವಾದ ದಾಖಲೆಯಾಗಿ, ಅದರ ಸಂವಿಧಾನದ ಪರಿಕಲ್ಪನೆ ಮೂಡಿತು.

ಸಂಪಾದಕೀಯ

ಕರಾವಳಿ: ಕೋಮುವಾದ ನಿಗ್ರಹದಲ್ಲಿ ಕಾಂಗ್ರೆಸ್ ನ ಬದ್ಧತೆ ಎಷ್ಟು?

ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಅದರ ನೇತೃತ್ವದ ಸರ್ಕಾರವು ಅಲ್ಲಿನ ಸರಣಿ ಹತ್ಯೆಗಳು, ಹಿಂಸಾಕಾಂಡವನ್ನು ತಡೆಯಲು ಮತ್ತು ಶಾಂತಿ, 'ಸೌಹಾರ್ದತೆ'ಯನ್ನು ನೆಲೆಗೊಳಿಸಲು ಮಾಡುತ್ತಿರುವ ಕಸರತ್ತುಗಳು 'ಊರು ಕೊಳ್ಳೆ ಹೋದ ಮೇಲೆ ಗೌಡ ದಿಡ್ಡಿ ಬಾಗಿಲು ಹಾಕಿಸಿದ' ಎನ್ನುವ ಗಾದೆ ಮಾತನ್ನು ನೆನಪಿಸುತ್ತವೆ. ಕಾಂಗ್ರೆಸ್ ಸರ್ಕಾರ ತನ್ನ ಎರಡು ವರ್ಷಗಳ ಸಾಧನೆಯ ಸಮಾವೇಶ ನಡೆಸುತ್ತಿರುವಾಗಲೇ ಕರಾವಳಿಯಲ್ಲಿ ಕೋಮು ದ್ವೇಷದ ಕಿಚ್ಚು ಹೊತ್ತಿಸಿ ಸಂಘಪರಿವಾರ ಸವಾಲು ಒಡ್ಡಿತು. ಕಗ್ಗೊಲೆಗಳ ಸರಣಿಯನ್ನೇ ಆರಂಭಿಸಿತು. ಮುಖ್ಯಮಂತ್ರಿ ಕೆಲವು ಸಚಿವರು ಮತ್ತು ಇತರೆ ಒಂದೆರಡು ನಾಯಕರು ಕೋಮುವಾದಿಗಳ ವಿರುದ್ಧ ಎಷ್ಟೇ ಅಬ್ಬರಿಸಿದರೂ ಕಾಂಗ್ರೆಸ್ ಪಕ್ಷದ ಸೆಕ್ಯುಲರ್ ಸತ್ವ ಪರೀಕ್ಷೆಗೆ ಒಳಗಾದವು. ಅದರ ನೇತೃತ್ವದ ಸರ್ಕಾರಿ ಆಡಳಿತ, ಉಸ್ತುವಾರಿ ಸಚಿವರನ್ನೂ ಒಳಗೊಂಡು ಅಲ್ಲಿನ ರಾಜಕೀಯ ನಾಯಕತ್ವದ ನಿಷ್ಕ್ರಿಯತೆ ಹಾಗೂ ವೈಫಲ್ಯಗಳು ಜಗಜ್ಜಾಹೀರಾದವು. ಉನ್ನತ ಮಟ್ಟದಿಂದ ಹಿಡಿದು ಪೊಲೀಸ್ ಇಲಾಖೆ ಮತ್ತು ಆಡಳಿತದ ವರ್ತನೆ, ಕ್ರಮಗಳು ಕಣ್ಣೊರೆಸುವ ಕ್ರಮಗಳಾಗಿದ್ದವು. ಹಿಂಸಾದಾಹಿ ಕೋಮುವಾದಿಗಳೊಂದಿಗೆ ಕಾಂಗ್ರೆಸ್ ಪಕ್ಷದ ಮೃದುತ್ವ, ಶಾಮೀಲುತನಗಳು ಸಾರ್ವಜನಿಕರಲ್ಲಿ ಉಂಟು ಮಾಡಿದ ಆಕ್ರೋಶ, ಸಿಪಿಐ(ಎಂ) ಮತ್ತು ಜಾತ್ಯಾತೀತ ಶಕ್ತಿಗಳ ನಿರಂತರ ಒತ್ತಡ, ಸ್ವತಃ ಕಾಂಗ್ರೆಸ್ ಪಕ್ಷವನ್ನು ಸದಾ ಬೆಂಬಲಿಸಿಕೊಂಡು ಬಂದಿದ್ದ ಅಲ್ಪಸಂಖ್ಯಾತರ ಬಹಿರಂಗ ಬಂಡಾಯ ನಂತರವೇ ಕೆಲವು ಕ್ರಮಗಳಿಗೆ ಸರಕಾರ ಮುಂದಾಯಿತು ಎನ್ನುವುದನ್ನು ಗಮನಿಸಬೇಕು. ಸೆಕ್ಯುಲರ್ ಎಂದು ಹೇಳಿಕೊಳ್ಳುವ ಹಲವು ಪಕ್ಷಗಳ ಬಗ್ಗೆ ಮತ್ತೆ ಎದ್ದು ಬರುವ ಪ್ರಶ್ನೆ ಎಂದರೆ ಸೆಕ್ಯುಲರ್ ಎನ್ನುವುದು ಬೈ ಕನ್ವಿಕ್ಷನ್ ಆರ್ ಕನ್ವೀನಿಯಂಟ್–ಬದ್ಧತೆಯಿಂದಲೋ ಅಥವಾ ಸಂದರ್ಭ ಸಾಧಕದಿಂದಲೋ ಎನ್ನುವುದು ಕಾಂಗ್ರೆಸ್ಸಿಗೂ ಹೆಚ್ಚಾಗಿ ಅನ್ವಯವಾಗುತ್ತದೆ. ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳ ಧ್ವನಿಯನ್ನು ಅಡಗಿಸುತ್ತೇವೆ ಎಂದು ಈಗ ಕ್ರಮ ಕೈಗೊಳ್ಳುತ್ತಿರುವ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ಈ ಅಂಶಗಳನ್ನು ಆಳವಾಗಿ ವಿಮರ್ಶಿಸಿಕೊಳ್ಳಬೇಕಾಗುತ್ತದೆ.

ಕೋಮು ದ್ವೇಷದ ಹಿಂಸಕಾಂಡ ತಾರಕಕ್ಕೆ ಏರುತ್ತಿದೆ ಎನ್ನುವಾಗ ಆಡಳಿತವನ್ನು ಬಿಗಿಗೊಳಿಸುವ ಕ್ರಮಗಳನ್ನು ಕೈಗೊಂಡಿರುವುದು ಸಹ ಮುಖ್ಯ ಇವೆ. ಕೋಮುವಾದಿಗಳ ಅಟ್ಟಹಾಸಕ್ಕೆ ಅವಕಾಶ ನೀಡಿ ಸಹಕರಿಸಿದ ಉನ್ನತ ಸ್ಥಾನಗಳಲ್ಲಿ ಇದ್ದ ಪೊಲೀಸ್ ಅಧಿಕಾರಿಗಳನ್ನು ಬದಲಾಯಿಸಿತು. ಅಸಹಾಯಕತೆ ಮತ್ತು ಅಸಮರ್ಥತೆಯನ್ನು ಪ್ರದರ್ಶಿಸುತ್ತಿದ್ದ ಗೃಹ ಮಂತ್ರಿಗಳು ಸ್ವಲ್ಪ ಗಟ್ಟಿದನಿಯಲ್ಲಿ ಮಾತನಾಡ ತೊಡಗಿದರು. ಗೃಹ ಇಲಾಖೆ ದೇಶದಲ್ಲೇ 'ಪ್ರಥಮ' ಎನ್ನುವ ಕೋಮು ನಿಗ್ರಹ ಪಡೆಯೊಂದನ್ನು ರಚಿಸಿತು. ಕೋಮುವಾದಿ ಮತ್ತು ಮತೀಯ ಮೂಲಭೂತವಾದಿ ಶಕ್ತಿಗಳ ಮೇಲೆ ಕ್ರಮ ಜರುಗಿಸುವ ಹೆಜ್ಜೆಯಾಗಿ ಹಲವರನ್ನು ಗಡಿಪಾರು ಮಾಡಿತು. ಕೋಮು ದ್ವೇಷ ವಿಸ್ತರಿಸುವ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾ ಮತ್ತು ನಿಯಂತ್ರಣಕ್ಕೆ ಮುಂದಾಯಿತು. ಆಕ್ರೋಶಿತ ಸಾರ್ವಜನಿಕರನ್ನು ಮತ್ತು ಸ್ವಪಕ್ಷೀಯರನ್ನು ಸಾಂತ್ವನ ಗೊಳಿಸಲು ಕೋಮುವಾದಿ ಶಕ್ತಿಗಳ ವಿರುದ್ಧ ಕಠಿಣ ಮಾತುಗಳನ್ನು ಆಡುತ್ತಿರುವ ಶಾಸಕ ಬಿ.ಕೆ. ಹರಿಪ್ರಸಾದ್ ರವರ ಸಮ್ಮುಖದಲ್ಲಿ 'ಸಮಾನ ಮನಸ್ಕರ' ಸಭೆ ನಡೆಸಿ ಆಹವಾಲುಗಳನ್ನು ಸ್ವೀಕರಿಸಿತು. ರಾಜ್ಯಸಭೆಯ ಸದಸ್ಯ ನಾಸೀರ್ ಹುಸೇನ್ ರವರ ನೇತೃತ್ವದಲ್ಲಿ ಸತ್ಯಶೋಧನಾ ಸಮಿತಿಯೊಂದು ಕರಾವಳಿಯಲ್ಲಿನ ಕೋಮು ಸ್ಥಿತಿ ಮತ್ತು ಅದನ್ನು ಎದುರಿಸುವ ಕುರಿತಾದಂತೆ ಒಂದು ಕಾನ್ಫಿಡೆನ್ಷಿಯಲ್ ವರದಿಯನ್ನು ಕೆಪಿಸಿಸಿಗೆ ಅಧ್ಯಕ್ಷರಿಗೆ ನೀಡಿದೆ.

ಕೋಮುವಾದಿ ಮತ್ತು ಮತಿಯ ಮೂಲಭೂತವಾದಿ ವ್ಯಕ್ತಿಗಳ, ಶಕ್ತಿಗಳ ಅಟ್ಟಹಾಸವನ್ನು ಮಟ್ಟ ಹಾಕಲು ಆಡಳಿತಾತ್ಮಕ ಮತ್ತು ರಾಜಕೀಯ ಸಾಮಾಜಿಕ ಕ್ರಿಯಾಶೀಲ ಕಾರ್ಯ ಯೋಜನೆ ಬಹಳ ಮುಖ್ಯ ಎನ್ನುವುದು ನಿಜ. ಆ ದೆಸೆಯಲ್ಲಿ ಕೈಗೊಂಡಿರುವ ಕ್ರಮಗಳು ಸ್ವಾಗತಾರ್ಹ. ಆದರೆ ಕಾಂಗ್ರೆಸ್ ಪಕ್ಷದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಚಿಂತನೆಗಳು ಮತ್ತು ಕ್ರಮಗಳ ಅನುಭವಗಳನ್ನು ಗಮನಿಸಿದರೆ ಇವೆಲ್ಲವೂ ಎಷ್ಟು ಕಾಲ ಬಿಗಿಯಾಗಿ ಜಾರಿಯಾಗುತ್ತವೆ ಎನ್ನುವ ಪ್ರಶ್ನೆ ಎದ್ದು ಬರುತ್ತದೆ. ಸರ್ಕಾರದಲ್ಲಿ ಮುಖ್ಯಸ್ಥಾನಗಳಲ್ಲಿರುವ ಅವರಲ್ಲಿಯೇ ಕೆಲವರು ಕೋಮುವಾದದ ವಿರುದ್ಧವಾಗಿ ಮಾತನಾಡುತ್ತಿದ್ದರೆ ಇನ್ನೂ ಕೆಲವರು ಕಡು ಕೋಮುವಾದಿಗಳ ಬೆನ್ನೆಲುಬಾಗಿರುವ ಪಾಳೇಗಾರಿ ಧರ್ಮಧಾರಿಗಳನ್ನು, ಮತೀಯವಾದಿ, ಸಾಮಾಜಿಕ ನ್ಯಾಯದ ವಿರೋಧಿಗಳನ್ನು ಬೆಂಬಲಿಸುವ, ಅವರ ವಿರುದ್ಧದ ಪ್ರತಿರೋಧಕ್ಕೆ ಸಾಂತ್ವನ ಹೇಳುವ ಕೆಲವರು ಇದ್ದಾರೆ ಎನ್ನುವುದು ಅತ್ಯಂತ ವಿಪರ್ಯಾಸದ ಸ್ಥಿತಿ. ಅಧಿಕಾರ ಕೇಂದ್ರಿತ ರಾಜಕಾರಣದಲ್ಲಿ ಈ ಅಂತರ್ ವೈರುದ್ಯಗಳನ್ನು ನಿವಾರಿಸಿಕೊಳ್ಳದ ಆದರೆ ನಿಭಾಯಿಸಲೇ ಬೇಕಾದ ಒತ್ತಡದಲ್ಲಿರುವ ಕಾಂಗ್ರೆಸ್ ಸರ್ಕಾರ ಎಷ್ಟರಮಟ್ಟಿಗೆ ದೃಢವಾಗಿ ತನ್ನ ಕ್ರಮಗಳನ್ನು ಮುಂದುವರಿಸುತ್ತದೆ ಎನ್ನುವ ಪ್ರಶ್ನೆ, ಸದಾ ಕಾಲ ಇದ್ದದ್ದೇ ಆಗಿದೆ.

ಸರಕಾರದ ಕ್ರಮಗಳನ್ನು ಸ್ವಾಗತಿಸುವಾಗಲೇ ಪೊಲೀಸ್ ಇಲಾಖೆ ಬಹು ಎಚ್ಚರದಿಂದ ಹೆಜ್ಜೆ ಇಡಬೇಕಿದೆ. ಶಾಂತಿ, ಸೌಹಾರ್ದತೆಯನ್ನು ಕಾಪಾಡುವ ಶಕ್ತಿಗಳು ಯಾವುವು? ಕದಡುವ ಶಕ್ತಿಗಳು ಯಾವುವು ಎನ್ನುವುದನ್ನು ಸ್ಪಷ್ಟವಾಗಿ ವಿಂಗಡಿಸಿಕೊಳ್ಳಬೇಕಿದೆ. ಇಲ್ಲವಾದಲ್ಲಿ ಅವರ ಅತಿರೇಕದ ಕ್ರಮಗಳು ಆತಂಕಕಾರಿ ಮತ್ತು ಅಪಾಯದ ಸೂಚನೆಯನ್ನು ನೀಡುತ್ತವೆ. ಪೊಲೀಸ್ ಇಲಾಖೆಯ ವಿಳಂಬ ಮತ್ತು ವೈಫಲ್ಯಗಳ ಬಗ್ಗೆ ಪ್ರಶ್ನಿಸಿದ ಸಜಿತ್ ಶೆಟ್ಟಿ ಎಂಬ ಸಾಮಾಜಿಕ ಕಾರ್ಯಕರ್ತನಿಗೆ ನೀಡುತ್ತಿರುವ ಕಿರುಕುಳ, ಹಾಕಿರುವ ಬೆದರಿಕೆಗಳು ಕೋಮುವಾದಿ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸುವ, ದಮನಿಸುವ ಕಾರ್ಯವನ್ನು ದುರ್ಬಲಗೊಳಿಸುತ್ತವೆ. ಸರಕಾರಿ ಆಡಳಿತವು ಶಾಂತಿ ಸೌಹಾರ್ದತೆಗೆ ಬದ್ಧವಾಗಿರುವವರನ್ನೇ ದಮನಿಸಲು ಅಧಿಕಾರದ ದಂಡ ಪ್ರಯೋಗಿಸುತ್ತಿರುವುದು ಖಂಡನೀಯ. ಶಾಂತಿ ಸೌಹಾರ್ದತೆಗಾಗಿ ಶ್ರಮಿಸುತ್ತಿರುವ ಮತ್ತು ವಸ್ತುನಿಷ್ಠ ವಿಮರ್ಶಿಸುವ ಶಕ್ತಿಗಳಿಗೆ ಮುಕ್ತ ಅವಕಾಶ ಕಲ್ಪಿಸದೇ, ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಸದಾವಕಾಶ ಎಂದು ಭಾವಿಸದೇ ಅಂತಹ ಶಕ್ತಿಗಳ ದಮನಕ್ಕೆ ಮುಂದಾಗುತ್ತಿರುವುದು ಕಾಂಗ್ರೆಸ್ ಸರ್ಕಾರದ ಸೋಗಲಾಡಿತನಕ್ಕೆ ಸಾಕ್ಷಿಯಾಗಿದೆ. ಒಂದು ಸ್ಪಷ್ಟ ರಾಜಕೀಯ, ಆಡಳಿತಾತ್ಮಕ ಸೂಚನೆಗಳನ್ನೇ ನೀಡದೇ ಸರ್ಕಾರ ವರ್ತಿಸುತ್ತಿದೆಯೇ? ಇಂತಹ ನಡೆಗಳು ಕರಾವಳಿಯಲ್ಲಿ ಶಾಂತಿ ಕಾಪಾಡುವ ಅದರ ಬದ್ಧತೆಯನ್ನೇ ಪ್ರಶ್ನಿಸುವಂತೆ ಮಾಡುತ್ತವೆ. ಮುಖ್ಯಮಂತ್ರಿ, ಗೃಹ ಸಚಿವರು ಇದರತ್ತ ತೀವ್ರ ಗಮನ ಹರಿಸಬೇಕು.

ಪುಟ 4 ಕ್ಕೆ



ಇರಾನ್ ಮೇಲೆ ಅಮೆರಿಕದ ಬಾಂಬ್ ದಾಳಿ: ಐದು ಎಡಪಕ್ಷಗಳ ಖಂಡನೆ

ಪಶ್ಚಿಮ ಏಷ್ಯಾದ ಮೇಲೆ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಮತ್ತೆ ಸ್ಥಾಪಿಸುವುದು ನಿಜ ಉದ್ದೇಶ

ಅಮೆರಿಕ ಸಂಯುಕ್ತ ಸಂಸ್ಥಾನವು ಇರಾನ್ ಮೇಲೆ ಬಾಂಬ್ ದಾಳಿ ನಡೆಸಿರುವುದನ್ನು ದೇಶದ ಐದು ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಇದು ಇರಾನಿನ ಸಾರ್ವಭೌಮತ್ವ ಮತ್ತು ವಿಶ್ವಸಂಸ್ಥೆಯ ಸನ್ನದಿನ(ಚಾರ್ಟರ್‌ನ) ಗಂಭೀರ ಉಲ್ಲಂಘನೆಯಾಗಿದ್ದು, ಜಗತ್ತಿನಾದ್ಯಂತ ಉದ್ವಿಗ್ನತೆಯನ್ನು ಹೆಚ್ಚಿಸುತ್ತದೆ, ಪಶ್ಚಿಮ ಏಷ್ಯಾವನ್ನು ಅಸ್ಥಿರಗೊಳಿಸುತ್ತದೆ ಮತ್ತು ತೀವ್ರ ಆರ್ಥಿಕ ದುಷ್ಪರಿಣಾಮಗಳನ್ನು ಬೀರುತ್ತದೆ ಎಂದು ಅವು ಹೇಳಿವೆ.

ಇರಾನ್ ಇನ್ನೇನು ಪರಮಾಣು ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸಲಿದೆ ಎನ್ನುತ್ತ ಅಮೆರಿಕ ಮತ್ತು ಇಸ್ರೇಲ್ ತಮ್ಮ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಿವೆ. ಆದರೆ, ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (IAEA)ಯ ಮಹಾನಿರ್ದೇಶಕ ರಾಫೆಲ್ ಗ್ರೋಸಿ ಜೂನ್ 19 ರಂದು "ಪರಮಾಣು ಶಸ್ತ್ರಾಸ್ತ್ರದತ್ತ ಚಲಿಸುವ ಒಂದು ವ್ಯವಸ್ಥಿತ ಪ್ರಯತ್ನದ ಬಗ್ಗೆ ನಮಗೆ ಯಾವುದೇ ಪುರಾವೆಯೂ ಇರಲಿಲ್ಲ" ಎಂದು ಹೇಳಿರುವುದನ್ನು ಗಮನಿಸುವುದು ಮುಖ್ಯ. ಇರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಸೂಚಿಸುವ ನಿರ್ಣಾಯಕ ಪುರಾವೆಗಳನ್ನು ತಾವು ಹೊಂದಿಲ್ಲ ಎಂದು ಅಮೆರಿಕದ ಗುಪ್ತಚರ ಸಂಸ್ಥೆಗಳು ಸಹ ಒಪ್ಪಿಕೊಂಡಿವೆ. ಇದಲ್ಲದೆ, ಇರಾನ್ ಈಗಲೂ ಪರಮಾಣು ಅಪ್ರಸರಣ ಒಪ್ಪಂದಕ್ಕೆ (NPT) ಸಹಿದಾರನಾಗಿಯೇ ಇದೆ ಎಂಬ ಸಂಗತಿಯತ್ತ ಎಡಪಕ್ಷಗಳು ಗಮನ ಸೆಳೆದಿವೆ.

ಈ ಎಲ್ಲ ಸಂಗತಿಗಳ ಹೊರತಾಗಿಯೂ, ಇರಾನ್ ಮತ್ತು ಅಮೆರಿಕ ನಡುವಿನ ಯಾವುದೇ ಸಂಭಾವ್ಯ ಮಾತುಕತೆಗಳನ್ನು ಹಾಳುಮಾಡಲು ಇಸ್ರೇಲ್ ಜೂನ್ 12 ರಂದು ಇರಾನ್ ಮೇಲೆ ದಾಳಿ ನಡೆಸಿತು. ಈಗ, ಅಧ್ಯಕ್ಷ ಟ್ರಂಪ್ ಮಾತುಕತೆಗೆ ಎರಡು ವಾರಗಳ ಕಾಲಾವಕಾಶ ನೀಡಿದ್ದರೂ ಸಹ, ಯುಎಸ್ ಈ ಆಕ್ರಮಣಕಾರಿ ಕೃತ್ಯದಲ್ಲಿ ಇಸ್ರೇಲ್ ಜೊತೆ ಸೇರಿಕೊಂಡಿದೆ, ತಮ್ಮದೇ ಆದ ಗುಪ್ತಚರ ವಿಶ್ಲೇಷಣೆಗಳನ್ನು ಅಥವಾ ಯಾವುದೇ ರಾಜತಾಂತ್ರಿಕ ಪ್ರಕ್ರಿಯೆಯ ಬಗ್ಗೆ ಗಮನವನ್ನೇ ಹರಿಸದೆ, ಇರಾನ್ ಮತ್ತು ಇಡೀ ಪಶ್ಚಿಮ ಏಷ್ಯಾ ಪ್ರದೇಶದ ಮೇಲೆ ಯುದ್ಧ ಹೇರುವುದೇ ಅಮೆರಿಕ–ಇಸ್ರೇಲ್ ಅಕ್ಷದ ಉದ್ದೇಶ ಎಂಬುದನ್ನು ಸ್ಪಷ್ಟವಾಗಿ ಇದು ತೋರಿಸುತ್ತದೆ. ಇರಾನನ್ನು ನಾಶಪಡಿಸುವುದು ಮತ್ತು ಪಶ್ಚಿಮ ಏಷ್ಯಾದ ಮೇಲೆ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಸ್ಥಾಪಿಸುವುದು ಮತ್ತು ಸಂಪನ್ಮೂಲಗಳ ಜಾಗತಿಕ ಹರಿವನ್ನು ನಿಯಂತ್ರಿಸುವುದೇ ನಿಜವಾದ ಉದ್ದೇಶವಾಗಿದೆ ಎಂಬುದು ಸ್ವಯಂವೇದ್ಯ. ಈ ದಾಳಿಯು ಮಿಲಿಟರಿ–ಕೈಗಾರಿಕಾ ಸಂಕೀರ್ಣದ ಹಿತಾಸಕ್ತಿಗಳನ್ನು ಪೂರೈಸುವ ಮತ್ತು ಅಂತರರಾಷ್ಟ್ರೀಯ ಬಂಡವಾಳವು ದೀರ್ಘಕಾಲದಿಂದಿರುವ ತನ್ನ ಬಿಕ್ಕಟ್ಟಿನಿಂದ ಹೊರಬರಲು ಅನುವು ಮಾಡಿಕೊಳ್ಳುವ ಗುರಿಯನ್ನು ಹೊಂದಿದೆ ಎಂದು ಎಡಪಕ್ಷಗಳು ಅಭಿಪ್ರಾಯ ಪಟ್ಟಿವೆ.

ಅಮೆರಿಕವು ಇರಾನ್ ಮೇಲೆ ಬಂಕರ್‌ಗಳನ್ನು ಧ್ವಂಸಗೊಳಿಸುವ ಬಾಂಬ್‌ಗಳನ್ನು ಬೀಳಿಸಲು ಬಿ–2 ಸ್ಟೆಲ್ತ್ ಬಾಂಬರ್‌ಗಳನ್ನು ನಿಯೋಜಿಸಿ ಇರಾಕ್ ಮೇಲೆ ಈ ಹಿಂದೆ ನಡೆಸಿದ ಆಕ್ರಮಣದ ಮರುಪ್ರದರ್ಶನ ಕೊಟ್ಟಿದೆ, ಇರಾಕ್ ಮೇಲೆಯೂ ಹೀಗೆಯೇ ಪರಿಶೀಲನೆಗೇ ಒಳಪಡಿಸದ ದಾವೆಗಳ ಮೇಲೆ ದಾಳಿ ನಡೆಸಲಾಗಿತ್ತು, ಈ ದಾವೆಗಳು ಸುಳ್ಳು ಎಂದು ನಂತರ ಸಾಬೀತಾಯಿತು. ಎರಡನೇ ಮಹಾಯುದ್ಧದ ಕೊನೆಯಲ್ಲಿ ಜಪಾನ್ ಮಾತುಕತೆಗೆ ಸಿದ್ಧವಾಗಿದ್ದರೂ ಸಹ, ಪರಮಾಣು ಶಸ್ತ್ರಾಸ್ತ್ರವನ್ನು ಬಳಸಿದ ಏಕೈಕ ದೇಶವಾದ ಅಮೆರಿಕವು ಈಗ ಪರಮಾಣು ಶಸ್ತ್ರಾಸ್ತ್ರಗಳ ಬೆದರಿಕೆಯ ಬಗ್ಗೆ ಮಾತನಾಡುತ್ತಿರುವುದು ವಿಪರ್ಯಾಸ ಎಂದಿರುವ ಎಡಪಕ್ಷಗಳು ಅಮೆರಿಕದ ದಾಳಿಯು ಸಂಘರ್ಷವನ್ನು ತೀವ್ರವಾಗಿ ಹೆಚ್ಚಿಸುವ ಸಾಧ್ಯತೆಯಿದೆ ಎಂಬ ಭೀತಿಯನ್ನು ವ್ಯಕ್ತಪಡಿಸಿವೆ. ಇದು ಜಾಗತಿಕ ಶಾಂತಿ ಮತ್ತು ಜನಸಾಮಾನ್ಯರರ ಜೀವನೋಪಾಯಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತದೆ ಎಂದು ಅವು ಎಚ್ಚರಿಸಿವೆ. ವಿಶೇಷವಾಗಿ, ಇದು ತೈಲ ಆಮದು ಮತ್ತು ವಲಸೆ ಕಾರ್ಮಿಕರಿಗೆ ಅವಕಾಶಗಳಿಗಾಗಿ ಪಶ್ಚಿಮ ಏಷ್ಯಾವನ್ನು ಹೆಚ್ಚು ಅವಲಂಬಿಸಿರುವ ಭಾರತದಂತಹ ದೇಶಗಳ ಮೇಲೆ ದುಷ್ಪರಿಣಾಮ ಬೀರಲಿವೆ. ಯುದ್ಧದ ಆರ್ಥಿಕ ಪರಿಣಾಮಗಳು ಬಹಳ ಹೆಚ್ಚು ತಟ್ಟುವುದು ಈಗಾಗಲೇ ಹೊರೆಹೊತ್ತಿರುವ ದುಡಿಯುವ ಜನಸಾಮಾನ್ಯರನ್ನು ಎಂದು ಹೇಳಿರುವ ಎಡಪಕ್ಷಗಳು ಭಾರತ ಸರ್ಕಾರವು ತನ್ನ ಅಮೆರಿಕ ಪರ, ಇಸ್ರೇಲ್ ಪರ ವಿದೇಶಾಂಗ ನೀತಿ ನಿಲುವನ್ನು ತಕ್ಷಣವೇ ತ್ಯಜಿಸಿ ಯುದ್ಧವನ್ನು ನಿಲ್ಲಿಸುವ ಜಾಗತಿಕ ಪ್ರಯತ್ನಗಳೊಂದಿಗೆ ಕೈಜೋಡಿಸಬೇಕು ಎಂದು ಆಗ್ರಹಿಸಿರುವ ಎಡಪಕ್ಷಗಳು ಈ ಸಾಮ್ರಾಜ್ಯಶಾಹಿ ಆಕ್ರಮಣದ ಕೃತ್ಯದ ವಿರುದ್ಧ ಪ್ರತಿಭಟನಾ ಕ್ರಮಗಳನ್ನು ತಕ್ಷಣವೇ ಸಂಘಟಿಸಲು ತಮ್ಮ ಎಲ್ಲಾ ಘಟಕಗಳಿಗೆ ಕರೆ ನೀಡಿವೆ ಮತ್ತು ನಮ್ಮ ದೇಶದ ಎಲ್ಲಾ ಶಾಂತಿಪ್ರಿಯ ಜನರು ಅಮೆರಿಕದ ದಾಳಿಯನ್ನು ಖಂಡಿಸಲು ಎಡಪಕ್ಷಗಳೊಂದಿಗೆ ಕೈಜೋಡಿಸಬೇಕು ಎಂದು ಬಹು ಕಳಕಳಿಯಿಂದ ಕೋರಿವೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಸಿಪಿಐ(ಎಂ–ಎಲ್ ಲಿಬರೇಶನ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ಹಾಗೂ ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇವರಾಜನ್ ಈ ಜಂಟಿ ಹೇಳಿಕೆಗೆ ಸಹಿ ಮಾಡಿದ್ದಾರೆ.

ಲೆವಲರ್ಸ್ ಸಂವಿಧಾನದಲ್ಲಿ ನಿರೂಪಿಸಿದ ಮೂಲಭೂತ ಹಕ್ಕುಗಳು: (1647 ರ ಅಕ್ಟೋಬರ್ ನಲ್ಲಿನ ಕರಡು)

* ಮೊತ್ತ ಮೊದಲು ರಾಜ ನೇಮಿತ ಪ್ರಾದೇಶಿಕ ಶ್ರೀಮಂತರನ್ನು ಒಳಗೊಂಡ ಪಾರ್ಲಿಮೆಂಟ್ ರದ್ದಾಗಬೇಕು.
* ಎರಡು ವರ್ಷಕ್ಕೊಮ್ಮೆ ಜನರು ಪಾರ್ಲಿಮೆಂಟ್ ಪ್ರತಿನಿಧಿಗಳನ್ನು ನಿರ್ದಿಷ್ಟ ತಿಂಗಳಲ್ಲಿ ಅಯ್ಕೆ ಮಾಡಬೇಕು. ಈ ಪಾರ್ಲಿಮೆಂಟ್ ವರ್ಷಕ್ಕೆ ಎರಡು ಬಾರಿ ಸಭೆ ಸೇರಬೇಕು. ನಾಲ್ಕು ತಿಂಗಳ ಕಾಲ ಚರ್ಚೆ ನಡೆಸಬೇಕು. (ರಾಜನ ಕಾಲಸ ಪಾರ್ಲಿಮೆಂಟ್ ರಾಜ ಕರೆದಾಗ ಮಾತ್ರ ಸೇರಬೇಕು. ಕೆಲವೇ ದಿನಗಳ ಕಾಲ ಮಾತ್ರ ಸೇರಿದ್ದರೂ ರಾಜ ಬರಖಾಸ್ತು ಮಾಡಿದರೆ ಬಂದ್ ಎಂಬ ಪದ್ಧತಿಯ ಬದಲಾದ ಸೂಚನೆ)
* ಪಾರ್ಲಿಮೆಂಟ್ ಪ್ರತಿನಿಧಿಗಳು ಸರಿಸುಮಾರು ಸಮನಾದ ಜನಸಂಖ್ಯೆಯ ಕ್ಷೇತ್ರದಿಂದ ಆಯ್ಕೆಯಾಗಬೇಕು.
* ಪಾರ್ಲಿಮೆಂಟಿನ ಅಧಿಕಾರಗಳು:

(ರಾಜರುಗಳು ತಮ್ಮ ಸ್ವೇಚ್ಛೆಯಿಂದ ಚಲಾಯಿಸುತ್ತಿದ್ದ ಅಧಿಕಾರವನ್ನೆಲ್ಲ ಪಾರ್ಲಿಮೆಂಟ್‌ಗೆ ವರ್ಗಾಯಿಸುವ ದೃಷ್ಟಿಯಿಂದ ಈ ಅಂಶಗಳನ್ನು ಒತ್ತಿ ಹೇಳಲಾಗಿದೆ)

1) ಪಾರ್ಲಿಮೆಂಟ್ ಅನ್ನು ಆರಿಸಿದ ಜನತೆಯ ಅಧಿಕಾರ ಮಾತ್ರ ಪಾರ್ಲಿಮೆಂಟ್‌ನ ಅಧಿಕಾರಕ್ಕಿಂತ ಹೆಚ್ಚಿನದು.
2) ಜನರ ಅಧಿಕಾರ ಬಿಟ್ಟರೆ ಬೇರೆ ಯಾವುದಕ್ಕೂ ಅದಕ್ಕಿಂತ ಹೆಚ್ಚಿನ ಅಧಿಕಾರವಿಲ್ಲ.
3) ಎಲ್ಲ ಕಾನೂನುಗಳನ್ನು ಮಾಡುವುದು, ಮಾರ್ಪಡಿಸುವುದು, ತೆಗೆದು ಹಾಕುವುದು ಪಾರ್ಲಿಮೆಂಟ್‌ನ ಅಧಿಕಾರ.
4) ಎಲ್ಲ ಹಂತದ ಅಧಿಕಾರಿಗಳನ್ನು, ಮ್ಯಾಜಿಸ್ಟ್ರೇಟ್‌ಗಳನ್ನು ನೇಮಿಸುವುದು ತೆಗೆದುಹಾಕುವುದು ರಾಜನ ಬೇರಾರ ಅಧಿಕಾರ ಅಲ್ಲ. ಪಾರ್ಲಿಮೆಂಟ್‌ನ ಅಧಿಕಾರ.
5) ಯುದ್ಧ, ಶಾಂತಿಯ ಘೋಷಣೆ ಒಪ್ಪಂದಗಳು ಪಾರ್ಲಿಮೆಂಟ್‌ನ ಅಧಿಕಾರ.
6) ವಿದೇಶ ವ್ಯಾಪಾರ, ವಿದೇಶಗಳ ಜೊತೆ ವ್ಯವಹಾರ

* ಧಾರ್ಮಿಕ ನಂಬಿಕೆಯ ಸ್ವಾತಂತ್ರ್ಯ: ಧಾರ್ಮಿಕ ವಿಷಯಗಳು, ದೇವರ ಆರಾಧನೆ ಮುಂತಾದವೆಲ್ಲ ಅವರವರಿಗೆ ಬಿಟ್ಟ ವಿಷಯ. ಅದರ ಬಗ್ಗೆ ನಿರ್ದೇಶನಗಳನ್ನು ಪಾರ್ಲಿಮೆಂಟ್ ಮತ್ತು ಬೇರಾರು ನೀಡತಕ್ಕದ್ದಲ್ಲ.
* ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿ ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳನ್ನು ಪ್ರಶ್ನಿಸಬಾರದು.
* ಕಾನೂನಿನ ಮುಂದೆ ಎಲ್ಲರೂ ಸಮಾನರು. ಯಾರದೇ ಸ್ಥಾನಮಾನ, ಆಸ್ತಿ ಸಂಪತ್ತು, ಪದವಿ, ಹುಟ್ಟು, ವಾಸಿಸುವ ಸ್ಥಳ ಇವು ಯಾವುದರ ಆಧಾರದ ಮೇಲೂ ಕಾನೂನಿಂದ ವಿನಾಯತಿ ಇಲ್ಲ. (ರಾಜಪ್ರಭುತ್ವದಲ್ಲಿ ರಾಜ ವಂಶದವರು, ಸಾಮಂತ, ಮಾಂಡಲಿಕ ಜಹಗೀರಾದಾರರು ಮೋದಲಾದವರಿಗೆ ಕಾನೂನು ಪಾಲನೆಯ ಬಗ್ಗೆ ಇದ್ದ ವಿನಾಯತಿಗಳು, ಇರುವುದಿಲ್ಲ)
* ಕಾನೂನುಗಳೂ ಸಮಾನತೆಯ ಮೇಲೆ ರೂಪುಗೊಳ್ಳಬೇಕು.
* ಸೈನ್ಯಕ್ಕೆ ಕಡ್ಡಾಯವಾಗಿ ಸೇರಬೇಕೆಂಬ ಒತ್ತಾಯ ಇರಬಾರದು.

"ಜನತೆಯ ಒಪ್ಪಂದ" ಎಂಬ ಪರಿಕಲ್ಪನೆಯೇ ಒಂದು ಕಡೆ ರಾಜನನ್ನು ವೈಯುಕ್ತಿಕವಾಗಿ ಧಿಕ್ಕರಿಸುವುದು ಮಾತ್ರವಲ್ಲದೆ ಇಡೀ ರಾಜಪ್ರಭುತ್ವವನ್ನೇ ಧಿಕ್ಕರಿಸುವ ಹೊಸ ವಿಚಾರ. ಇದನ್ನು ಅಂದಿನ ಯಾರೂ ಯೋಚಿಸಲೂ ಆಗದ ಸಂದರ್ಭದಲ್ಲಿ ಅಂತಹ ವಿಚಾರವನ್ನು ಮಂಡಿಸಿದ್ದು ಬಹಳ ಮಹತ್ವದ ಸಂಗತಿ. ಅಷ್ಟೇ ಅಲ್ಲದೇ ಪಾರ್ಲಿಮೆಂಟನ್ನೂ ಧಿಕ್ಕರಿಸುತ್ತಾರೆ. ಅಂದು ಯುದ್ಧ ನಡೆದಿದ್ದುದೇ ರಾಜ ಮತ್ತು ಪಾರ್ಲಿಮೆಂಟ್‌ನ ನಡುವೆ. ಅಂದು ರಾಜನನ್ನು ಬಂಧಿಸಿದ ಮೇಲೆ ಪಾರ್ಲಿಮೆಂಟ್‌ನದೇ ಅಧಿಕಾರ. ಆದರೆ ಅಂದಿನ ರಾಜ ಮಾನ್ಯರೇ ಕೂಡಿದ್ದ ಪಾರ್ಲಿಮೆಂಟ್ ಕೂಡಾ ದಬ್ಬಾಳಿಕೆಯ ಆಡಳಿತ ನಡೆಸುತ್ತಿತ್ತು. ಅದನ್ನು ಕೂಡಾ ಈ ಒಪ್ಪಂದದ ದಸ್ತಾವೇಜು ಧಿಕ್ಕರಿಸಿತು.

ಚುನಾವಣೆಗಳು, ಕೆಲ ಮೂಲಭೂತ ಹಕ್ಕುಗಳನ್ನು ಮುಂದಿಟ್ಟಿತು.

ಆದರೆ ಇದು ಕೇವಲ ಕರಡು ಎಂದೇ ರಚಿಸಲಾಗಿತ್ತ. ಈ ಕರಡನ್ನು ಸೇನೆಯ ಸಮಿತಿ ಚರ್ಚೆಯ ಆರಂಭಕ್ಕೆ ಅನುಕೂಲವಾಗುವಂತೆ ಆ ಚರ್ಚೆಗೆ ಒಂದು ವಾರ ಮೊದಲು ಸಮಿತಿಗೆ ಸಲ್ಲಿಸಿದರು ಸೈನ್ಯದಲ್ಲಿದ್ದ ಲೆವಲರ್ಸ್‌ಗಳು.

ಎರಡು ವರ್ಷಗಳ ಕಾಲ ಈ ಅಂಶಗಳು ಚರ್ಚೆಗೆ ಮಾತ್ರವಲ್ಲ ಸಂಘರ್ಷಕ್ಕೆ ಒಳಪಟ್ಟವು. ಲೆವಲರ್ಸ್‌ಗಳು ಈ ಸಂಘರ್ಷದಲ್ಲಿ ಮತ್ತೆ ಹಲವು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಮಿಲಿಟರಿಯಲ್ಲಿ ನಡೆದ ಸಂಘರ್ಷದಲ್ಲಿ ಲೆವಲರ್ಸ್ ಸೈನಿಕರು ಪ್ರಾಣ ತೆತ್ತರು.

ಎರಡು ವರ್ಷಗಳ ನಂತರ 1649ರಲ್ಲಿ ಲೆವಲರ್ಸ್‌ಗಳು ಮತ್ತಷ್ಟು ಉತ್ತಮಪಡಿಸಿದ "ಜನತೆಯ ಒಪ್ಪಂದ"ವನ್ನು ಜನರ ಮುಂದಿಟ್ಟರು. ಈ ದಸ್ತಾವೇಜಿನಲ್ಲಿ ಹಲವು ಹೊಸ ಅಂಶಗಳು ಸೇರಿಸಲ್ಪಟ್ಟವು.

ಮುಖ್ಯವಾಗಿ ರಾಜರುಗಳ ಸ್ವೇಚ್ಛೆಯ ದರ್ಬಾರನ್ನು ಕಿತ್ತುಹಾಕುವ ಈ ಒಪ್ಪಂದ ಜನರ ಆಯ್ಕೆಯ ಪಾರ್ಲಿಮೆಂಟ್ ಪರಮಾಧಿಕಾರ ಉಳ್ಳ ಸಂಸ್ಥೆ ಎಂದು ಸ್ಥಾಪಿಸುವಾಗಲೂ ಅದೂ ಕೂಡ ಮಿತಿಗೊಳಪಡಬೇಕು ಎಂದು ಪ್ರತಿಪಾದಿಸಿದರು.

ಜಿ.ಎನ್.ಎನ್.

ಅವರು ಸೂಚಿಸಿದ ಸೇರ್ಪಡೆಗಳು ಹೀಗಿವೆ:

1) 21 ವರ್ಷ ವಯಸ್ಸು ಮತ್ತು ಅದಕ್ಕಿಂತ ಹೆಚ್ಚಿರುವ ಎಲ್ಲ ಪುರುಷರಿಗೆ (ಸೇವಕರು, ಭಿಕ್ಷುಕರು ಹೊರತಾಗಿ) ಮತದಾನದ ಹಕ್ಕು.
2) ಸರ್ಕಾರದ ಸೇವೆಯಲ್ಲಿರುವವರು, ಸೇನೆಯಲ್ಲಿರುವವರು ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ.
3) ಒಮ್ಮೆ ಆಯ್ಕೆಯಾದವರು ಮತ್ತೆ ತಕ್ಷಣದ ಮುಂದಿನ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ನಂತರದ ಚುನಾವಣೆಯಲ್ಲಿ ಮಾತ್ರ ಸ್ಪರ್ಧಿಸಬಹುದು.
4) ಜನರ ಜೀವದ ಭದ್ರತೆ, ದೈಹಿಕ ಹಿಂಸೆಯ ವಿರುದ್ಧ ರಕ್ಷಣೆ,
5) ಆಸ್ತಿಯ ಹಕ್ಕಿನ ರಕ್ಷಣೆ.
6) ವಸ್ತುಗಳ ಬೆಲೆ ಹೆಚ್ಚಿಸುವ ಎಕ್ಸೈಸ್ ತೆರಿಗೆ, ಆಮದು ಸುಂಕಗಳ ರದ್ದತಿ. ಆಸ್ತಿಯ ಮೇಲೆ, ಆಸ್ತಿಯ ಪ್ರಮಾಣಕ್ಕೆ ಅನುಗುಣವಾಗಿ ಭೂಕಂದಾಯ ಸರ್ಕಾರದ ಆದಾಯದ ಆಧಾರವಾಗಬೇಕು.
7) ಸರ್ಕಾರದ ಎಲ್ಲ ವೆಚ್ಚಗಳೂ ಜನರ ಹಿತಕ್ಕಾಗಿ ಮೇಲಿನ ಉದ್ದೇಶಗಳಿಗಾಗಿ ವೆಚ್ಚ ಮಾಡಬೇಕು. ಅದರ ಲೆಕ್ಕವನ್ನು ಮಂಡಿಸಬೇಕು.
8) ಬ್ರಿಟನ್‌ನ ಎಲ್ಲ ಪ್ರಜೆಗಳೂ ದೇಶದ ಒಳಗಡೆ ಹಾಗೂ ಹೊರಗಡೆ ವ್ಯಾಪಾರ ಮಾಡಲು ಸ್ವಾತಂತ್ರ್ಯ ಇರಬೇಕು. (ರಾಜನ ಕಾಲದಲ್ಲಿದ್ದಂತೆ ಅವನ ಅನುಮತಿ ಪಡೆದವರು ಮಾತ್ರ ವ್ಯವಹಾರಗಳಲ್ಲಿ ತೊಡಗಬೇಕು ಮತ್ತು ಬೇರೆ ಯಾರಿಗೂ ಅವಕಾಶ ಇಲ್ಲ ಎಂಬ ಗುತ್ತೇದಾರಿ ಪದ್ಧತಿಯ ವಿರುದ್ಧ ಈ ಅಂಶ)
9) ಕಾನೂನಿಲ್ಲದೆ ಯಾರನ್ನೂ ಶಿಕ್ಷಿಸುವಂತಿಲ್ಲ. ಯಾರನ್ನಾದರೂ ಶಿಕ್ಷೆಗೆ ಒಳಪಡಿಸಬೇಕೆಂದರೆ ಅದು ಒಂದು ಕಾನೂನಿನಡಿಯಲ್ಲಿ ಮಾತ್ರ.
10) ಪ್ರತಿ ಕಾನೂನುಗಳು ಮತ್ತು ಕೋರ್ಟ್ ವಿಚಾರಣೆ ಜನರ ಭಾಷೆಯಲ್ಲದೆ ಬೇರಾವ ಭಾಷೆಯಲ್ಲಿರಬಾರದು.
11) ಪ್ರತಿಯೊಬ್ಬರೂ ಕೋರ್ಟ್‌ನಲ್ಲಿ ತಮ್ಮ ವಾದವನ್ನು ತಾವೇ ಮಂಡಿಸಲು ಅಥವಾ ತಮ್ಮ ಪರವಾಗಿ ವಾದ ಮಂಡಿಸಲು ತಮ್ಮ ಇಷ್ಟದವರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಇರಬೇಕು.
12) ಕೊಲೆಯಂತ ಹೀನ ಅಪರಾಧ ಬಿಟ್ಟರೆ ಬೇರಾವ ಅಪರಾಧಗಳಿಗೂ ಮರಣ ದಂಡನೆ ವಿಧಿಸಬಾರದು. ಬೇರೆ ಅಪರಾಧಗಳಿಗೂ ಕೈ, ಕಾಲು ಕತ್ತರಿಸುವ ಶಿಕ್ಷೆಗಳು ಇರಬಾರದು. ಅಪರಾಧಿಯ ಭೂ ಸ್ವತ್ತುಗಳನ್ನು ವಶಪಡಿಸಿಕೊಳ್ಳಬಾರದು.
13) ಸಾಲ ಬಾಕಿಗಾಗಿ ಬಂಧಿಸುವ ಕಾನೂನು ತೆಗೆದು ಹಾಕಬೇಕು.
14) ಧಾರ್ಮಿಕ ಪಾದ್ರಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೂ ಚರ್ಚ್‌ಗೆ ಕೊಡಬೇಕಾದ ಹಣದ ಪ್ರಮಾಣವನ್ನು ನಿರ್ಧರಿಸುವುದು ಆಯಾ ಜನರ ಸ್ವಾತಂತ್ರ್ಯ.
15) ವಿವಿಧ ತಾಲ್ಲೂಕು, ನಗರ ಪ್ರದೇಶಗಳಿಗೆ ಸಾರ್ವಜನಿಕ ಸೇವೆಯ ಅಧಿಕಾರಿಗಳನ್ನು ಮೇಲಿನಿಂದ ನೇಮಿಸಬಾರದು. ಆಯಾ ಪ್ರದೇಶಗಳ ಜನರೇ ಕಾನೂನು ಪಾಲನೆಗೆ ಅಗತ್ಯವಾದವರನ್ನು ನೇಮಿಸಿಕೊಳ್ಳುವ ಅಧಿಕಾರ ಇದೆ. ಈ ಯಾವುದೇ ಧಾರ್ಮಿಕ ನಂಬಿಕೆಯವರನ್ನೂ ಸಾರ್ವಜನಿಕ ಸೇವೆಗೆ ನೇಮಿಸಿಕೊಳ್ಳಲು ನಿಷೇಧಿಸುವಂತಿಲ್ಲ.
16) ಮಿಲಿಟರಿ ತುಕಡಿಗಳು ಕೂಡ ಪ್ರದೇಶಗಳಿಗೆ ಅನುಗುಣವಾಗಿರಬೇಕು. ಆ ತುಕಡಿಗಳ ಸೇನಾಧಿಕಾರಿಗಳನ್ನೂ ಆಯಾ ಪ್ರದೇಶದ ಜನರ ಪ್ರತಿನಿಧಿಗಳೇ ಆಯ್ಕೆ ಮಾಡಬೇಕು.
17) ಈ "ಜನತೆಯ ಒಪ್ಪಂದ" (ಸಂವಿಧಾನ)ಕ್ಕೆ ವಿರುದ್ಧವಾಗಿ ವರ್ತಿಸುವ ಜನ ಪ್ರತಿನಿಧಿಗಳಿಗೆ ಘೋರ ದ್ರೋಹಕ್ಕೆ ನೀಡುವಂತಹ ಶಿಕ್ಷೆ ನೀಡಬೇಕು.
18) ಸಂವಿಧಾನಕ್ಕೆ ವಿರುದ್ಧವಾದ ಯಾವುದೇ ಕಾನೂನು ಅಂಗೀಕರಿಸಬಾರದು. ಅಂಗೀಕರಿಸಿದರೆ ಅಂತಹ ಕಾನೂನು ನಿಷೇಧಗೊಳ್ಳುತ್ತದೆ (ನಲ್ ಅಂಡ್ ವಾಯ್ಡ್)

ಕರಾವಳಿ: ಕೋಮುವಾದ ನಿಗ್ರಹದಲ್ಲಿ ಕಾಂಗ್ರೆಸ್‌ನ... ಪುಟ 3 ರಿಂದ

ಕರಾವಳಿಯಲ್ಲಿ ಈಗಿನ ಎಲ್ಲಾ ಕ್ರಮಗಳಿಂದ ಕೊಂಚ ಶಾಂತಿ ನೆಲಸಿದೆ ಎಂಬಂತೆ ಕಂಡರೂ ಅದು ಬೂದಿ ಮುಚ್ಚಿದ ಕೆಂಡವಾಗಿದೆ. ಪೊಲೀಸರ ಕ್ರಮಗಳಿಂದ ಕೆರಳಿ ಕೆಂಡವಾದ ಬಿಜೆಪಿ ಅದರ ನಾಯಕರು ಪೊಲೀಸ್ ಅಧಿಕಾರಿಗಳಿಗೆ ಬೆದರಿಕೆ ಹಾಕಿ ಆಡಳಿತಕ್ಕೆ ಅಡ್ಡಿ ಪಡಿಸಿರುವುದು ಮತ್ತು ಅದನ್ನು ರಾಷ್ಟ್ರ ಮಟ್ಟದ ಪ್ರಶ್ನೆಯೆಂಬಂತೆ ಕೇಂದ್ರ ಸಚಿವರಾದಿಯಾಗಿ ಬಿಂಬಿಸುತ್ತಿರುವುದು ಮುಂಬರುವ ಬೆಳವಣಿಗೆಗಳ ಎಚ್ಚರಿಕೆಯ ಗಂಟೆಯೂ ಆಗಿದೆ.

ಕರಾವಳಿಯಲ್ಲಿ ಫ್ಯಾಶಿಸ್ಟ್ ಮನೋಭಾವದ ಕೋಮುವಾದಿ ಹಾಗೂ ಮತೀಯ ಮೂಲಭೂತವಾದಿ ಶಕ್ತಿಗಳನ್ನು ಎದುರಿಸುವುದು ಅಷ್ಟು ಸಲೀಸಲ್ಲ ಎಂಬುದು ತಿಳಿದ ಸಂಗತಿಯಾಗಿದೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಿಗಳು ಪರಸ್ಪರ ಪೂರಕ, ಪ್ರೇರಕರಾಹಿಯೇ ಕೆಲಸ ಮಾಡುತ್ತಿವೆ. ಅವುಗಳ ವಿರುದ್ಧದ ಈ ಹೋರಾಟ ದೀರ್ಘವಾದುದು. ಇಲ್ಲಿ ಸಂಘ ಪರಿವಾರ ಮತ್ತು ಬಿಜೆಪಿಯ ಸಂಘಟನಾತ್ಮಕ ರಾಜಕೀಯ ಮತ್ತು ಸೈದ್ಧಾಂತಿಕ ಪ್ರಭಾವ ಮತ್ತು ಒಟ್ಟು ಅದರ ಶಕ್ತಿ, ಸಾಮರ್ಥ್ಯವನ್ನು ಕಡಿಮೆ ಅಂದಾಜಿಸಲಾಗದು. ಅಲ್ಪಸಂಖ್ಯಾತ ಮೂಲಭೂತವಾದಿಗಳ ಅಪಾಯವನ್ನೂ ಕಡೆಗಣಿಸಲಾಗದು. ಕಾಂಗ್ರೆಸ್‌ಗೆ ಕರಾವಳಿಯ ಜನತೆ ರಾಜಕೀಯವಾಗಿ ಅನೇಕ ಬಾರಿ ಬೆಂಬಲಿಸಿದ್ದರೂ ಅದನ್ನು ಸೂಕ್ತವಾಗಿ ಕಾಂಗ್ರೆಸ್ ಬಳಸಿಲ್ಲ. ಸ್ವಹಿತಾಸಕ್ತಿಯಿಂದ, ಬಹಳಷ್ಟು ಬಾರಿ ರಾಜೀ ಹೊಂದಾಣಿಕೆಯಿಂದ ಕಾಲ ಕಳೆದದ್ದೇ ಹೆಚ್ಚು. ಪರಿಸ್ಥಿತಿ ಇಷ್ಟೊಂದು ಗಂಭೀರತೆಯತ್ತ ಸಾಗಿ ಬರಲು ಬಿಜೆಪಿ ಅಲ್ಲದೇ ಕಾಂಗ್ರೆಸ್, ಜೆ.ಡಿ.ಎಸ್. ಪಕ್ಷಗಳ ಪಾಲು ಇದೆ. ಹೀಗಾಗಿ ಕರಾವಳಿ ಇಂದು ಹತ್ತಿ ಉರಿಯುತ್ತಿದೆ.

ಈ ಎಲ್ಲಾ ಅಂಶಗಳನ್ನು ಗಮನಿಸುವಾಗಲೇ ಎಲ್ಲಾ ಶಾಂತಿ, ಸೌಹಾರ್ದತೆ, ಮಾನವನ ಪ್ರಗತಿಯನ್ನು ಬಯಸುವ ಎಲ್ಲಾ ಶಕ್ತಿಗಳು, ಸೆಕ್ಯುಲರ್ ಮತ್ತು ಪ್ರಜಾಪ್ರಭುತ್ವೀಯ ಶಕ್ತಿಗಳು, ಪಕ್ಷಗಳು ಐಕ್ಯತೆಯಿಂದ ಹೋರಾಡಬೇಕಿದೆ. ಕೋಮುವಾದ, ಮತೀಯ ಮೂಲಭೂತವಾದ ಹುಲುಸಾಗಿ ಬೆಳೆಯಲು ಕಾರಣವಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನೀತಿಗಳನ್ನು ಎದುರಿಸಬೇಕಿದೆ. ವಾಸ್ತವದಲ್ಲಿ ಬಲಪಂಥೀಯ ಪಕ್ಷಗಳ ನೀತಿಗಳಿಗೆ ಎದುರಾಗಿ ಪರ್ಯಾಯ ನೀತಿಗಳಿಗಳಿಗಾಗಿ ಜನಾಂದೋಲನ ನಡೆಯಬೇಕು. ಶಾಂತಿ, ಸೌಹಾರ್ದತೆ ಕಾಪಾಡುವಲ್ಲಿ ಮತ್ತು ನಿಜ ಪರ್ಯಾಯ ರೂಪಿಸುವಲ್ಲಿ ಎಡ ಶಕ್ತಿಗಳು ವಹಿಸಬೇಕಾದ ಸ್ವತಂತ್ರ ಪಾತ್ರವೂ ಅಷ್ಟೇ ಅತೀ ಮಹತ್ವದ್ದು.

ಆಗ WMD ಸುಳ್ಳು–ಈಗ ಪರಮಾಣು ಬಾಂಬು ಸುಳ್ಳು– ಸಿಪಿಐ(ಎಂ) ಖಂಡನೆ

ಯುಎಸ್ ನಂಬರ್ 1 ಪುಂಡ ರಾಷ್ಟ್ರ ಎಂದು ಸಾಬೀತುಪಡಿಸಿಕೊಂಡಿದೆ–ಎಂ.ಎ.ಬೇಬಿ

ಇರಾನ್‌ನ ಪರಮಾಣು ತಾಣಗಳ ಮೇಲಿನ ಅಮೆರಿಕದ ದಾಳಿ ಅಂತರರಾಷ್ಟ್ರೀಯ ಕಾನೂನಿನ ಗಂಭೀರ ಉಲ್ಲಂಘನೆಯಾಗಿದೆ, ಇದನ್ನು ಸಿಪಿಐ(ಎಂ) ನಿಸ್ಸಂದಿಗ್ಧವಾಗಿ ಖಂಡಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಹೇಳಿದ್ದಾರೆ.

ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿಲ್ಲ ಎಂದು ಯುಎಸ್ ಗುಪ್ತಚರ ಮಾಹಿತಿಯೇ ಹೇಳುತ್ತಿದ್ದರೂ, ಅದನ್ನು ನಿರ್ಲಕ್ಷಿಸಿ ಟ್ರಂಪ್ ಈ ದಾಳಿಗೆ ಆದೇಶಿಸಿದ್ದಾರೆ. ಇದು ಇರಾಕ್ ಯುದ್ಧದ ಸುಳ್ಳುಗಳ ಪ್ರತಿಬಿಂಬವೇ ಆಗಿದೆ. ಆಗ ಇರಾಕ್ ಬಳಿ 'ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರ'(WMD)ಗಳಿವೆ ಎಂದು ಸುಳ್ಳು ಹೇಳಲಾಗಿದ್ದರೆ, ಈಗ ಇರಾನ್ ಬಳಿ ಪರಮಾಣು ಬಾಂಬ್‌ಗಳಿವೆ ಎಂದು ಸುಳ್ಳು ಹೇಳಲಾಗುತ್ತಿದೆ. ಇದರ ಆರ್ಥಿಕ ಮತ್ತು ರಾಜಕೀಯ ಪರಿಣಾಮವು ಜಾಗತಿಕವಾಗಿರುತ್ತದೆ? ಭಾರತವನ್ನೂ ಅದು ತಟ್ಟುತ್ತದೆ ಎಂದಿರುವ ಅವರು, ಯುಎಸ್ ತಾನು ನಂಬರ್ ಒಂದು ಪುಂಡ ರಾಷ್ಟ್ರ ಎಂದು ಸಾಬೀತುಪಡಿಸಿದೆ, ಇದರ ವಿರುದ್ಧ ಸಾಧ್ಯವಾದಲ್ಲೆಲ್ಲಾ ಪ್ರತಿಭಟನಾ ಕ್ರಮಕ್ಕೆ ಕರೆ ನೀಡಬೇಕು ಎಂದು ಹೇಳಿದ್ದಾರೆ.

ಕರ್ನಾಟಕದ ಐಟಿ ವಲಯದಲ್ಲಿ ಆಧುನಿಕ ಗುಲಾಮಗಿರಿ ಹೇರಿಕೆಗೆ ಮತ್ತೆ ಅಮಾನವೀಯ ಪ್ರಯತ್ನ



ಕರ್ನಾಟಕ ರಾಜ್ಯ ಸರ್ಕಾರವು ಐಟಿ/ಐಟಿಇಎಸ್/ಬಿಪಿಒ ವಲಯದಲ್ಲಿ ಕೆಲಸದ ಸಮಯವನ್ನು ದಿನಕ್ಕೆ 12 ಗಂಟೆಗೆ ಹೆಚ್ಚಿಸಲು ಮತ್ತೆ ಮುಂದಾಗಿದೆ. ಇದಕ್ಕಾಗಿ, 'ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ'ಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಸರ್ಕಾರದ ಈ ಕ್ರಮ ಈ ವಲಯದ ಉದ್ಯೋಗಿಗಳನ್ನು ಕೆರಳಿಸಿದೆ. ಇಂತಹ ಯಾವುದೇ ಪ್ರಯತ್ನವನ್ನು ಕರ್ನಾಟಕದ ಐಟಿ/ಐಟಿಇಎಸ್ ವಲಯದಲ್ಲಿ ಕೆಲಸ ಮಾಡುತ್ತಿರುವ 20 ಲಕ್ಷ ಉದ್ಯೋಗಿಗಳಿಗೆ ನೇರ ಸವಾಲು ಎಂದು ನೋಡಲಾಗುತ್ತದೆ ಎಂದು ಎಚ್ಚರಿಸಿರುವ 'ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ'ವು (KITU), ತಮ್ಮ ಮೇಲೆ ಆಧುನಿಕ ಗುಲಾಮಗಿರಿಯನ್ನು ಹೇರುವ ಇಂತಹ ಅಮಾನವೀಯ ಪ್ರಯತ್ನವನ್ನು ವಿರೋಧಿಸಲು ಎಲ್ಲಾ ಐಟಿ/ಐಟಿಇಎಸ್ ಉದ್ಯೋಗಿಗಳು ಒಗ್ಗೂಡಿ ಒಟ್ಟಾಗಿ ನಿಲ್ಲಬೇಕೆಂದು ಕರೆ ನೀಡಿದೆ.

ಕಾರ್ಮಿಕ ಇಲಾಖೆಯು ಜೂನ್ 18 ರಂದು ಉದ್ಯಮದ ವಿವಿಧ ಪಾಲುದಾರರೊಂದಿಗೆ ಕರೆದಿದ್ದ ಸಭೆಯಲ್ಲಿ, 12 ಗಂಟೆಗಳ ಕೆಲಸದ ದಿನಕ್ಕೆ ಅನುಕೂಲವಾಗುವಂತೆ 'ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ' (Karnataka Shops and Commercial Establishment Act)ಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಕಾರ್ಮಿಕ ಕಾರ್ಯದರ್ಶಿ ಮತ್ತು ಕಾರ್ಮಿಕ ಇಲಾಖೆಯ ಇತರ ಅಧಿಕಾರಿಗಳು ಹಾಗೂ ಸಬೆಯಲ್ಲಿ ಭಾಗವಹಿಸಿದ್ದರು. ಐಟಿ/ಐಟಿಇಎಸ್ ವಲಯದ ನೌಕರರನ್ನು ಪ್ರತಿನಿಧಿಸಿ KITU ಮುಖಂಡರು ಭಾಗವಹಿಸಿದ್ದರು.

ಮೂರನೇ ಒಂದು ಭಾಗದಷ್ಟು ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಾರೆ

ಅಸ್ತಿತ್ವದಲ್ಲಿರುವ 'ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ'ಯು ಓವರ್‌ಟೈಮ್ ಸೇರಿದಂತೆ ದಿನಕ್ಕೆ ಗರಿಷ್ಠ 10 ಗಂಟೆಗಳ ಕೆಲಸವನ್ನು ಮಾತ್ರ ಅನುಮತಿಸುತ್ತದೆ. ಆದರೆ, ಪ್ರಸ್ತಾವಿತ ತಿದ್ದುಪಡಿಯು 12 ಗಂಟೆಗಳ ಕೆಲಸದ ದಿನವನ್ನು ಸಾಮಾನ್ಯಗೊಳಿಸಲು ಪ್ರಯತ್ನಿಸುತ್ತದೆ ಮಾತ್ರವಲ್ಲ, ಪ್ರಸ್ತುತ ಅಸ್ತಿತ್ವದಲ್ಲಿರುವ ಮೂರು ಪಾಳಿ ವ್ಯವಸ್ಥೆಗೆ ಬದಲಾಗಿ ಎರಡು ಪಾಳಿ ವ್ಯವಸ್ಥೆಗೆ ಹೋಗಲು ಕಂಪನಿಗಳಿಗೆ ಅವಕಾಶ ನೀಡುತ್ತದೆ. ಇದರಿಂದಾಗಿ ಮೂರನೇ ಒಂದು ಭಾಗದಷ್ಟು ಉದ್ಯೋಗಿಗಳು ತಮ್ಮ ಉದ್ಯೋಗದಿಂದ ಹೊರಹಾಕಲ್ಪಡುತ್ತಾರೆ.

ಕಾರ್ಮಿಕ ಇಲಾಖೆಯು ಕರೆದಿದ್ದ ಈ ಸಭೆಯಲ್ಲಿ KITU ಪ್ರಧಾನ ಕಾರ್ಯದರ್ಶಿ ಸುಹಾಸ್ ಅಡಿಗ, ಅಧ್ಯಕ್ಷರಾದ ವಿಜೆಕೆ ನಾಯರ್ ಮತ್ತು ಕಾರ್ಯದರ್ಶಿ ಲೆನಿಲ್ ಬಾಬು ಇವರುಗಳು, ಪ್ರಸ್ತಾವಿತ ತಿದ್ದುಪಡಿಗೆ ಬಲವಾದ ವಿರೋಧ ವ್ಯಕ್ತಪಡಿಸಿದರು. 'ಈ ಪ್ರಸ್ತಾವಿತ ತಿದ್ದುಪಡಿಯು ವೈಯಕ್ತಿಕ ಜೀವನವನ್ನು ಹೊಂದುವ ಕಾರ್ಮಿಕನ ಮೂಲಭೂತ ಹಕ್ಕಿನ ಮೇಲೆ ದಾಳಿಯನ್ನು ಮಾಡುತ್ತದೆ' ಎಂದು ಹೇಳಿದರು.

ಆರೋಗ್ಯದ ಮೇಲೆ ಪರಿಣಾಮ

ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯದ ಕುರಿತಾದ "ರಾಜ್ಯ ಭಾವನಾತ್ಮಕ ಯೋಗಕ್ಷೇಮ ವರದಿ 2024" (State emotional wellbeing report 2024) ಭಾರತದಲ್ಲಿ 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.90ರಷ್ಟು ಕಾರ್ಪೊರೇಟ್ ಉದ್ಯೋಗಿಗಳು ಆತಂಕದಿಂದ ಬಳಲುತ್ತಿದ್ದಾರೆ ಎಂದು ಬಹಿರಂಗಪಡಿಸಿದೆ. ಈ ಅಧ್ಯಯನ ವರದಿಗಳನ್ನು ಸಭೆಯಲ್ಲಿ ಎತ್ತಿ ತೋರಿಸಿದ KITU ಮುಖಂಡರು, ಹೆಚ್ಚಿನ ಅವಧಿಯ ಕೆಲಸದ ಸಮಯದಿಂದಾಗಿ ಐಟಿ ಉದ್ಯೋಗಿಗಳಲ್ಲಿ ಉಂಟಾಗುವ ಆರೋಗ್ಯದ ಮೇಲಿನ ದುಷ್ಪರಿಣಾಮದ ಕುರಿತು ಮಾತನಾಡಿದರು.

ಐಟಿ ವಲಯದಲ್ಲಿ ಅತಿಯಾದ ಕೆಲಸದ ಒತ್ತಡದಿಂದ ಸಾವು, ಆತ್ಮಹತ್ಯೆಗಳು ಸಾಮಾನ್ಯವಾಗುತ್ತಿವೆ. ಇತ್ತೀಚೆಗೆ, ಬೆಂಗಳೂರಿನಲ್ಲಿರುವ ಓಲಾ ಸಂಸ್ಥೆಯ ಕೃತಕ ಬುದ್ಧಿಮತ್ತೆ ಘಟಕದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ಆತ್ಮಹತ್ಯೆಗೆ ಶರಣಾದರು. ಅತಿಯಾದ ಕೆಲಸದ ಒತ್ತಡದಿಂದಾಗಿ ಈ ಪರಿಸ್ಥಿತಿ ಎಂಬುದನ್ನು ಈ ಘಟನೆ ಒತ್ತಿಹೇಳುತ್ತದೆ. ಕೆಲಸದ ಸಮಯವನ್ನು ಹೆಚ್ಚಿಸಿದರೆ ಇಂತಹ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಕರ್ನಾಟಕ ಸರ್ಕಾರವು ತನ್ನ ಕಾರ್ಪೊರೇಟ್ ಯಜಮಾನರನ್ನು ಮೆಚ್ಚಿಸುವ ದಾವಂತದಲ್ಲಿ, ಯಾವುದೇ ವ್ಯಕ್ತಿಯ ಮೂಲಭೂತ ಹಕ್ಕನ್ನು, ಬದುಕುವ ಹಕ್ಕನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ ಎಂದು ಅವರು ಆಪಾದಿಸಿದರು.

ಕಾರ್ಮಿಕರು ಕಾರ್ಪೊರೇಟ್‌ಗಳ ಲಾಭವನ್ನು ಹೆಚ್ಚಿಸುವ ಯಂತ್ರಗಳಲ್ಲ

ಬದುಕಲು ಅಗತ್ಯವಿರುವ ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ಬಯಸುವ ಮನುಷ್ಯರೆಂದು ಕಾರ್ಮಿಕರನ್ನು ಗುರುತಿಸಲು ಕರ್ನಾಟಕ ಸರ್ಕಾರವು ಸಿದ್ಧವಿಲ್ಲ ಎಂಬುದನ್ನು ಈ ತಿದ್ದುಪಡಿಯು ತೋರಿಸುತ್ತದೆ. ಬದಲಾಗಿ, ಅದು ಕಾರ್ಮಿಕರನ್ನು ತಾನು ಸೇವೆ ಸಲ್ಲಿಸುವ ಕಾರ್ಪೊರೇಟ್‌ಗಳ ಲಾಭವನ್ನು ಹೆಚ್ಚಿಸುವ ಯಂತ್ರಗಳಾಗಿ ಮಾತ್ರ ನೋಡುತ್ತದೆ.

ಹೆಚ್ಚಿದ ಕೆಲಸದ ಸಮಯವು ಉತ್ಪಾದಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಜಗತ್ತು ಒಪ್ಪಿಕೊಳ್ಳಲು ಪ್ರಾರಂಭಿಸುತ್ತಿರುವ ಸಮಯದಲ್ಲಿ ಮತ್ತು ಸಂಪರ್ಕ ಕಡಿತಗೊಳಿಸುವ ಹಕ್ಕನ್ನು ಪ್ರತಿಯೊಬ್ಬ ಉದ್ಯೋಗಿಯ ಮೂಲಭೂತ ಹಕ್ಕು ಎಂದು ಗುರುತಿಸಲು ಹೆಚ್ಚಿನ ದೇಶಗಳು ಶಾಸನವನ್ನು ಪರಿಚಯಿಸುತ್ತಿರುವ ಸಮಯದಲ್ಲಿ ಈ ತಿದ್ದುಪಡಿ ಬಂದಿದೆ.

ಕಳೆದ ವರ್ಷವೂ ಪ್ರಯತ್ನ

2024 ರಲ್ಲಿಯೂ ಸಹ, ಕರ್ನಾಟಕ ಸರ್ಕಾರವು ಐಟಿ ವಲಯದಲ್ಲಿ 14 ಗಂಟೆಗಳ ಕೆಲಸದ ದಿನವನ್ನು ಅನುಮತಿಸಲು ತಿದ್ದುಪಡಿಯನ್ನು ಪರಿಚಯಿಸುವ ಮೂಲಕ ಕೆಲಸದ ಸಮಯವನ್ನು ಹೆಚ್ಚಿಸಲು ಪ್ರಯತ್ನಿಸಿತು. ಆದರೆ, ಈ ಕ್ರಮವನ್ನು KITU ದೊಡ್ಡ ಮಟ್ಟದ ಉದ್ಯೋಗಿಗಳ ಬೆಂಬಲದೊಂದಿಗೆ ಯಶಸ್ವಿಯಾಗಿ ವಿರೋಧಿಸಿತು. ಕೆಲಸದ ಸಮಯವನ್ನು ವಿಸ್ತರಿಸಲು ನವೀಕರಿಸಿದ ಒತ್ತಾಯವು ಕಾರ್ಮಿಕರ ಹಕ್ಕುಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪೂರೈಸಲು ಸರ್ಕಾರದ ನಿರಂತರ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ.

ಈ ಕ್ರಮವನ್ನು ಮರುಪರಿಶೀಲಿಸುವಂತೆ ಸರ್ಕಾರವನ್ನು KITU ಒತ್ತಾಯಿಸಿದೆ. ತಿದ್ದುಪಡಿಯೊಂದಿಗೆ ಮುಂದುವರಿಯುವ ಯಾವುದೇ ಪ್ರಯತ್ನವನ್ನು ಕರ್ನಾಟಕದ ಐಟಿ/ಐಟಿಇಎಸ್ ವಲಯದಲ್ಲಿ ಕೆಲಸ ಮಾಡುತ್ತಿರುವ 20 ಲಕ್ಷ ಉದ್ಯೋಗಿಗಳಿಗೆ ನೇರ ಸವಾಲು ಎಂದು ನೋಡಲಾಗುತ್ತದೆ ಎಂದು ಎಚ್ಚರಿಸಿದೆ. ತಮ್ಮ ಮೇಲೆ ಆಧುನಿಕ ಗುಲಾಮಗಿರಿಯನ್ನು ಹೇರುವ ಇಂತಹ ಅಮಾನವೀಯ ಪ್ರಯತ್ನವನ್ನು ವಿರೋಧಿಸಲು ಎಲ್ಲಾ ಐಟಿ/ಐಟಿಇಎಸ್ ಉದ್ಯೋಗಿಗಳು ಒಗ್ಗೂಡಿ ಒಟ್ಟಾಗಿ ನಿಲ್ಲಬೇಕು ಮತ್ತು ಇಡೀ ಕಾರ್ಮಿಕ ವರ್ಗ ರಾಜ್ಯ ಸರ್ಕಾರದ ಈ ಕ್ರಮವನ್ನು ವಿರೋಧಿಸಬೇಕು ಎಂದು ಕರೆ ನೀಡಿದೆ.

ಅಮೆರಿಕ ಮತ್ತು ಜಿ-7 ಯುದ್ಧಕೋರತನ: ಪಶ್ಚಿಮ ಏಷ್ಯಾ ಮತ್ತು ಆಚೆಗೆ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಹೇರಲು ಪುಂಡ ಪ್ರಭುತ್ವ ಇಸ್ರೇಲಿನ ಬಳಕೆ

ಇರಾನ್ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧಕೋರ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇಂತಹ ಮಾತುಗಾರಿಕೆ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಮತ್ತು ಇಡೀ ಪಶ್ಚಿಮ ಏಷ್ಯಾ ಪ್ರದೇಶವನ್ನು ಯುದ್ಧ ಮತ್ತು ಅಸ್ಥಿರತೆಯತ್ತ ತಳ್ಳುತ್ತದೆ ಎಂದು ಅದು ಹೇಳಿದೆ.

ಅಧ್ಯಕ್ಷ ಟ್ರಂಪ್ ಈಗ ಇರಾನಿನ ನಾಯಕರನ್ನು ಹತ್ಯೆ ಮಾಡುವುದಾಗಿ ಬಹಿರಂಗವಾಗಿ ಬೆದರಿಕೆ ಹಾಕುತ್ತಿರುವುದು ಮತ್ತು ಇರಾನ್‌ನ ಬೇಷರತ್ ಶರಣಾಗತಿಗೆ ಒತ್ತಾಯಿಸುತ್ತಿರುವುದು ಅತ್ಯಂತ ಶೋಚನೀಯ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಮಿಲಿಟರಿ ಪಡೆಗಳನ್ನು ದೊಡ್ಡ ಪ್ರಮಾಣದಲ್ಲಿ ಸಜ್ಜುಗೊಳಿಸುವುದು ಇರಾನ್ ಮೇಲೆ ದಾಳಿ ನಡೆಸಲು ಇಸ್ರೇಲ್ ಜೊತೆ ಸೇರಲು ಅಮೆರಿಕದ ಸಿದ್ಧತೆಯನ್ನು ಮತ್ತಷ್ಟು ಸೂಚಿಸುತ್ತದೆ. ಈ ಬೆಳವಣಿಗೆಗಳು ಅಪಾಯಕಾರಿ ಮತ್ತು ಈ ಪ್ರದೇಶವನ್ನು ಮತ್ತು ಜಗತ್ತನ್ನು ವಿನಾಶಕಾರಿ ಯುದ್ಧದ ಅಂಚಿಗೆ ತಳ್ಳುವ ಅಪಾಯವಿದೆ.

ಕೆನಡಾದಲ್ಲಿ ಜಿ-7 ಸಭೆಯ ಇತ್ತೀಚಿನ ಹೇಳಿಕೆಯು ಈ ಯುದ್ಧಕೋರತನಕ್ಕೆ ಮತ್ತಷ್ಟು ಬಲ ತುಂಬುತ್ತದೆ. ಇಸ್ರೇಲಿನ ಆಕ್ರಮಣಕಾರಿ ಕೃತ್ಯಗಳ ಬಗ್ಗೆ ಕಣ್ಣು ಮುಚ್ಚಿಕೊಂಡಿರುವ ಜಿ-7 ಇರಾನನ್ನು ದೂಷಿಸುತ್ತಿರುವುದು ಖಂಡನೀಯ ಎಂದಿರುವ ಸಿಪಿಐ(ಎಂ) ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ಆಗುತ್ತಿರುವ ಅಸ್ಥಿರತೆಗೆ ಪ್ರಾಥಮಿಕವಾಗಿ ಇಸ್ರೇಲ್ ಹೊಣೆ ಎಂಬುದು ಸ್ಪಷ್ಟವಾಗಿದೆ ಎಂದಿದೆ. ಗಾಜಾ ಮೇಲಿನ ನರಮೇಧಕಾರೀ ದಾಳಿಯಿಂದ ಆರಂಭಗೊಂಡು, ಇಸ್ರೇಲ್ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ಸಿರಿಯಾ, ಲೆಬನಾನ್, ಯೆಮೆನ್ ಮತ್ತು ಈಗ ಇರಾನ್ ಸೇರಿದಂತೆ ಈ ಪ್ರದೇಶದ ಇತರ ದೇಶಗಳಿಗೆ ಉದ್ದೇಶಪೂರ್ವಕವಾಗಿ ವಿಸ್ತರಿಸಿದೆ.

ಇಸ್ರೇಲನ್ನು ನಿರ್ಬಂಧಿಸದಿದ್ದರೆ, ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಈಡೇರದ ನಿರೀಕ್ಷೆಯಾಗಿಯೇ ಉಳಿಯುತ್ತದೆ.

ಅಮೆರಿಕ ಮತ್ತು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಪಶ್ಚಿಮ ಏಷ್ಯಾ ಮತ್ತು ಅದರಾಚೆಗೆ ತಮ್ಮ ಪ್ರಾಬಲ್ಯವನ್ನು ಹೇರಲು ಒಂದು ಪುಂಡ ಪ್ರಭುತ್ವವಾದ ಇಸ್ರೇಲನ್ನು ಬಳಸುತ್ತಿವೆ, ಇದು ಅಂತರರಾಷ್ಟ್ರೀಯ ಕಾನೂನುಗಳು ಮತ್ತು ಸಂಪ್ರದಾಯಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ.



ಅಮೆರಿಕ ಮತ್ತು ಇಸ್ರೇಲ್ ತಮ್ಮ ಆಕ್ರಮಣಕಾರಿ ಕ್ರಮಗಳನ್ನು ನಿಲ್ಲಿಸಿ ರಾಜತಾಂತ್ರಿಕ ಕ್ರಮಗಳಿಗೆ ಮರಳುವಂತೆ ಒತ್ತಡ ಹೇರಲು ಅಂತರರಾಷ್ಟ್ರೀಯ ಸಮುದಾಯವು ತುರ್ತಾಗಿ ಕಾರ್ಯಪ್ರವೃತ್ತವಾಗಬೇಕು. ಬಿಜೆಪಿ ನೇತೃತ್ವದ ಭಾರತ ಸರ್ಕಾರವು ತನ್ನ ಅಮೆರಿಕ ಪರ, ಇಸ್ರೇಲ್ ಪರ ವಿದೇಶಾಂಗ ನೀತಿ ನಿಲುವನ್ನು ತ್ಯಜಿಸಬೇಕು. ಜಾಗತಿಕ ದಕ್ಷಿಣಕ್ಕೆ ನಿಜವಾದ ಬದ್ಧತೆಯು ಇಸ್ರೇಲ್‌ನ ಮತ್ತು ಅದರ ಪ್ರಮುಖ ಬೆಂಬಲಿಗ ಯುನೈಟೆಡ್ ಸ್ಟೇಟ್ಸ್‌ನ ಆಕ್ರಮಣವನ್ನು ತಕ್ಷಣವೇ ಕೊನೆಗೊಳಿಸಬೇಕೆಂದು ಸಾಮೂಹಿಕವಾಗಿ ಒತ್ತಾಯಿಸಲು ಇತರ ರಾಷ್ಟ್ರಗಳೊಂದಿಗೆ ಸೌಹಾರ್ದದ ಅಗತ್ಯವಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ವಕೀಲರಿಗೆ ಸೂಕ್ತ ರಕ್ಷಣೆ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಮನವಿ



ನ್ಯಾಯದಾನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ವಕೀಲರಿಗೆ ಸೂಕ್ತ ರಕ್ಷಣೆ ಅಗತ್ಯವಿದೆ. ಅಲ್ಲದೇ ಕಾನೂನು ವಿದ್ಯಾರ್ಥಿಗಳು ಹಾಗೂ ಯುವ-ಕಿರಿಯ ವಕೀಲರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಸೂಕ್ತ ರೀತಿಯಲ್ಲಿ ಪರಿಹಾರ ಮತ್ತು ಸೌಲಭ್ಯಗಳನ್ನು ಒದಗಿಸಬೇಕಿದೆ ಎಂಬುದೂ ಸೇರಿದಂತೆ ವಕೀಲರ ವಿವಿಧ ಬೇಡಿಕೆಗಳಿಗಾಗಿ ಒತ್ತಾಯಿಸಿ ಅಖಿಲ ಭಾರತ ವಕೀಲರ ಒಕ್ಕೂಟ (AILU) ಸರ್ಕಾರಕ್ಕೆ ಮನವಿ ಮಾಡಿದೆ. ಜೂನ್ 20 ರಂದು ರಾಜ್ಯದ ಕಾನೂನು ಸಚಿವರಾದ ಎಚ್.ಕೆ. ಪಾಟೀಲ್ ಅವರನ್ನು ವಿಧಾನ ಸೌಧದಲ್ಲಿ ಭೇಟಿ ಮಾಡಿದ AILU ಕರ್ನಾಟಕ ರಾಜ್ಯ ಸಮಿತಿ ಹಾಗೂ ಬೆಂಗಳೂರು ಜಿಲ್ಲಾ ಸಮಿತಿಯ ಮುಖಂಡರು ಬೇಡಿಕೆಗಳ ಪಟ್ಟಿ ಸಲ್ಲಿಸಿದ್ದಾರೆ.

ಪ್ರಸ್ತುತ ಕರ್ನಾಟಕದಲ್ಲಿ ನ್ಯಾಯ ಕೇಳಿ ಜನಸಾಮಾನ್ಯರು ನ್ಯಾಯಾಲಯಗಳಿಗೆ ಬರುತ್ತಿರುವುದು ಹೆಚ್ಚಾಗಿದೆ. ನ್ಯಾಯ ನಿರೀಕ್ಷೆಯಲ್ಲಿರುವ ಕಕ್ಷಿದಾರರಿಗೆ ನ್ಯಾಯ ಕೊಡಿಸಲು ಶ್ರಮಿಸುತ್ತಿರುವ ವಕೀಲರು ಈ ಪ್ರಕ್ರಿಯೆಯಲ್ಲಿ ಹಲವು ಅಡೆತಡೆಗಳನ್ನು ಹಾಗೂ ಬೆದರಿಕೆಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲಲ್ಲಿ ವಕೀಲರ ಮೇಲೆ ಹಲ್ಲೆ ನಡೆದಿರುವ ಮತ್ತು ವಕೀಲರ ಕೊಲೆ ನಡೆದಿರುವ ವರದಿಗಳಿವೆ. ರಾಜ್ಯ ಸರ್ಕಾರ ವಕೀಲರ ಸಂರಕ್ಷಣೆ ಕಾಯ್ದೆ ತಂದಿದ್ದರೂ ಅದರಿಂದ ಯಾವುದೇ ಪ್ರಯೋಜನ ಇಲ್ಲ. ಅದು ಕೇವಲ ಕಕ್ಷಿದಾರರಿಂದ ಮಾತ್ರವೇ ರಕ್ಷಣೆ ನೀಡುತ್ತದೆ ಹೊರತು, ಪೊಲೀಸರ ಏಕಪಕ್ಷೀಯ ವರ್ತನೆಗಳಿಂದ ರಕ್ಷಣೆ ನೀಡುವುದಿಲ್ಲ. ಹೀಗಾಗಿ ವಕೀಲರ ಸಂರಕ್ಷಣೆ ಕಾಯ್ದೆ-2024ಕ್ಕೆ ಸೂಕ್ತ ತಿದ್ದುಪಡಿಯಾಗಬೇಕು ಎಂಬುದೂ ಸೇರಿದಂತೆ ವಕೀಲರ ವಿವಿಧ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರ ಮುಂದಾಗಬೇಕೆಂದು AILU ಮುಖಂಡರು ಆಗ್ರಹ ಪೂರ್ವಕ ಮನವಿ ಮಾಡಿದ್ದಾರೆ.

ನ್ಯಾಯದಾನ ವ್ಯವಸ್ಥೆಯನ್ನು ಪರಿಣಾಮಕಾರಿಗೊಳಿಸುವ ಹಾಗೂ ನ್ಯಾಯದಾನ ಪ್ರಕ್ರಿಯೆಯನ್ನುತ್ವರಿತಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಹಲವು ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ರಾಜ್ಯದ ನ್ಯಾಯಾಲಯಗಳಲ್ಲಿ ವಿಲೇವಾರಿಗಾಗಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಸಾಕ್ಷಿದೆ. ಕಕ್ಷಿದಾರರಿಗೆ ನ್ಯಾಯದಾನ ವಿಳಂಬವಾಗುತ್ತಿದೆ. ನ್ಯಾಯಾಲಯಗಳು ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿವೆ. ನ್ಯಾಯಾಂಗ ಇಲಾಖೆ ಸೇರಿದಂತೆ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರ ಮುಂದಾಗಬೇಕಿದೆ ಎಂದು ಮನವಿ ಪತ್ರದಲ್ಲಿ ಹೇಳಲಾಗಿದೆ.

ರಾಜ್ಯದೆಲ್ಲೆಡೆ ವಕೀಲರ ಸಹಿ ಸಂಗ್ರಹ

ವಕೀಲರ ಬೇಡಿಕೆಗಳಿಗೆ ಸಂಬಂಧಿಸಿ, ರಾಜ್ಯದಲ್ಲಿನ ವಕೀಲರ ಮತ್ತು ಕಾನೂನು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸಿದ AILU ಕರ್ನಾಟಕ ರಾಜ್ಯ ಸಮಿತಿಯು, ಜೂನ್ 13. 2025 ರಂದು ರಾಜ್ಯದ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವಕೀಲರ ಸಹಿ ಸಂಗ್ರಹಿಸಲು ಹಾಗೂ ಸರ್ಕಾರಕ್ಕೆ ಮನವಿ ನೀಡಲು ಕರೆ ನೀಡಿತ್ತು. ಅದರಂತೆ ಎ.ಐ.ಎಲ್.ಯು ನೇತೃತ್ವದಲ್ಲಿ ರಾಜ್ಯಾದ್ಯಂತ ವಕೀಲರ ಸಹಿಸಂಗ್ರಹ ಮಾಡಲಾಗಿದೆ.

ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ಅಖಿಲ ಭಾರತ ವಕೀಲರ ಒಕ್ಕೂಟದ ನೇತೃತ್ವದಲ್ಲಿ ತಹಶೀಲ್ದಾರರು ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಹಲವು ಕಡೆಗಳಲ್ಲಿ ವಕೀಲರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ ವರದಿಗಳು ಬಂದಿವೆ. ಇದರ ಭಾಗವಾಗಿ ಜೂನ್ 20 ರಂದು AILU ಕರ್ನಾಟಕ ರಾಜ್ಯ ಸಮಿತಿ ಹಾಗೂ ಬೆಂಗಳೂರು ಜಿಲ್ಲಾ ಸಮಿತಿಯು ಕಾನೂನು ಸಚಿವರಿಗೆ ಮನವಿ ಸಲ್ಲಿಸಿ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದ್ದಾರೆ.

ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು

ಬೇಡಿಕೆಗಳ ಕುರಿತು ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಚಿವರನ್ನು ಭೇಟಿ ಮಾಡಿದ ನಿಯೋಗದಲ್ಲಿ ರಾಜ್ಯಾಧ್ಯಕ್ಷರಾದ ಹರೀಂದ್ರ, ರಾಜ್ಯ ಕಾರ್ಯದರ್ಶಿ ಶ್ರೀನಿವಾಸ ಕುಮಾರ, ಖಜಾಂಚಿ ರಾಮಚಂದ್ರರೆಡ್ಡಿ, ಬೆಂಗಳೂರು ಜಿಲ್ಲಾಧ್ಯಕ್ಷರಾದ ಕೆ.ಆರ್.ವೆಂಕಟೇಶ್ ಗೌಡ, ಜಿಲ್ಲಾ ಪದಾಧಿಕಾರಿಗಳಾದ ಆನಂದ್, ಶರಣಬಸವ ಮರದ್, ಹುಳ್ಳಿ ಉಮೇಶ್, ಭೀಮನಗೌಡ, ಹೊಸಕೋಟೆಯ ರಮೇಶ್ ರವಿಕುಮಾರ್, ಹನುಮಂತರಾವ್, ಜಿಲ್ಲಾ ಸಮಿತಿ ಸದಸ್ಯರಾದ ಮೈಲೇಶ್, ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಇತರೆ ಬೇಡಿಕೆಗಳು

ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಮಾರ್ಗಸೂಚಿಯನ್ನು ಪಾಲಿಸಬೇಕು. ಕಿರಿಯ ವಕೀಲರಿಗೆ 2 ವರ್ಷಗಳ ಕಾಲ ರೂ.10.000 ಮಾಸಿಕ ಸಹಾಯಧನ ನೀಡಬೇಕು. ರಾಜ್ಯದ ಎಲ್ಲಾ ತಾಲ್ಲೂಕು ವಕೀಲರ ಸಂಘಗಳಿಗೆ ವರ್ಷಕ್ಕೆ ರೂ.5 ಲಕ್ಷ ಮತ್ತು ಜಿಲ್ಲಾ ವಕೀಲರ ಸಂಘಗಳಿಗೆ ರೂ.10 ಲಕ್ಷ ಅನುದಾನ ಮಂಜೂರು ಮಾಡಬೇಕು.

ರಾಜ್ಯ ಸರ್ಕಾರವು ವಕೀಲರಿಗೆ ವೈದ್ಯಕೀಯ ಹಾಗೂ ಜೀವ ವಿಮೆ ನೀಡಬೇಕು. ಪ್ರತಿ ಜಿಲ್ಲೆಗೆ ಒಂದರಂತೆ ಸರ್ಕಾರಿ ಕಾನೂನು ಕಾಲೇಜುಗಳನ್ನು ಸ್ಥಾಪಿಸಬೇಕು ಹಾಗೂ ಈಗಿರುವ ಅನುದಾನಿತ ಮತ್ತು ಖಾಸಗಿ ಕಾನೂನು ಕಾಲೇಜುಗಳ ಶುಲ್ಕವನ್ನು ಸರ್ಕಾರ ನಿಯಂತ್ರಣ ಮಾಡಬೇಕು. ಹಾಲಿ ಇರುವ ಸರ್ಕಾರಿ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.

ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ವಕೀಲರ ಅಕಾಡೆಮಿಗಳನ್ನು ಸ್ಥಾಪಿಸಬೇಕು. ರಾಜ್ಯದಲ್ಲಿ ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಲು ಮುಂದಾಗಬೇಕು. ಹಾಗೆಯೇ ಈಗಿರುವ ನ್ಯಾಯಾಲಯಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ರಾಜ್ಯದಲ್ಲಿನ ಎಲ್ಲ ನ್ಯಾಯಾಲಯದ ಆವರಣಗಳಲ್ಲಿ ವಕೀಲರಿಗೆ ಚೇಂಬರ್ ಗಳನ್ನು ಸ್ಥಾಪಿಸಬೇಕು. ಕಾನೂನು ವಿದ್ಯಾರ್ಥಿಗಳನ್ನು ಗೊಂದಲಕ್ಕೆ ತಳ್ಳುವ ಮತ್ತು ಅವರ ಭವಿಷ್ಯವನ್ನು ಅಭದ್ರತೆಯಲ್ಲಿಡುವ ಅವೈಜ್ಞಾನಿಕ ಅಖಿಲ ಭಾರತ ಬಾರ್ ಪರೀಕ್ಷೆ(AIBE) ರದ್ದು ಪಡಿಸಬೇಕು. ಕಂದಾಯ ಪ್ರಕರಣಗಳನ್ನು ಸಿವಿಲ್ ನ್ಯಾಯಾಲಯಗಳಿಗೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಬೇಕು. ವಕೀಲರ ಸಂಘದ/ಪರಿಷತ್ತಿನ ಚುನಾವಣೆಯಲ್ಲಿ ಮಹಿಳಾ ವಕೀಲರಿಗೆ ಶೇ.33 ರಷ್ಟು ಮೀಸಲಾತಿ ನೀಡಬೇಕು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾತಿ ಅನುಸಾರ ಪ್ರಾತಿನಿಧ್ಯ ನೀಡಬೇಕು. ವಕೀಲರಿಗೆ ಟೋಲ್ ಶುಲ್ಕ ರಹಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕು ಎಂಬ 13 ಬೇಡಿಕೆಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಭಾರತ ಸಂವಿಧಾನ ಪೀಠಿಕೆಯಲ್ಲಿನ ಅಂಶಗಳಾದ ಪ್ರಜಾಪ್ರಭುತ್ವ, ಜಾತ್ಯಾತೀತತೆ, ನ್ಯಾಯ, ಸಮಾಜವಾದದ ಉದ್ದೇಶಗಳ ಅಡಿಯಲ್ಲಿ ಅಖಿಲ ಭಾರತ ವಕೀಲರ ಒಕ್ಕೂಟ (AILU) 1982ರಲ್ಲಿ ಸ್ಥಾಪನೆಯಾಗಿ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ರಕ್ಷಿಸಲು ಹೋರಾಡುತ್ತಿದೆ. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ದಿವಂಗತ ವಿ.ಆರ್.ಕೃಷ್ಣ ಅಯ್ಯರ್, ಹೆಚ್.ಆರ್. ಖನ್ನಾ, ಎ.ಸಿ.ಗುಪ್ತಾ ಅವರುಗಳು ಹಾಗೂ ಬ್ಯಾರಿಸ್ಟರ್ ಹಾಗೂ ಹಿರಿಯ ವಕೀಲರಾದ ಡ್ಯಾನಿಶ್ ಆಲಿ ಲಲೀಫ್, ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎ.ಗೋಪಾಲಗೌಡ ಮತ್ತು ಉಚ್ಚನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್, ದಿ ಬ್ಯಾರಿಸ್ಟರ್ ಹೆಚ್.ಕೆ.ವಾಸುದೇವ ರೆಡ್ಡಿ ದೇಶದ ಮತ್ತು ರಾಜ್ಯದ ಇತರ ಹಿರಿಯ ವಕೀಲರ ಮುಂದಾಳತ್ವದಲ್ಲಿ AILU ಸಂಘಟನೆಯು ವಕೀಲರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡುತ್ತಿದೆ. ನ್ಯಾಯಾಂಗದ ಘನತೆಯನ್ನು ಎತ್ತಿ ಹಿಡಿಯುತ್ತಾ, ಸಂವಿಧಾನದ ಆಶಯಗಳಿಗೆ ತಕ್ಕಂತೆ ಹಲವಾರು ಕಾರ್ಯಕ್ರಮಗಳ ಮೂಲಕ ವಕೀಲರ ನಡುವೆ ಕಾರ್ಯನಿರ್ವಹಿಸುತ್ತಾ ಬಂದಿದೆ. ಅಲ್ಲದೇ ಜನಸಾಮಾನ್ಯರ ಬದುಕನ್ನು ಉತ್ತಮಗೊಳಿಸಲು ಹಲವಾರು ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಬೆಂಗಳೂರಿನ ಎಲ್ಲಾ ಮೆಟ್ರೋ ರೈಲು ನಿಲ್ದಾಣಗಳಲ್ಲಿ (BMRCL) ನಂದಿನಿ ಮಳಿಗೆಗಳಲ್ಲಿ ಅವಕಾಶ ನೀಡಲು ಒತ್ತಾಯ

ಬೆಂಗಳೂರು ಮೆಟ್ರೋ ರೈಲು ನಿಲ್ದಾಣಗಳಲ್ಲಿ ಅಮುಲ್ ಉತ್ಪಾದನೆಗಳ ಮಾರಾಟ ಮಳಿಗೆಗಳು ತಲೆ ಎತ್ತಿವೆ. ಕರ್ನಾಟಕದ ನಂದಿನಿ ಎಲ್ಲ ರೀತಿಯಲ್ಲಿಯೂ ಉತ್ತಮ ಗುಣಮಟ್ಟದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಿ ಮಾರುತ್ತ ಜನಮನ್ನಣೆ ಗಳಿಸಿದೆ. ಬಹುತೇಕ ಸಣ್ಣ ಮತ್ತು ಅತಿ ಸಣ್ಣ ಹೈನುಗಾರರಿಂದ ಪ್ರತಿದಿನ ಸುಮಾರು ಒಂದು ಕೋಟಿ ಲೀಟರ್‌ಗಿಂತ ಹೆಚ್ಚು ಹಾಲು ಸಂಗ್ರಹಣೆ ಮಾಡುತ್ತಿರುವ ಕೆ.ಎಂ.ಎಫ್ ಬಹುತೇಕ ಮಾರುಕಟ್ಟೆಗೆ ಬೆಂಗಳೂರು ಮಹಾನಗರವನ್ನೇ ಆಶ್ರಯಿಸಿದೆ.

ಸರಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಂದಾದ ಶಾಲಾ ಮಕ್ಕಳಿಗೆ ಹಾಲು ವಿತರಣೆಗೆ ಸರಬರಾಜಾಗುತ್ತಿರುವುದು ಕೂಡಾ ನಂದಿನಿ ಹಾಲೇ ಆಗಿದೆ. ಸಂಗ್ರಹವಾಗುವ ಎಲ್ಲ ಹಾಲು ಮಾರಾಟವಾಗುವುದಿಲ್ಲ, ಹಲವು ಉಪ ಉತ್ಪನ್ನಗಳನ್ನು ತಯಾರಿಸಿದ ಮೇಲೂ ಹಾಲು ಹೆಚ್ಚುವರಿಯಾಗಿ ಉಳಿಯುತ್ತದೆ. ಹೀಗಿರುವಾಗ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿ ಮಳಿಗೆಗಳನ್ನು ತೆರೆಯಲು ಆದ್ಯತೆ ನೀಡಬೇಕು ಎಂದು ಸಿಪಿಐ(ಎಂ) ಪಕ್ಷ ಒತ್ತಾಯಿಸಿದೆ.

ಪ್ರತಿಯೊಂದು ರಾಜ್ಯವು ತನ್ನದೇ ಆದ ಸಹಕಾರಿ ಒಕ್ಕೂಟವನ್ನು ಹೊಂದಿದ್ದು ಕೆಲವು ರಾಜ್ಯಗಳು ಕೊರತೆಯನ್ನು ಕೆಲವು ರಾಜ್ಯಗಳು ಮಿಗತೆಯನ್ನು ಹೊಂದಿವೆ. ಇಂತಹ ಸಂದರ್ಭದಲ್ಲಿ ಪರಸ್ಪರರ ಮಾರುಕಟ್ಟೆ ಕಸಿಯುವ ಅನಾರೋಗ್ಯಕರ ಪೈಪೋಟಿ ನಿವಾರಿಸಲು ಈ ಹಿಂದೆ ಎನ್.ಡಿ.ಡಿ.ಬಿ (NDDB) ಮೂಲಕ ಹೆಚ್ಚುವರಿ ಹಾಲು ಲಭ್ಯ ಇರುವ ಸಹಕಾರಿ ಒಕ್ಕೂಟಗಳಿಂದ ಪಡೆದು ಕೊರತೆ ಇರುವ ರಾಜ್ಯಗಳಲ್ಲಿ ಆ ರಾಜ್ಯದ ಬ್ರಾಂಡ್ ಹೆಸರಿನಲ್ಲೇ ಮಾರಾಟ ಮಾಡಲು ಕ್ರಮ ವಹಿಸಲಾಗುತ್ತಿತ್ತು. ಆ ಮೂಲಕ ರಾಜ್ಯಗಳ ಸಹಕಾರಿ ಒಕ್ಕೂಟಗಳು ಪರಸ್ಪರ ಅನಾರೋಗ್ಯಕರ ಪೈಪೋಟಿಗೆ ಅವಕಾಶ ಇಲ್ಲದಂತೆ ನೋಡಿಕೊಳ್ಳಲಾಗುತ್ತಿತ್ತು.

ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಸಹಕಾರಿ ವಲಯಕ್ಕೆ ಅಮುಲ್ ಲಗ್ಗೆ ಇಡುತ್ತದೆ ಎಂಬುದು ಕೂಡಾ ಚರ್ಚೆಯ ವಿಷಯವಾಗಿತ್ತು. ಈಗ ಮಾಜಿ ಸಂಸದ ಡಿ.ಕೆ.ಸುರೇಶ್‌ರವರು ಕೆ.ಎಂ.ಎಫ್.ನ ನಿರ್ದೇಶಕರಾಗಿದ್ದು ಮುಂದೆ ಅಧ್ಯಕ್ಷರಾಗಲು ಎಲ್ಲ ತಯಾರಿ ನಡೆಸಿರುವ ಸಂದರ್ಭದಲ್ಲಿ ಅಮುಲ್ ಉತ್ಪನ್ನಗಳನ್ನು ಮೆಟ್ರೋ ನಿಲ್ದಾಣಗಳು ಅಥವಾ ಇತರ ಸರಕಾರಿ ಒಡೆತನದ ಜಾಗಗಳಲ್ಲಿ ಮಾರಾಟಕ್ಕೆ ಅನುಕೂಲ ಮಾಡಿಕೊಡುವುದು ಎಷ್ಟು ಸರಿ?

ಟೆಂಡರ್ ಪ್ರಕ್ರಿಯೆಯಲ್ಲಿ ಅಮುಲ್ ಮಾತ್ರ ಭಾಗವಹಿಸಿತ್ತು ಕೆ.ಎಂ.ಎಫ್. ಭಾಗವಹಿಸಿಲ್ಲ ಎಂದರೆ ಅದರ ಹೊಣೆಯಾರದು? ಟೆಂಡರ್ ಹಾಕದಿರಲು ಕಾರಣವೇನೆಂದು ಬಹಿರಂಗ ಪಡಿಸಬೇಕು.

ಈಗಾಗಲೇ ವಿವಿಧ ಖಾಸಗೀ ಹಾಲು ಉತ್ಪಾದಕ ಕಂಪನಿಗಳಿಗೆ ಅವಕಾಶ ಕೊಟ್ಟಿದ್ದು ಸಹಕಾರಿ ಹೈನುಗಾರಿಕಾ ವಲಯಕ್ಕೆ ಪೆಟ್ಟು ನೀಡಿದೆ.

ರೈತರ ಸಹಕಾರಿಯಾಗಿರುವ ನಂದಿನಿಯನ್ನು ಬೆಳೆಸಿ ಉಳಿಸುವುದು ಸರಕಾರದ ಆದ್ಯತೆಯಾಗಬೇಕು ಎಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಸರಕಾರವನ್ನು ಒತ್ತಾಯಿಸಿದೆ.



ತುರ್ತು ಪರಿಸ್ಥಿತಿ: ಒಂದು ಅವ್ಯವಸ್ಥೆಯ ಕಠಿಣ ಕ್ರಮ ಮತ್ತು ಪ್ರತಿರೋಧದ ಯುಗ

1975 ರಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರಿದಾಗ, ಇಂದಿರಾ ಗಾಂಧಿ ಆಡಳಿತವು ಫ್ಯಾಸಿಸ್ಟ್ ಪ್ರವೃತ್ತಿ ಯನ್ನು ಪ್ರದರ್ಶಿಸಿತು ಎಂಬುದು ನಿಜ, ಅದು ಖಂಡಿತ ಫ್ಯಾಸಿಸ್ಟ್ ನಡೆಯಾಗಿತ್ತು. ಕಾಮ್ರೇಡ್ ಎಕೆಜಿ ಯವರು ಇಂದಿರಾ ಗಾಂಧಿಯನ್ನು ಮಹಿಳಾ ಹಿಟ್ಲರ್ ಎಂದು ಬಣ್ಣಿಸಿದ್ದರು. ಆದಾಗ್ಯೂ, ಫ್ಯಾಸಿಸಂ ಅಲ್ಲ, ಅದರ ಪ್ರವೃತ್ತಿ ಗಳನ್ನು ಪ್ರದರ್ಶಿಸಿದ ಅತ್ಯಂತ ಸರ್ವಾಧಿಕಾರಿ ಕ್ರೂರ ಆಡಳಿತ ವೈಖರಿ ಯಾಗಿತ್ತು.

ಅರ್.ಎಸ್.ಎಸ್. ನ ಹೆಗ್ಡೆವಾರ್ ಮತ್ತು ಗೋಲ್ವಾಲ್ಕರ್ ರವರು ಬೆಂಬಲಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಲು ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಿಕೊಳ್ಳಬೇಡಿ ಎಂದು ಭಾರತೀಯ ಯುವಕರಿಗೆ ಉಪದೇಶ ನೀಡಿದ್ದರು. ಆಗ ಸಾವರ್ಕರ್ ಅವರು ವಸಾಹತು ಶಾಹಿ ಅಧಿಕಾರಿಗಳಿಗೆ ಅರ್ಧ ಡಜನ್ ಪತ್ರಗಳನ್ನು ಬರೆದು, ದಯೆ ಕೋರಿದ್ದವರು. ತಮ್ಮ ಆರ್.ಎಸ್.ಎಸ್. ನ ಸಂಪ್ರದಾಯವನ್ನು ತುರ್ತುಪರಿಸ್ಥಿತಿಯ ಸಮಯದಲ್ಲೂ ಮುಂದುವರಿಸಿದರು. ಅವರ ಸರಸಂಘಚಾಲಕ ಮಧುಕರ್ ದತ್ತಾತ್ರೇಯ ದೇವರಸ್ ಕ್ಷಮೆ ಕೋರಿ ಹಲವು ಪತ್ರಗಳನ್ನು ಬರೆದರು. ತುರ್ತು ಪರಿಸ್ಥಿತಿ ಹೇರಿದ ನಂತರ, ಆಗಸ್ಟ್ 22, 1975 ರಲ್ಲಿ, ಇಂದಿರಾಗಾಂಧಿ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ಮಧುಕರ್ ದೇವರಸ್ ರವರು "ಸಮಯೋಜಿತ ಮತ್ತು ಸಮತೋಲಿತ" ಎಂದು ಶ್ಲಾಘಿಸಿದ್ದರು.

ಅದರೀಗ, ಆರ್.ಎಸ್.ಎಸ್. ತುರ್ತು ಪರಿಸ್ಥಿತಿ ಯನ್ನು ವೀರೋಚಿತವಾಗಿ ವಿರೋಧಿಸಿತ್ತು ಎಂದು ಹೋಗಳಿಕೊಳ್ಳುತ್ತಿದ್ದಾರೆ.

ಆದರೀಗ ಮೋದಿ ಸರ್ಕಾರ ಅಘೋಷಿತ ತುರ್ತು ಪರಿಸ್ಥಿತಿ ಯನ್ನು ದೇಶದ ಮೇಲೆ ಹೇರಿದೆ.

ಎಂ.ಎ. ಬೇಬಿ

ಐವತ್ತು ವರ್ಷಗಳ ಹಿಂದೆ ನಾನು 'ಭಾರತ ವಿದ್ಯಾರ್ಥಿ ಸಂಘಟನೆ' ಕೇರಳ ರಾಜ್ಯ ಅಧ್ಯಕ್ಷನಾಗಿದ್ದಾಗ ಮತ್ತು 'ಕೊಲ್ಲಂನಲ್ಲಿರುವ ಶ್ರೀ ನಾರಾಯಣ ಕಾಲೇಜಿ' ನಲ್ಲಿ ರಾಜಕೀಯ ವಿಜ್ಞಾನದ ವಿದ್ಯಾರ್ಥಿಯಾಗಿದ್ದಾಗ ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಅದರ ಘೋಷಣೆಯ ಒಂದು ವಾರಕ್ಕಿಂತ ಕಡಿಮೆ ಅವಧಿಯಲ್ಲಿ, ನಾವು ತುರ್ತು ಪರಿಸ್ಥಿತಿಯನ್ನು ಧಿಕ್ಕರಿಸಿ ತಿರುವನಂತಪುರಂ ನಗರದ ಹೃದಯಭಾಗದಲ್ಲಿ, ಸರ್ಕಾರಿ ಸಚಿವಾಲಯದ ಮುಂದೆ 'ಅರೇಬಿಯನ್ ಸಮುದ್ರದಲ್ಲಿ ತುರ್ತು ಪರಿಸ್ಥಿತಿ' ಎಂಬಂತಹ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಕಾರ್ಯವನ್ನು ನಡೆಸಿದೆವು. ಆ ಕರಾಳ ದಿನಗಳಲ್ಲಿ ಸಾಮಾನ್ಯವಾಗಿದ್ದ ಲಾಕಪ್ ನಲ್ಲಿ ದೈಹಿಕ ಚಿತ್ರಹಿಂಸೆಯ ನಂತರ, ನಮ್ಮನ್ನು ಭಾರತದ ರಕ್ಷಣಾ (ಡಿಐಆರ್) ಕಾಯ್ದೆಯ ಅಡಿಯಲ್ಲಿ ಬಂಧಿಸಿ ಜೈಲಿಗೆ ಹಾಕಲಾಯಿತು.



ಎ.ಕೆ. ಗೋಪಾಲನ್

ಕಾಮ್ರೇಡ್ ಎ.ಕೆ ಗೋಪಾಲನ್, ಇಎಂಎಸ್ ನಂಬೂದಿರಿಪಾದ್ ಮತ್ತು ಇತರ ಗಣ್ಯ ನಾಯಕರನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿ ಬಂಧಿಸಲಾಯಿತು. ಆದರೆ ಜನತೆಯ ಆಕ್ರೋಶದಿಂದ ಅಶಾಂತಿ ಉಂಟಾಗುವ ಭಯದಿಂದಾಗಿ ಆ ಜನಪ್ರಿಯ ಸಂಗಾತಿಗಳನ್ನು ಶೀಘ್ರವೆ ಬಿಡುಗಡೆ ಮಾಡಲಾಯಿತು. ಪ್ರಸ್ತುತ ಮತ್ತು ಮಾಜಿ ಪಾಲಿಟ್ ಬ್ಯೂರೋ ಸದಸ್ಯರು ಸೇರಿದಂತೆ ಹಲವಾರು ಸಿಪಿಐ(ಎಂ) ನಾಯಕರನ್ನು ಆಂತರಿಕ ಭದ್ರತಾ ನಿರ್ವಹಣೆ ಕಾಯ್ದೆ (ಎಂಐಎಸ್ಎ) ಮತ್ತು ಡಿಐಆರ್ ಅಡಿಯಲ್ಲಿ ಬಂಧಿಸಲಾಯಿತು.

ತುರ್ತು ಪರಿಸ್ಥಿತಿ ಘೋಷಣೆಗೂ ಮುಂಚೆಯೇ, 1972 ರಿಂದ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರ್ ರೇ ನೇತೃತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಅರೆ–ಫ್ಯಾಸಿಸ್ಟ್ ಭಯೋತ್ಪಾದನೆಯ ಆಳ್ವಿಕೆ ಇತ್ತು. ಆಂತರಿಕ ತುರ್ತು ಪರಿಸ್ಥಿತಿಯ ಸಮಯದಲ್ಲಿ ಇಂದಿರಾ ಗಾಂಧಿ ಆಡಳಿತವು ಫ್ಯಾಸಿಸ್ಟ್ ಪ್ರವೃತ್ತಿಯನ್ನು ಪ್ರದರ್ಶಿಸಿತು ಎಂಬುದು ನಿಜ. ಅನೇಕರು ಅದನ್ನು ಸಾಧ್ಯವಾದಷ್ಟು ಪ್ರಬಲ ಪದಗಳಲ್ಲಿ, ಫ್ಯಾಸಿಸ್ಟ್ ನಡೆ ಎಂದು ಖಂಡಿಸಿದ್ದರು ಎಂಬುದು ನಿಜ. ಅಲ್ಲದೆ, ಕಾಮ್ರೇಡ್ ಎಕೆಜಿ, ಇಂದಿರಾ ಗಾಂಧಿಯನ್ನು 'ಮಹಿಳಾ ಹಿಟ್ಲರ್' ಎಂದು ಬಣ್ಣಿಸಿದ್ದರು ಎಂಬುದನ್ನು ಮರೆಯುವಂತಿಲ್ಲ. ಆದಾಗ್ಯೂ, ಇದು ಫ್ಯಾಸಿಸಂ ಅಲ್ಲ, ಆದರೆ ಅಂತಹ ಕೆಲವು ಪ್ರವೃತ್ತಿಗಳನ್ನು ಪ್ರದರ್ಶಿಸಿದ ಅತ್ಯಂತ ಸರ್ವಾಧಿಕಾರಿ ಕ್ರೂರ ಆಡಳಿತವಾಗಿತ್ತು.

ಇಂತಹ ಗಂಭೀರ ರಾಜಕೀಯ ಸಂದರ್ಭದಲ್ಲಿಯೇ ಕಾಮ್ರೇಡ್ ಇಎಂಎಸ್ ಅವರು ಜಾರ್ಜಿ ಡಿಮಿಟ್ರೋವ್ ಅವರ ಪ್ರಸಿದ್ಧ ಪ್ರಬಂಧವಾದ, 'ಫ್ಯಾಸಿಸಂ ವಿರುದ್ಧ ಯುನೈಟೆಡ್ ಫ್ರಂಟ್' ಅನ್ನು ತಮ್ಮದೇ ಆದ ದೀರ್ಘ ಮುನ್ನುಡಿಯೊಂದಿಗೆ ಮಲಯಾಳಂ ನಲ್ಲಿ ಪ್ರಕಟಿಸಲು ಮುಂದಾದರು ಎಂಬುದನ್ನು ಗಮನಿಸಬೇಕು. ಡಿಮಿಟ್ರೋವ್ ಪ್ರಬಂಧ ಎಂದು ಕರೆಯಲ್ಪಡುವ ಆ ದಾಖಲೆಯು ಫ್ಯಾಸಿಸಂ ಎಂದರೇನು? ಮತ್ತು ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ವಿಶಾಲ ಮೈತ್ರಿ ಅಥವಾ ವೇದಿಕೆಯನ್ನು ಹೇಗೆ ನಿರ್ಮಿಸುವುದು? ಎಂಬುದನ್ನು ಚರ್ಚಿಸುವ ಪ್ರಮುಖ ಪಠ್ಯವಾಗಿ ಇಂದಿಗೂ ಆ ಪ್ರಬಂಧ ಉಳಿದಿದೆ. 1935 ರಲ್ಲಿ, ಲೆನಿನ್ ನೇತೃತ್ವದಲ್ಲಿ ಸ್ಥಾಪನೆಯಾದ ಮೂರನೇ ಅಂತರರಾಷ್ಟ್ರೀಯ (ಕಮ್ಯುನಿಸ್ಟ್ ಅಂತರರಾಷ್ಟ್ರೀಯ ಎಂದೂ ಕರೆಯಲ್ಪಡುವ) 7ನೇ ಕಾಂಗ್ರೆಸ್ ನಲ್ಲಿ, ಮುಸೋಲಿನಿಯ ಇಟಲಿ, ಹಿಟ್ಲರನ ಜರ್ಮನಿ ಮತ್ತು ಇತರ ದೇಶಗಳಲ್ಲಿ ಹೊರಹೊಮ್ಮಿದ ಹೊಸ ವಿದ್ಯಮಾನವನ್ನು ಸಮಗ್ರವಾಗಿ ಅದರಲ್ಲಿ ವಿಶ್ಲೇಷಿಸಲಾಗಿದೆ.



ಇಎಂಎಸ್ ನಂಬೂದಿರಿಪಾದ್

ಆ ದಾಖಲೆಯು ಡಿಮಿಟ್ರೋವ್ ಅವರ ಪ್ರಭಾವಶಾಲಿ ಸಮಾರೋಪ ಭಾಷಣ ಸೇರಿದಂತೆ ಕಾಂಗ್ರೆಸ್ ಚರ್ಚೆಗಳನ್ನು ಪರಿಣಾಮಕಾರಿಯಾಗಿ ಸಂಕ್ಷೇಪಿಸಿತು.

ಡಿಮಿಟ್ರೋವ್ ಫ್ಯಾಸಿಸಂ ಅನ್ನು "ಹಣಕಾಸು ಬಂಡವಾಳದ ಅತ್ಯಂತ ಪ್ರತಿಗಾಮಿ, ಅತ್ಯಂತ ದುರಭಿಮಾನಿ ಮತ್ತು ಅತ್ಯಂತ ಸಾಮ್ರಾಜ್ಯಶಾಹಿ ಅಂಶಗಳ ಮುಕ್ತ ಭಯೋತ್ಪಾದಕ ಮತ್ತು ಸರ್ವಾಧಿಕಾರ" ಎಂದು ವ್ಯಾಖ್ಯಾನಿಸಿದ್ದಾರೆ. "ಫ್ಯಾಸಿಸಂನ ಯಾವುದೇ ಸಾಮಾನ್ಯ ಗುಣಲಕ್ಷಣವು, ಅದು ಎಷ್ಟೇ ಸರಿಯಾಗಿದ್ದರೂ, ಫ್ಯಾಸಿಸಂ'ನ ಬೆಳವಣಿಗೆಯ ವಿಶೇಷ ಲಕ್ಷಣಗಳು ಪ್ರತ್ಯೇಕ ದೇಶಗಳಲ್ಲಿ ಮತ್ತು ಅದರ ವಿವಿಧ ಹಂತಗಳಲ್ಲಿ, ಫ್ಯಾಸಿಸಂನ ವಿವಿಧ ರೂಪಗಳಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಅಧ್ಯಯನ ಮಾಡುವ ಮತ್ತು ಗಣನೆಗೆ ತೆಗೆದುಕೊಳ್ಳುವ ಅಗತ್ಯದಿಂದ ನಮ್ಮನ್ನು ಮುಕ್ತಗೊಳಿಸುವುದಿಲ್ಲ. ಪ್ರತಿ ದೇಶದಲ್ಲಿ ರಾಷ್ಟ್ರೀಯ ವಿಶಿಷ್ಟ ಸಂಬಂಧಗಳು, ಫ್ಯಾಸಿಸಂನ ನಿರ್ದಿಷ್ಟ ರಾಷ್ಟ್ರೀಯ ವೈಶಿಷ್ಟ್ಯಗಳನ್ನು ತನಿಖೆ ಮಾಡುವುದು, ಅಧ್ಯಯನ ಮಾಡುವುದು ಮತ್ತು ಖಚಿತ ಪಡಿಸಿಕೊಳ್ಳುವುದು ಮತ್ತು ಅದಕ್ಕೆ ಅನುಗುಣವಾಗಿ ಫ್ಯಾಸಿಸಂ ವಿರುದ್ಧದ ಹೋರಾಟದ ಪರಿಣಾಮಕಾರಿ ವಿಧಾನಗಳು ಮತ್ತು ರೂಪಗಳನ್ನು ರೂಪಿಸುವುದು ಅವಶ್ಯಕ." ಎಂದು ಪ್ಯಾಸಿಸಂ ನ ಹಲವು ಬಗೆಯ ರೂಪಾಂತರಗಳನ್ನು ವ್ಯಾಕ್ಯಾನಿಸಿದ್ದಾರೆ.

ಫ್ಯಾಸಿಸಂನಿಂದ ರಾಜ್ಯ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಮತ್ತು ಒಂದು ಬೂರ್ಜ್ವಾ ಸರ್ಕಾರದಿಂದ ಮತ್ತೊಂದು ಬೂರ್ಜ್ವಾ ಸರ್ಕಾರಕ್ಕೆ ಉತ್ತರಾಧಿಕಾರವನ್ನು ವರ್ಗಾಯಿಸುವುದು ಮಾತ್ರವಲ್ಲ, ಬದಲಿಗೆ ಆಡಳಿತ ವರ್ಗದ ಒಂದು ರೂಪದ ರಾಜ್ಯವನ್ನು ಮತ್ತೊಂದು ಬೂರ್ಜ್ವಾ ಸಂಸದೀಯ ಪ್ರಜಾಪ್ರಭುತ್ವದಿಂದ ಬದಲಾಯಿಸುವುದು. 1972 ರಲ್ಲಿ ಮಧುರೈನಲ್ಲಿ ನಡೆದ ಸಿಪಿಐ(ಎಂ) ನ 9ನೇ ಮಹಾಧಿವೇಶನದಲ್ಲಿ, ಭಾರತದ ಆರ್ಥಿಕತೆ'ಯಲ್ಲಿನ ತೀವ್ರ ಸಮಸ್ಯೆಗಳು ಮತ್ತು 1971 ರ ಚುನಾವಣೆಗಳಲ್ಲಿ ನೀಡಿದ 'ಗರೀಬಿ ಹಟಾವೋ' ಸೇರಿದಂತೆ ನೀಡಿದ ಭರವಸೆಗಳನ್ನು ಕಾರ್ಯಗತಗೊಳಿಸುವಲ್ಲಿನ ವೈಫಲ್ಯವು ಭಾರತೀಯ ಸಾರ್ವಜನಿಕರಲ್ಲಿ ವ್ಯಾಪಕ ಅತೃಪ್ತಿಯನ್ನು ಸೃಷ್ಟಿಸುತ್ತಿದೆ ಎಂದು ಗಮನ ಸೆಳೆದರು. ಆ ಮಹಾಧಿವೇಶನದಲ್ಲಿ ಅಂಗೀಕರಿಸಲ್ಪಟ್ಟ ರಾಜಕೀಯ ನಿರ್ಣಯದಲ್ಲಿ, ಇಂದಿರಾ ಗಾಂಧಿ ಆಡಳಿತವು ತ್ವರಿತವಾಗಿ ದಬ್ಬಾಳಿಕೆಯ ಸರ್ವಾಧಿಕಾರಿ ಆಡಳಿತವಾಗಿ ರೂಪಾಂತರಗೊಳ್ಳುತ್ತಿದೆ ಎಂದು ಹೇಳಲಾಗಿತ್ತು. ಸಿಪಿಐ(ಎಂ) ಬರಲಿರುವ ಅಪಾಯಗಳನ್ನು ಪ್ರವಾದಿಯಂತೆ ಮುನ್ಸೂಚಿಸಿ ಭಾರತೀಯ ಪ್ರಜಾಪ್ರಭುತ್ವದ ಕರಾಳ ದಿನಗಳನ್ನು ಸಕ್ರಿಯವಾಗಿ ವಿರೋಧಿಸಿತ್ತು. ಆರ್.ಎಸ್.ಎಸ್. ನವರು ಅದನ್ನು ಬೆಂಬಲಿಸಿದ್ದರು.

ಹೆಗ್ಡೆವಾರ್ ಮತ್ತು ಗೋಲ್ವಾಲ್ಕರ್ ಅವರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ತಮ್ಮ ಶಕ್ತಿಯನ್ನು ವ್ಯರ್ಥ ಮಾಡಿಕೊಳ್ಳಬೇಡಿ ಎಂದು ಭಾರತೀಯ ಯುವಕರಿಗೆ ಉಪದೇಶ ನೀಡಿದ್ದರು. ಹಾಗಾಗಿಯೇ, ಸಾವರ್ಕರ್ ಅವರು ವಸಾಹತುಶಾಹಿ ಅಧಿಕಾರಿಗಳಿಗೆ ಅರ್ಧ ಡಜನ್ ದಯೆ ಕೋರಿದ ಅರ್ಜಿಗಳಲ್ಲಿ ಪ್ರತಿಫಲಿಸುವ ಆರ್.ಎಸ್.ಎಸ್. ಸಂಪ್ರದಾಯವನ್ನು ತುರ್ತು ಪರಿಸ್ಥಿತಿಯ ಸ ವ ುಂ ು ದ ಲ್ಲಿ ಂ ು ೂ ಅವರು ಎತ್ತಿಹಿಡಿದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಆರ್.ಎಸ್.ಎಸ್. ಸರಸಂಘಚಾಲಕ್ ಮಧುಕರ್ ದತ್ತಾತ್ರೇಯ ದೇವರಸ್ ಅವರು ಇಂದಿರಾ ಗಾಂಧಿಗೆ ಕ್ಷಮೆ ಕೋರಿ ಪತ್ರಗಳನ್ನು ಬರೆದರು. ದೇವರಸ್ ಬರೆದ ಈ ಪತ್ರಗಳ ಪ್ರತಿಯನ್ನು ಅವರು ಬರೆದ "ಹಿಂದೂ ಸಂಘಟನ್ ಔರ್ ಸತ್ತವಾದಿ ರಾಜನೀತಿ" ಪುಸ್ತಕದ ಅನುಬಂಧವಾಗಿ ಲಗತ್ತಿಸಲಾಗಿದೆ.

ಪುಟ 12 ಕ್ಕೆ

ಬಾಲಕಿಯರ ಭವಿಷ್ಯವನ್ನೇ ಹೊಸಕುವ ಬಾಲ್ಯವಿವಾಹವೆಂಬ ಉರುಳು

ಬಾಲ್ಯ ವಿವಾಹ ಮತ್ತು ಅಪ್ರಾಪ್ತ ವಯಸ್ಕ ಬಾಲಕಿಯರ ಮೇಲೆ ನಡೆದಿರುವ ಅತ್ಯಾಚಾರದ ಪೋಸ್ಕೋ ಪ್ರಕರಣಗಳ ಮಾಹಿತಿಗಳು ಬೆಚ್ಚಿ ಬೀಳಿಸುವಂತಿವೆ. ಈ ಅಗಾಧ ಸಮಸ್ಯೆಗೆ ಇರುವ ವಿವಿಧ ಆಯಾಮಗಳೇನು ಮತ್ತು ಎದುರಿಸುವ ಮಾರ್ಗಗಳೇನು ಎನ್ನುವುದನ್ನು ವಿಶ್ಲೇಷಿಸಿದ್ದಾರೆ ಲೇಖಕರು.



ಕೆ. ನೀಲಾ

ಎರಡು ಸುದ್ದಿಗಳು ನಮ್ಮನ್ನು ತಲ್ಲಣಗೊಳಿಸಿದ್ದು ಹೌದು. ಒಂದು ಹತ್ತು ತಿಂಗಳಲ್ಲಿ 26,463 ಬಾಲಗರ್ಭಿಣಿಯರು ಪತ್ತೆ ಮತ್ತು ಇನ್ನೊಂದು ನಾಲ್ಕು ವರ್ಷಗಳಲ್ಲಿ 15,409 ಫೋಕ್ಸೊ ಪ್ರಕರಣಗಳು ದಾಖಲು. ರಾಜ್ಯದಲ್ಲಿ ಸರಾಸರಿ ಪ್ರತಿ ದಿನ 10 ಫೋಕ್ಸೊ ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ರಾಜಧಾನಿ ಬೆಂಗಳೂರಿನಲ್ಲಿ. ಸುಮಾರು 1,386 ದಾಖಲಾಗಿವೆ. ಇದು ತೀವ್ರ ಚಿಂತೆಯ ಸಂಗತಿಯಾಗಿದೆ.

ಫೋಕ್ಸೊ ಪ್ರಕರಣಗಳು ಮತ್ತು ಬಾಲ್ಯ ವಿವಾಹ ಅಥವ ಬಾಲಗರ್ಭಿಣಿಯರು ಇವೆಲ್ಲವೂ ಭಿನ್ನ ಭಿನ್ನ ಅನ್ನಿಸಿದರೂ ಒಂದೇ ಅರ್ಥವ್ಯಾಪ್ತಿಯಲ್ಲಿ ಇವೆ. ವಿವಾಹವಾದಲ್ಲಿ ಪುರುಷನೊಬ್ಬ ತಾಳಿಯ ನೆರಳಿನಲ್ಲಿ ಬಾಲೆಯ ದೇಹದ ಮೇಲೆ ದಾಳಿ ಮಾಡುತ್ತಾನೆ. ಈ ಕಾರಣದಿಂದ ಅವಳ ಗರ್ಭಾಶಯದಲ್ಲಿ ಮೂಡುವ ಕೂಸಿಗೆ ಈ ಕೂಸೇ ತಾಯಿ. ಎಳೆಗರುವನ್ನು ಬಂಡಿಗೆ ಬಿಗಿದು ಎಳೆಯಲು ಹಚ್ಚುವ ಕ್ರೌರ್ಯವು ಊಹೆ ಮಾಡಿಕೊಳ್ಳಬಹುದು. ಮದುವೆ ಮಾಡದೇ ಇದ್ದರೆ ಅವಳನ್ನು ಕಾಡುವ ಲೈಂಗಿಕ ಹಿಂಸೆಗೆ ಪಕ್ಕಾಗಿಸುವ ಕ್ರೂರ ಮನಸುಗಳು ಮನೆಯಿಂದಲೇ ಪರಿಚಿತ ಪರಿಸರದಿಂದಲೇ ಅಧಿಕ ಎಂಬುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಶೇ.64%ಕ್ಕೂ ಹೆಚ್ಚು ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣಗಳು ಕುಟುಂಬ ವ್ಯಾಪ್ತಿಯಲ್ಲಿ ಮತ್ತು ತೀರ ಪರಿಚಿತರಿಂದ. 2025ರಲ್ಲಿ ಬೆಳಕಿಗೆ ಬಂದ ಫೋಕ್ಸೊ ಪ್ರಕರಣಗಳು ದಕ್ಷಿಣ ಕರ್ನಾಟಕದಿಂದ ಹೆಚ್ಚು ವರದಿಯಾಗಿವೆ. ಶಿವಮೊಗ್ಗ (456), ಮೈಸೂರು (442), ಚಿಕ್ಕಬಳ್ಳಾಪುರ(410), ತುಮಕೂರು(362), ಬೆಳಗಾವಿ(335), ಮಂಡ್ಯ(311), ಹಾಸನ(322), ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಸುಮಾರು 100 ಪ್ರಕರಣಗಳು ವರದಿಯಾಗಿವೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಈ ಸಂಖ್ಯೆಯು 150 ದಾಟಿದ್ದು ಗಮನಿಸಬೇಕು.

> **ಬಾಲ್ಯ ವಿವಾಹವೆನ್ನುವುದು ಮಹಿಳೆಗೆ ತನ್ನ ಬದುಕಿನ ಆಯ್ಕೆಯ ಹಕ್ಕನ್ನು ನಿರಾಕರಿಸುವ ಬಲವಾದ ಅಸ್ತ್ರವಾಗಿದೆ. ಇದು ಕೇವಲ ಸಾಮಾಜಿಕ ಅನಿಷ್ಠವಲ್ಲ. ಇದು ಸಮಾಜದ ಅಭಿವೃದ್ಧಿಯನ್ನು ಅಳೆಯುವ ಮಾನದಂಡವೂ ಆಗಿದೆ.**

ಅಸಹಾಯಕ, ಅಘಾತಕಾರಿ

2021ರಲ್ಲಿ ನ್ಯಾಷನಲ್ ಫ್ಯಾಮಿಲಿ ಹೆಲ್ತ್ ನಡೆಸಿದ ಸಮೀಕ್ಷೆಯ ಪ್ರಕಾರ ಜಗತ್ತಿನಲ್ಲಿ 64 ಕೋಟಿ ಬಾಲ್ಯ ವಿವಾಹ ಘಟಿಸಿವೆ. ಪ್ರತಿ ವರ್ಷ 1.2 ಕೋಟಿ ಸೇರ್ಪಡೆ ಆಗುತ್ತಲೇ ಇರುತ್ತವೆ. ಈ ಬಾಲ್ಯ ವಿವಾಹವೆಂಬ ಹೇರಿಕೆಯು ಗಂಡಸರಿಗಿಂತ ಹುಡುಗಿಯರ ಹೆಗಲೇರುತ್ತದೆ. ಭಾರತದಲ್ಲಿ ಬಾಲ್ಯವಿವಾಹಕ್ಕೆ ತುತ್ತಾಗುವ ಬಾಲಕಿಯರು 13.46% ಇದ್ದರೆ ಹುಡುಗರ ಪ್ರಮಾಣವು 1.45% ಆಗಿದೆ. ಒಟ್ಟು ಭಾರತದಲ್ಲಿ ಘಟಿಸುವ ಬಾಲ್ಯವಿವಾಹಗಳು 23.3%ಗಿಂತಲೂ ಜಾಸ್ತಿ. ಇದರಲ್ಲಿ ಬಿಹಾರ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ಅಂದರೆ ತಮಗಿಂತ ಅತಿ ಹೆಚ್ಚು ವಯಸ್ಸಿನ ಹುಡುಗರ ಜೊತೆ ಎಳೆಬಾಲಕಿಯರು ದೇಹವನ್ನೂ ದಿನವನ್ನೂ ಹಂಚಿಕೊಳ್ಳಬೇಕು!

ಬಾಲ್ಯ ವಿವಾಹಗಳು ಘಟಿಸುವಾಗ ವಿವಾಹಕ್ಕೆ ಒಳಗಾಗುವ ಮಕ್ಕಳು ತೀರ ಅಸಹಾಯಕರಾಗಿರುತ್ತಾರೆ. ಅವರ ನೆರವಿಗೆ ಯಾರೂ ಬಾರದೇ ಇರುವುದು ಮಕ್ಕಳ ಪರಿಸ್ಥಿತಿಯು ಎಷ್ಟು ಆಘಾತಕಾರಿಯಾಗಿರುತ್ತದೆ ಎಂದು ಅಂದಾಜು ಮಾಡಬಹುದು.

ಬಾಲಕಿಯರ ಪ್ರತಿರೋಧ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಕಾಡುಗೊಲ್ಲರ ಹಟ್ಟಿಯೊಂದರಲ್ಲಿ ಹೆತ್ತವರು ಬಂಧುಬಳಗ ಎಲ್ಲರೂ ಸೇರಿ ಅತ್ಯಂತ ಕ್ರೂರ ರೀತಿಯಲ್ಲಿ ಹದಿನಾಲ್ಕು ವರ್ಷದ ಬಾಲಕಿಗೆ ತಾಳಿ ಕಟ್ಟಿಸಲು ಹೆಣಗಿದ ಪ್ರಕರಣವು ಬಯಲಿಗೆ ಬಂದಿದೆ. ಬಾಲಕಿಯು ತೀವ್ರ ಪ್ರತಿರೋಧ ಒಡ್ಡಿದ್ದಾಳೆ. ಸುತ್ತಮುತ್ತಲು ಇದ್ದವರೇ ಆಸರೆಯಾಗಬೇಕಿದ್ದ ಹೆತ್ತವರೇ ಮಗುವನ್ನು ಹೀಗೆ ಕಂದಕಕ್ಕೆ ದೂಕುವಾಗ ಮಗುವಿಗಾಗುವ ಆಘಾತ ಅರಿಯಬಹುದು. ಇದೇ ಸಂದರ್ಭದಲ್ಲಿ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಬಾಲಕಿಯೋರ್ವಳು ಪೋಷಕರು ನಿಶ್ಚಯ ಮಾಡಿದ್ದ ಬಾಲ್ಯವಿವಾಹವನ್ನು ನಿಲ್ಲಿಸಲು ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ಬಚಾವಾಗಿದ್ದಾಳೆ. ಇದು ಅತ್ಯಂತ ಶ್ಲಾಘನೀಯವಾದ ನಡೆಯಾಗಿದೆ.

ವೈಫಲ್ಯ

ಬಾಲ್ಯವಿವಾಹ ತಡೆಗಾಗಿ ಸರಕಾರ ಅನೇಕ ಪ್ರಯತ್ನಗಳು ನಡೆಸಿದ ಕುರಿತು ಆಗಾಗ ವರದಿಯಾಗುತ್ತಿರುತ್ತವೆ. ಆದಾಗ್ಯೂ ಬಾಲ್ಯವಿವಾಹಗಳು ಘಟಿಸುತ್ತಿವೆ. ಹೀಗೆ ವರದಿಯಾಗುತ್ತಿರುವ ಬಾಲ್ಯವಿವಾಹಗಳ ಮತ್ತು ಬಾಲಗರ್ಭಿಣಿಯರ ಸಂಖ್ಯೆಯು ತಾಳೆ ಮಾಡಿ ನೋಡಿದರೆ ಬಾಲ್ಯ ವಿವಾಹ ತಡೆಯುವಲ್ಲಿ ಸರಕಾರ, ಸಮಾಜ ವಿಫಲವಾಗುತ್ತಿವೆ ಎನ್ನುವುದಕ್ಕೆ ಆಧಾರ ಒದಗಿಸುತ್ತದೆ. ಬೆಳಗಾವಿ ಬಾಲ್ಯವಿವಾಹ 2024 ರಲ್ಲಿ 79 ತೋರಿಸಿದರೆ ಬಾಲಗರ್ಭಿಣಿಯರು 2,622 ಇರುವರು. ಅಂದರೆ 2024ಕ್ಕೂ ಮುನ್ನಾ ವರ್ಷಗಳಿಂದಲೂ ನಿರಂತರವಾಗಿ ಬಾಲ್ಯವಿವಾಹಗಳು ಘಟಿಸುತ್ತಿವೆ ಅಂತ ಅರ್ಥ. 2024–25ರಲ್ಲಿ ಸರಕಾರದ ಪ್ರಕಾರ ಈವರೆಗೆ 2349 ರಷ್ಟು ಬಾಲ್ಯವಿವಾಹಗಳು ನಿಲ್ಲಿಸಿದ ವರದಿ ಇದೆ. ಆದರೆ ಮದುವೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ಕೋವಿಡ್ ಸಮಯದಲ್ಲಿ ಬಾಲ್ಯವಿವಾಹ ನಡೆಸಲು ಪ್ರಶಸ್ತವಾದದ್ದಾಗಿತ್ತು. ಲೈಂಗಿಕ ದೌರ್ಜನ್ಯಕ್ಕೂ, ಕೌಟುಂಬಿಕ ದೌರ್ಜನ್ಯಕೂ ಮತ್ತು ಅತಿ ಕೆಲಸದ ಹೊರೆಗೂ ಕೋವಿಡ್ ಸಮಯ ಪ್ರಶಸ್ತವಾಗಿತ್ತು. ಈ ಹೊತ್ತಿನಲ್ಲಿ ಬಹಿರಂಗಗೊಳ್ಳದ ಬಾಲ್ಯವಿವಾಹಗಳ ಬಾಲಕಿಯರ ಸಂಖ್ಯೆಯು ಬಾಲಗರ್ಭಿಣಿಯರ ಪಟ್ಟಿಯಲ್ಲಿ ಎದ್ದು ತೋರುತ್ತಿದೆ.

ಸಮಾಜದ ನಡುವಲ್ಲಿ, ಎಲ್ಲರ ಸಮಕ್ಷಮದಲ್ಲಿ ಮದುವೆಗಳು ನಡೆಯುತ್ತವೆ. ಎಷ್ಟೊ ಸಾರಿ ಸಾಮೂಹಿಕ ವಿವಾಹಗಳಲ್ಲಿಯೂ ನಡೆಯುತ್ತಿವೆ. ಚುನಾಯಿತ ಸದಸ್ಯರು ಗಣ್ಯರೆನಿಸಿಕೊಂಡವರು ಅಧಿಕಾರಿಗಳು ಇದಕ್ಕೆ ಸಾಕ್ಷಿಯಾಗುತ್ತಾರೆ. ಹೇಗೆ ವರದಕ್ಷಿಣೆ ಪಡೆದ ಅದ್ಧೂರಿ ಮದುವೆಗಳು ಪೊಲೀಸ್ ಅಧಿಕಾರಿಗಳ ಕುಟುಂಬದಲ್ಲಿಯೇ ನಡೆಯುವುವೊ ಹಾಗೆ. ಕಾನೂನು ಪರಿಪಾಲಿಸುವಲ್ಲಿ ನ್ಯಾಯ ನಿರ್ಣಯಿಸುವ ನ್ಯಾಯಾಧೀಶರ ಮಕ್ಕಳ ಮದುವೆಗಳು ಕಾನೂನುಬದ್ಧವಾಗಿಯೇ ನಡೆದಿವೆಯೇ ಎಂಬುದು ಪರಿಶೀಲನೆ ಮಾಡಿದಲ್ಲಿ ಆಘಾತಕಾರಿ ಸತ್ಯಗಳು ಬಯಲಾಗುತ್ತವೆ. ಅಧಿಕಾರಿಗಳು, ಚುನಾಯಿತ ರಾಜಕಾರಣಿಗಳೆಲ್ಲ ಭಾಗವಹಿಸಿದ ಮದುವೆಗಳು ಮತ್ತು ಅವರ ಕುಟುಂಬದಲ್ಲಿ ನಡೆದ ಮದುವೆಗಳು ಕುರಿತು ತೀವ್ರ ಮಟ್ಟದ ಪರಿಶೀಲನೆ ನಡೆದಲ್ಲಿ ದುಂದುವೆಚ್ಚ ಮಾಡಿದ್ದು, ವರದಕ್ಷಿಣೆ ಪಡೆದಿದ್ದು, ಬಾಲ್ಯವಿವಾಹ ಕೈಗೊಡ್ಡಿದ್ದು ಇತ್ಯಾದಿ ಎಲ್ಲವೂ ಬಯಲುಗೊಳ್ಳುವುದು. ಕೋವಿಡ್ ಸಂದರ್ಭದಲ್ಲಿಯೂ ಕೋಟಿಗಟ್ಟಲೆ ಖರ್ಚು ಮಾಡಿ ತನ್ನ ಮಗಳ ಮದುವೆ ಮಾಡಿದ್ದು ಜನಾರ್ಧನ್ ರೆಡ್ಡಿ. ಈಚೆಗೆ ಅಂಬಾನಿ ತನ್ನ ಮಗನ ಮದುವೆಯನ್ನು ರೂ500 ಕೋಟಿ ಖರ್ಚು ಮಾಡಿ ಮದುವೆ ಮಾಡಿದ್ದು ಜಗತ್ತು ನೋಡಿದೆ.

ಮೇಲಿನ ಎಲ್ಲ ಅಂಶಗಳು ಸಮಾಜವನ್ನು ಇನ್ನಿಲ್ಲದಂತೆ ಪ್ರಭಾವಿಸುತ್ತವೆ. ಸಮಾನತೆಯ ಪರಿಕಲ್ಪನೆ, ಕಾನೂನು ಪರಿಪಾಲನೆ ಇತ್ಯಾದಿಯ ಬಗ್ಗೆ ಸಮಾಜವನ್ನು ಪ್ರಭಾವಿಸುವ ಶಕ್ತಿಸ್ಥಾನಕ್ಕೆ ಸಂಪೂರ್ಣ ನಿರ್ಲಕ್ಷ್ಯ ಮತ್ತು ವಿರೋಧಾತ್ಮಕ ಧೋರಣೆ ಇದ್ದಲ್ಲಿ ಸಮಾಜದ ಇತರ ಸಮುದಾಯವೂ ಇದೇ ದಾರಿಯನ್ನು ನಿರ್ಭಯದಿಂದ ತುಳಿಯುತ್ತದೆ.

> **ಕಾನೂನು ಅನುಷ್ಠಾನಗೊಳಿಸಬೇಕಾದ ಕಾರ್ಯಾಂಗ ನ್ಯಾಯಾಂಗದಲ್ಲಿನ ವ್ಯಕ್ತಿಗಳ ಮನಸ್ಥಿತಿಯು ಸಂವಿಧಾನ ಮೌಲ್ಯಗಳ ವಿರೋಧಿಯಾಗಿದ್ದಲ್ಲಿ ಸಮಾಜದಲ್ಲಿ ಬಾಲ್ಯವಿವಾಹ, ವರದಕ್ಷಿಣೆ ಎಲ್ಲವೂ ನಿರಾತಂಕವಾಗಿ ನಡೆಯುವುದು. ಆದ್ದರಿಂದಲೇ ಬಾಲ್ಯವಿವಾಹಗಳ ಪ್ರಮಾಣದಲ್ಲಿ ತೀವ್ರ ಮಟ್ಟದ ತಡೆಯಾಗುತ್ತಿಲ್ಲ.**

ಕಾನೂನು ಅನುಷ್ಠಾನಗೊಳಿಸಬೇಕಾದ ಕಾರ್ಯಾಂಗ ನ್ಯಾಯಾಂಗದಲ್ಲಿನ ವ್ಯಕ್ತಿಗಳ ಮನಸ್ಥಿತಿಯು ಸಂವಿಧಾನ ಮೌಲ್ಯಗಳ ವಿರೋಧಿಯಾಗಿದ್ದಲ್ಲಿ ಸಮಾಜದಲ್ಲಿ ಬಾಲ್ಯವಿವಾಹ, ವರದಕ್ಷಿಣೆ ಎಲ್ಲವೂ ನಿರಾತಂಕವಾಗಿ ನಡೆಯುವುದು. ಆದ್ದರಿಂದಲೇ ಬಾಲ್ಯವಿವಾಹಗಳ ಪ್ರಮಾಣದಲ್ಲಿ ತೀವ್ರ ಮಟ್ಟದ ತಡೆಯಾಗುತ್ತಿಲ್ಲ. ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ಮತ್ತಿತರ ಜವಾಬ್ದಾರಿಯುತ ಸಂಸ್ಥೆಗಳು ಗಂಭೀರವಾಗಿ ಕೆಲಸ ಮಾಡಿದಲ್ಲಿ ಅನೇಕ ಮಕ್ಕಳನ್ನು ರಕ್ಷಿಸಬಹುದು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಾಲ್ಯವಿವಾಹಗಳು ಘಟಿಸುತ್ತವೆ. ಗ್ರಾಮ ಪಂಚಾಯತನಲ್ಲಿ ಅಧ್ಯಕ್ಷರ ನೇತೃತ್ವದಲ್ಲಿ ಸಾಮಾಜಿಕ ನ್ಯಾಯ ಸಮಿತಿ ಅಂತ ಒಂದಿರುತ್ತದೆ. ಈ ಸಮಿತಿಯು ಜಾತಿ ದೌರ್ಜನ್ಯ, ಬಾಲ್ಯವಿವಾಹ ತಡೆ, ವರದಕ್ಷಿಣೆ ತಡೆ, ಕೌಟುಂಬಿಕ ದೌರ್ಜನ್ಯ ತಡೆ ಮುಂತಾದ ಸಾಮಾಜಿಕ ನ್ಯಾಯಕ್ಕಾಗಿ ಈ ಸಮಿತಿಯು ಕಾರ್ಯತತ್ಪರವಾಗಬೇಕು. ಆದರೆ ಯಾವ

ಪುಟ 10 ಕ್ಕೆ



ಬಾಲ ಗರ್ಭಿಣಿಯರ ವಿವರ

2024ರ ಏಪ್ರಿಲಿನಿಂದ 2025ರ ಫೆಬ್ರವರಿ ಅವಧಿಯಲ್ಲಿ ಪತ್ತೆಯಾದ ಬಾಲ ಗರ್ಭಿಣಿಯರ ವಿವರ ಹೀಗಿದೆ:

ಕೊಪ್ಪಳ–617, ಬಾಗಲಕೋಟೆ–889, ಬಳ್ಳಾರಿ–850, ಬೆಳಗಾವಿ–2,622, ಬೆಂಗಳೂರು ಗ್ರಾಮೀಣ–376, ಬೆಂಗಳೂರು ನಗರ–2,723, ಬೀದರ–851, ಚಾಮರಾಜನಗರ–361, ಚಿಕ್ಕಬಳ್ಳಾಪುರ–655, ಚಿಕ್ಕಮಗಳೂರು–447, ಚಿತ್ರದುರ್ಗ–1,037, ದಕ್ಷಿಣ ಕನ್ನಡ–187, ದಾವಣಗೆರೆ–518, ಧಾರವಾಡ–576, ಗದಗ–370, ಹಾಸನ–949, ಹಾವೇರಿ–620, ಕಲಬುರಗಿ–822, ಕೊಡಗು–365, ಕೋಲಾರ–727, ಮಂಡ್ಯ–803, ಮೈಸೂರು–1,357, ರಾಯಚೂರು–1,648, ರಾಮನಗರ–493, ಶಿವಮೊಗ್ಗ–559, ತುಮಕೂರು–1563, ಉಡುಪಿ–72, ಉತ್ತರ ಕನ್ನಡ–220, ವಿಜಯನಗರ–401, ವಿಜಯಪುರ–1919, ಯಾದಗಿರಿ–839. (ಆರೋಗ್ಯ ಇಲಾಖೆ ಸಂಗ್ರಹಿಸಿರುವ ವರದಿ ಇದು).

ತುರ್ತು ಪರಿಸ್ಥಿತಿಗೆ 50 ವರ್ಷ
ಪ್ರಜಾಪ್ರಭುತ್ವಕ್ಕೆ ಹೊಸ ಹಾಗೂ ಇನ್ನೂ ಆಳ ಅಪಾಯ

1975 ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ 50 ವರ್ಷಗಳಾಗುತ್ತಿದೆ. ಅಂದಿನ ವಿದ್ಯಾಮಾನಗಳನ್ನು ಅವಲೋಕಿಸುವಾಗಲೇ ಇಂದು ಅದರ ವಿರುದ್ಧ ಅತ್ಯಂತ ದೊಡ್ಡ ದನಿಯಲ್ಲಿ ಮಾತನಾಡುವ ಇವರು ಮಾಡುತ್ತಿರುವುದೇನು? ಬಲಪಂಥೀಯತೆಯ ಪುನರುತ್ಥಾನದ ಸನ್ನಿವೇಶದಲ್ಲಿ ನಮ್ಮೆದುರು ಇರುವ ಅಪಾಯಗಳೇನು? ಸವಾಲುಗಳೇನು? 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ನೂತನ ಸಂಪಾದಕ ನಿಲೋತ್ಪಲ ಬಸು ಅವರ ವಿಶ್ಲೇಷಣೆ.

ಆಂತರಿಕ ಸರ್ವಾಧಿಕಾರವನ್ನು ಘೋಷಿಸಿದ 1975 ಜೂನ್ 25ರ ಮಧ್ಯ ರಾತ್ರಿ ಅನಾವರಣಗೊಂಡ ಕುಖ್ಯಾತ ಘಟನಾವಳಿಗಳನ್ನು ನೆನಪಿಸಿಕೊಳ್ಳುವುದು ಅಸಹಜವಾಗಿ ಕಾಣಬಹುದು. ಆದರೆ, ವಿವೇಕದ ಆ ಒಂದು ಅಮರ ನುಡಿ ನಮಗೆ ನೆನಪಾಗಬೇಕು: 'ಇತಿಹಾಸದ ಪಾಠಗಳನ್ನು ಮರೆಯುವವರು ಆ ತಪ್ಪನ್ನು ಪುನರಾವರ್ತಿಸುತ್ತಾರೆ'. ಈ ಮಾತು, ಭಾರತೀಯ ಪ್ರಜಾಪ್ರಭುತ್ವ ಇತಿಹಾಸದಲ್ಲಿನ ಕರಾಳ ಅಧ್ಯಾಯದತ್ತ ಹಿಂತಿರುಗಿ ನೋಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. 1960ರ ದಶಕದ ಕೊನೆಯ ಭಾಗದಲ್ಲಿ ಅನೇಕ ರಾಜ್ಯಗಳಲ್ಲಿ ಪ್ರತಿಪಕ್ಷಗಳು ಗೆಲುವು ಸಾಧಿಸುವುದರೊಂದಿಗೆ ಅಧಿಕಾರದ ಮೇಲಿನ ಕಾಂಗ್ರೆಸ್ ಪಕ್ಷದ ಏಕಸ್ವಾಮ್ಯಕ್ಕೆ ಹೊಡೆತ ಬಿದ್ದಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ, ಇಂದಿರಾ ಗಾಂಧಿ ಗರೀಬಿ ಹಟಾವೋ, ಬ್ಯಾಂಕ್ ರಾಷ್ಟ್ರೀಕರಣ ಮತ್ತು ರಾಜಧನ ರದ್ದತಿಯಂಥ ಪ್ರಗತಿಪರವೆಂಬಂತೆ ಕಾಣುವ ಘೋಷಣೆಗಳ ಸರಣಿಗಳ ಮೂಲಕ ತನ್ನ ಸ್ಥಾನವನ್ನು ಪುನರ್‌ಸ್ಥಾಪಿಸಿಕೊಂಡರು. ಸಾಂಪ್ರದಾಯಿಕ ರಾಜಕೀಯ ಆಚರಣೆಗಳಿಂದ ದೂರ ಸರಿದ ಅವರು ರಾಜ್ಯ ಮಟ್ಟದ ಬಲಿಷ್ಠ ಮುಖಂಡರನ್ನು ಬೈಪಾಸ್ ಮಾಡಿ ತಳಮಟ್ಟದಲ್ಲಿ ಜನಸಮೂಹವನ್ನು ನೇರವಾಗಿ ಮನಮುಟ್ಟುವ ಮೂಲಕ ಅಧಿಕಾರವನ್ನು ತನ್ನಲ್ಲೇ ಕೇಂದ್ರೀಕರಿಸಿಕೊಂಡರು.



ಈ ಧೋರಣೆ ಇಂದಿರಾಗೆ ಸ್ವಲ್ಪ ಮಟ್ಟಿಗಿನ ಫಲ ನೀಡಿತು. ಆದರೆ, ಬಾಂಗ್ಲಾದೇಶ ವಿಮೋಚನಾ ಹೋರಾಟದಲ್ಲಿ ಭಾರತದ ಮಧ್ಯಪ್ರವೇಶವು ರಾಜಕೀಯ ಏಕಸ್ವಾಮ್ಯ ಸಾಧಿಸುವ ಆಕೆಯ ಬಯಕೆಗೆ ಹೆಚ್ಚಿನ ಇಂಬು ನೀಡಿತು. ನಂತರ ಸ್ವತಂತ್ರ ಬಾಂಗ್ಲಾದೇಶ ಸ್ಥಾಪನೆ ಮತ್ತು ಪಾಕಿಸ್ತಾನದ ನಿರ್ಣಾಯಕ ಸೋಲು ಆಕೆಯ ಪ್ರತಿಷ್ಠೆಯನ್ನು ಇನ್ನಷ್ಟು ಹೆಚ್ಚಿಸಿತು. ಪಾಕಿಸ್ತಾನದ ಮಿಲಿಟರಿ ಆಡಳಿತದಿಂದ ತಪ್ಪಿಸಲು ಅಮೆರಿಕದ ಸಂಭಾವ್ಯ ಮಧ್ಯಪ್ರವೇಶ ತಡೆಯುವಲ್ಲಿ ಸೋವಿಯತ್ ಒಕ್ಕೂಟದ ಹಾಜರಿಯು ನಿರ್ಣಾಯಕ ಪಾತ್ರ ವಹಿಸಿತು. ಇದು ಇಂದಿರಾ ಗಾಂಧಿ ಮರಳಿ ಬಲ ತುಂಬಿಕೊಳ್ಳಲು ಹಾಗೂ 1971ರ ಸಾರ್ವತ್ರಿಕ ಚುನಾವಣೆಗಳಲ್ಲಿ ಜಯಗಳಿಸಲು ನೆರವಾಯಿತು. ಆದಾಗ್ಯೂ, ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಸಿಪಿಐ(ಎಂ) ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುವುದನ್ನು ತಡೆಯಲು ಒಟ್ಟಾರೆ ಸನ್ನಿವೇಶಕ್ಕೆ ಸಾಧ್ಯವಾಗಲಿಲ್ಲ. ಆದರೆ, ಇದು ಸಹಜವಾಗಿ ಪ್ರಗತಿ ಹೊಂದಲು ಬಿಡಲಿಲ್ಲ. 1972ರ ವಿಧಾನಸಭೆ ಚುನಾವಣೆಯಲ್ಲಿ ಭಾರಿ ಅಕ್ರಮ ನಡೆಸಲಾಯಿತು. ಆ ಮೂಲಕ ಅರ್ಧ ದಶಕ ಕಾಲ ಅರೆಫ್ಯಾಸಿಸ್ಟ್ ದಬ್ಬಾಳಿಕೆಗೆ ಹಾದಿ ತೆರೆಯಲಾಯಿತು. ಸರ್ವಾಧಿಕಾರದ ಈ ಕಾಲವು 1975ರ ಜೂನ್ 25ರ ಮಧ್ಯರಾತ್ರಿ ತುರ್ತು ಪರಿಸ್ಥಿತಿಯನ್ನು ಹೇರುವಲ್ಲಿಗೆ ತಲುಪಿತು.

ತುರ್ತುಪರಿಸ್ಥಿತಿಯ ಬಹುತೇಕ ಅವಧಿಯಲ್ಲಿ ಇಂದಿರಾರ ರಾಜಕೀಯ ವಿರೋಧಿಗಳನ್ನು ಜೈಲಿಗೆ ಅಟ್ಟಲಾಯಿತು. ಸುಮಾರು 10,000ಕ್ಕೂ ಹೆಚ್ಚು ರಾಜಕೀಯ ವಿರೋಧಿಗಳು, ಪತ್ರಕರ್ತರು ಮತ್ತು ಹೋರಾಟಗಾರರು ಆಕೆಯ ಆಡಳಿತದಲ್ಲಿ ಜೈಲು ಪಾಲಾದರು. ಈ ನಡುವೆ, ಪಾಕಿಸ್ತಾನದೊಂದಿಗಿನ ಯುದ್ಧ, ಬರಗಾಲಗಳು ಮತ್ತು 1973ರ ಜಾಗತಿಕ ತೈಲ ಬಿಕ್ಕಟ್ಟಿನ ಪರಿಣಾಮವಾಗಿ ಉಂಟಾದ ಆರ್ಥಿಕ ಬಿಕ್ಕಟ್ಟುಗಳ ಸರಣಿಗಳಿಂದ ದೇಶ ಕಂಗಾಲಾಗಿತ್ತು. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಹಣದುಬ್ಬರವು ಸಾರ್ವಜನಿಕರ ಅತೃಪ್ತಿ ಮತ್ತು ರಾಜಕೀಯ ವಿರೋಧದ ಆಕ್ರೋಶವನ್ನು ಹೆಚ್ಚಿಸಿತು. ಹೆಚ್ಚುತ್ತಿರುವ ಒತ್ತಡ, ಮತ್ತು ಅದರ ಜತೆಯಲ್ಲಿ ಇಂದಿರಾರನ್ನು ಕಾಡಿದ ವೈಯಕ್ತಿಕ ಅಭದ್ರತೆ ಮತ್ತು ಕಾನೂನು ಹಿನ್ನಡೆಗಳು–ಇವೆಲ್ಲ ತುರ್ತು ಪರಿಸ್ಥಿತಿ ಹೇರುವ ನಿರ್ಧಾರಕ್ಕೆ ಬರಲು ಕಾರಣವಾಯಿತು. ವಿಶೇಷವಾಗಿ, ಲೋಕಸಭೆ ಸದಸ್ಯತ್ವ ಕಳೆದು ಕೊಳ್ಳುವ ಅಪಾಯವು ಕಾನೂನು ಹಿನ್ನಡೆಗಳಲ್ಲಿ ಒಂದಾಗಿತ್ತು.

ಸಾರಭೂತವಾಗಿ ಹೇಳಬೇಕೆಂದರೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಸಮ್ಮಿಶ್ರಣದ ಫಲವಾಗಿ 1975ರಲ್ಲಿ ತುರ್ತುಪರಿಸ್ಥಿತಿಯನ್ನು ಹೇರಲಾಯಿತು. ಯುದ್ಧ, ಬಾಹ್ಯ ಆಕ್ರಮಣ ಅಥವಾ ಆಂತರಿಕ ಕ್ಷೋಭೆಯ ಸಮಯದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಲು ಅವಕಾಶ ನೀಡುವ ಸಂವಿಧಾನದ 352ನೇ ವಿಧಿಯನ್ನು ಸರಕಾರ ಬಳಸಿಕೊಂಡಿತು. ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಅಪಾಯವಿದೆಯೆಂದು ಸಮರ್ಥಿಸಿಕೊಂಡ ಸರಕಾರವು ಮೂಲಭೂತ ಹಕ್ಕುಗಳನ್ನು ಅಮಾನತು ಮಾಡಿತು. ಅಲ್ಲದೆ ಕಾರ್ಯಾಂಗದಲ್ಲಿ ಅಧಿಕಾರವನ್ನು ಕೇಂದ್ರೀಕರಿಸಿತು.

ತುರ್ತುಪರಿಸ್ಥಿತಿಗೆ ಕಾರಣವಾದ ಡೈನಮಿಕ್ಸ್‌ಗಳನ್ನು ಬೆತ್ತಲು ಮಾಡಿದ ಲೋಕಸಭೆಯ ಸಿಪಿಐ(ಎಂ) ಗುಂಪಿನ ನಾಯಕ ಎ.ಕೆ.ಗೋಪಾಲನ್, 1975 ಜುಲೈ 21ರಂದು ತುರ್ತುಪರಿಸ್ಥಿತಿ ಘೋಷಣೆಗೆ ಅನುಮೋದನೆ ನೀಡುವ ಶಾಸನಾತ್ಮಕ ಗೊತ್ತುವಳಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಈ ರೀತಿ ಹೇಳಿದರು:

'ಸರ್ವಾಧಿಕಾರದತ್ತ ಪ್ರವೃತ್ತಿ ಮತ್ತು ಏಕ–ಪಕ್ಷ ಸರ್ವಾಧಿಕಾರದ ಬಗ್ಗೆ ನಮ್ಮ ಪಕ್ಷ ನೀಡುತ್ತಾ ಬಂದಿರುವ ಎಚ್ಚರಿಕೆಯು ಹೊಸ ತುರ್ತುಪರಿಸ್ಥಿತಿಯ ಘೋಷಣೆಯೊಂದಿಗೆ ನಿಜವೆಂದು ಸಾಬೀತಾಗಿದೆ'. ಆಳುವ ಪಕ್ಷದ ಈ ಕ್ರಮವು ಆಡಳಿತ ಪಕ್ಷ ಮತ್ತು ಅದರ ನಾಯಕರನ್ನು ಆಳವಾದ ವೈಯಕ್ತಿಕ ಹಾಗೂ ರಾಜಕೀಯ ಬಿಕ್ಕಟ್ಟಿನಿಂದ ಹೊರಗೆ ತರಲಿದೆ ಎನ್ನುವುದು ದೌರ್ಬಲ್ಯದ ಸಂಕೇತವೇ ಹೊರತು ಬಲದ ಸಂಕೇತವಲ್ಲ ಎಂದೂ ಎ.ಕೆ.ಜಿ. ಹೇಳಿದರು. ಪ್ರತಿಪಕ್ಷಗಳ ದನಿಗಳನ್ನು ಮತ್ತು ಜನತಾ ಚಳವಳಿಗಳನ್ನು ದಮನಿಸುವುದು ಅದರ ಸಂಚಾಗಿದೆ ಎಂದರು. ತುರ್ತುಪರಿಸ್ಥಿತಿಯು ಅತಿ ಬಲಪಂಥೀಯ ಮತ್ತು ಎಡ ಸಾಹಸವಾದಿಗಳ ವಿರುದ್ಧ ಕೇಂದ್ರೀಕೃತವಾಗಿದೆ ಎಂಬ ಸುಳ್ಳು ನಿರೂಪಣೆಯನ್ನು ಕೂಡ ಗೋಪಾಲನ್ ಬಯಲು ಗೊಳಿಸಿದರು.

ಅದರ ನಂತರ, ಅನಿವಾರ್ಯವಾದುದು ನಡೆಯಿತು. ಕಾಂಗ್ರೆಸ್ ಮತ್ತು ಇಂದಿರಾಗೆ ರಾಜಕೀಯ ಸೋಲನ್ನು ತಪ್ಪಿಸಿಕೊಳ್ಳಲಾಗಲಿಲ್ಲ. 18 ತಿಂಗಳ ತುರ್ತುಪರಿಸ್ಥಿತಿಯು ಸಮಕಾಲೀನ ಭಾರತೀಯ ಇತಿಹಾಸದಲ್ಲಿ ಒಂದು ಗಂಭೀರ ವಿಪಥನ ಮತ್ತು ಪ್ರಜಾಪ್ರಭುತ್ವದ ಕೀಳು ಮಟ್ಟದ ಅಸ್ತವ್ಯಸ್ತತೆ ಎಂದು ದಾಖಲಾಯಿತು. ಶಕ್ತಿಗಳ ಒಂದು ವಿಶಾಲ ಮೈತ್ರಿಯು 1977ರ ಲೋಕಸಭೆ ಚುನಾವಣೆಗಳ ನಂತರ ಪ್ರಜಾಪ್ರಭುತ್ವದ ಮರುಸ್ಥಾಪನೆಯನ್ನು ಖಾತರಿಪಡಿಸಿತು.

ಇಂದು ನರೇಂದ್ರ ಮೋದಿ ತುರ್ತುಪರಿಸ್ಥಿತಿ ಕಾಲವನ್ನು ಪದೇ ಪದೇ ಪ್ರಸ್ತಾಪಿಸುತ್ತಾರೆ. 1975ರ ಜೂನ್ 25ರಂದು ಹೇರಲಾದ ತುರ್ತುಪರಿಸ್ಥಿತಿ ಭಾರತದ 'ಸಂವಿಧಾನದ ಮೇಲೆ ಒಂದು ಕಪ್ಪು ಚುಕ್ಕೆ' ಎಂದವರು ವರ್ಣಿಸುತ್ತಾರೆ.

'ತುರ್ತುಪರಿಸ್ಥಿತಿಯ ನಂತರದ ಈ 50 ವರ್ಷಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಹೆಮ್ಮೆಯಿಂದ ರಕ್ಷಿಸಲು ನಮ್ಮನ್ನು ನೆನಪಿಸುತ್ತವೆ. ಇನ್ನು ಯಾವತ್ತೂ ಇಂಥ ವಿಡಂಬನೆ ನಡೆಯಲು ಬಿಡುವುದಿಲ್ಲವೆಂದು ದೇಶವಾಸಿಗಳು ಸಂಕಲ್ಪ ಮಾಡಬೇಕು. ಬಲಿಷ್ಠ ಪ್ರಜಾಪ್ರಭುತ್ವ ಮತ್ತು ಭಾರತೀಯ ಸಂವಿಧಾನದಲ್ಲಿ ಹೇಳಿರುವಂತೆ ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಲು ನಾವು ಪಣತೊಡುತ್ತೇವೆ' ಎಂದು ಮೋದಿ ಹೇಳಿದ್ದಾರೆ. ಆದರೆ ಅವರ ಈ ರೀತಿಯ ಹೇಳಿಕೆಯು ದೊಡ್ಡ ವಂಚನೆ ಎನ್ನುವುದು ಗೊತ್ತಾಗುತ್ತಿದೆ. ಕಳೆದ 11 ವರ್ಷಗಳಲ್ಲಿ ಅನಾವರಣಗೊಂಡಿರುವಂತೆ,

ಆರ್‌ಎಸ್‌ಎಸ್–ಬಿಜೆಪಿ ಕೂಟವು ಭಾರತೀಯ ಪ್ರಜಾಪ್ರಭುತ್ವದ ಮೇಲೆ ನಡೆಸುತ್ತಿರುವ ನಗ್ನ ದಾಳಿಯನ್ನು ಮರೆಮಾಚಲು ಮಾಡುತ್ತಿರುವ ಪ್ರಯತ್ನ ಇದಾಗಿದೆ.



50 ವರ್ಷಗಳ ನಂತರ ಹಿಂದಿರುಗಿ ನೋಡಿದರೆ, ತುರ್ತುಪರಿಸ್ಥಿತಿಯು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲಿನ ಮೊದಲ ದೊಡ್ಡ ಹಲ್ಲೆಯೆಂಬುದನ್ನು ಕಾಣಬಹುದಾಗಿದೆ. ಅದು ನಾಗರಿಕ ಸ್ವಾತಂತ್ರ್ಯಗಳು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸಿತ್ತು. ಆದರೆ, 1975ರ ತುರ್ತುಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ನೇರ ಹೋಲಿಕೆ ಮಾಡುವುದು ತಪ್ಪಾಗುತ್ತದೆ. ಮೋದಿ ಅಡಿಯ ಕಳೆದ ಒಂದು ದಶಕವನ್ನು 'ಅಘೋಷಿತ ತುರ್ತುಪರಿಸ್ಥಿತಿ' ಎಂದು ಆಗಾಗ ಉಲ್ಲೇಖಿಸಲಾಗುತ್ತದೆ. ಆದರೆ, ಆ ಬಗೆಯ ಹೋಲಿಕೆಯು ಅನೇಕ ವಿಚಾರಗಳಲ್ಲಿ ತಪ್ಪಾಗುತ್ತದೆ.

ರಾಜಕೀಯ ಶಕ್ತಿಗಳು ಸಾಮ್ರಾಜ್ಯಶಾಹಿಯ ಪರವಾಗಿ ಬದಲಾಗುತ್ತಿರುವ ನಡುವೆ, ಜಾಗತಿಕ ಮಟ್ಟದಲ್ಲಿ ಅತಿ ಬಲಪಂಥೀಯತೆಯ ಪುನರುತ್ಥಾನದ ಹಿನ್ನೆಲೆಯಲ್ಲಿ ಪ್ರಸಕ್ತ ಸನ್ನಿವೇಶವನ್ನು ಗಮನಿಸಬೇಕಾಗುತ್ತದೆ.

ಹಣಕಾಸು ಬಂಡವಾಳ ಪ್ರೇರಿತ ಜಾಗತಿಕ ಆರ್ಥಿಕತೆಗಳ ಯುಗದಲ್ಲಿ ಈ ಹಂತ ಸೃಷ್ಟಿಯಾಗಿದೆ. ಕಣ್ಣಿಗೆ ರಾಚುವ ಅಸಮಾನತೆ, ತೀವ್ರ ನಿರುದ್ಯೋಗ ಹಾಗೂ ಸಿಕ್ಕಾಪಟ್ಟೆ ಕಾರ್ಪೊರೇಟ್ ಪ್ರಾಬಲ್ಯ ಈ ಯುಗದ ಲಕ್ಷಣವಾಗಿದೆ. ಅವುಗಳೊಂದಿಗೆ ಅಭೂತಪೂರ್ವ ಮಟ್ಟದ ಅಸ್ಮಿತೆ ಆಧಾರಿತ ಧ್ರುವೀಕರಣ ಮತ್ತು ಎಗ್ಗಿಲ್ಲದ ದ್ವೇಷ ಪ್ರಚಾರವೂ ಸೇರಿಕೊಂಡಿದೆ. ಅದು, ಸಹ ನಾಗರಿಕರನ್ನು ಆರ್ಥಿಕ ಮತ್ತು ಸಾಮಾಜಿಕ ಎರಡೂ ಕ್ಷೇತ್ರಗಳಲ್ಲಿ 'ಇತರರನ್ನಾಗಿ' (ಪರಕೀಯರು) ಮಾಡುತ್ತಿದೆ. ಹೀಗಾಗಿ, ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ತತ್ವಗಳ ಮೇಲಿನ ಪ್ರಸಕ್ತ ದಾಳಿಯು ಇನ್ನೂ ಹೆಚ್ಚು ಅಪಾಯಕಾರಿಯಾಗಿದೆ. ಇದು ಸಾಂಸ್ಥೀಕೃತ ಸರ್ವಾಧಿಕಾರಕ್ಕೆ ಎಡೆ ಮಾಡಿದೆ. ಕೆಲವು ವೀಕ್ಷಕರು ಇದನ್ನು 'ಚುನಾಯಿತರ ಸರ್ವಾಧಿಕಾರ' ಎಂದೂ ಹೇಳುತ್ತಾರೆ.

ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ಸರ್ವಾಧಿಕಾರದ ಪರಿವರ್ತನೆಯು ಆರ್‌ಎಸ್‌ಎಸ್ ನೇತೃತ್ವದಲ್ಲಿ ನಡೆಯುತ್ತಿದೆ. ವಿಷಮಯ ಹಿಂದೂತ್ವ ಸಿದ್ಧಾಂತವನ್ನು ಅದು ತೂರಿಸುತ್ತಿದ್ದು ಭಾರತದ ಪರಿಕಲ್ಪನೆಯನ್ನೇ ಬದಲಾಯಿಸುವ ಉದ್ದೇಶ ಅದರದ್ದಾಗಿದೆ.

ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಭಾರತ ಜನಿಸಿತು ಎಂಬ ಪರಿಕಲ್ಪನೆಯು ಪ್ರಜಾಪ್ರಭುತ್ವ, ಜಾತ್ಯತೀತ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ಗಣತಂತ್ರವನ್ನು ಆಧರಿಸಿದೆ. ಆದ್ದರಿಂದ ಪ್ರಸಕ್ತ ಆಕ್ರಮಣವು ಹೆಚ್ಚು ತೀಕ್ಷ್ಣವೂ ಉಸಿರುಗಟ್ಟಿಸುವಂಥದ್ದೂ ಆಗಿದ್ದು ಭಾರತೀಯ ಪೌರತ್ವದ ಮೂಲ ತತ್ವಗಳನ್ನೇ ಕಳಚಿ ಹಾಕುವ ಉದ್ದೇಶವನ್ನು ಹೊಂದಿದೆ.

ಈ ದೃಷ್ಟಿಯಿಂದ ನೋಡಿದರೆ, ನಾವು ಈಗ ಅನುಭವಿಸುತ್ತಿರುವ ಪೂರ್ಣ ಪ್ರಮಾಣದ ಸರ್ವಾಧಿಕಾರಕ್ಕೆ ಹೋಲಿಸಿದರೆ 1975ರ ತುರ್ತುಪರಿಸ್ಥಿತಿಯು ತೀರಾ ಗೌಣವಾಗಿ ಕಾಣುತ್ತದೆ. ಈಗಿನ ಆಡಳಿತವನ್ನು ಪದಚ್ಯುತಗೊಳಿಸುವುದು ಕಷ್ಟವೆಂದು ಕಂಡರೂ 1970ರ ದಶಕದಲ್ಲಿ ತುರ್ತುಪರಿಸ್ಥಿತಿ ವಿರುದ್ಧ ನಡೆಸಿದ ಹೋರಾಟದ ಅನುಭವವು ಆತ್ಮವಿಶ್ವಾಸಕ್ಕೆ ಸ್ಫೂರ್ತಿಯಾಗಬೇಕು. ಆರ್‌ಎಸ್‌ಎಸ್‌ನ ಅಪಾಯಕಾರಿ ಸಿದ್ಧಾಂತವನ್ನು ಪ್ರತಿರೋಧಿಸುವ ಮತ್ತು ಪ್ರಜಾಪ್ರಭುತ್ವವನ್ನು ಮರಳಿ ಗಳಿಸುವ ಸಂಕಲ್ಪದಿಂದ ಜನರು ಒಗ್ಗಟ್ಟಾದರೆ ಈಗಿನ ಸವಾಲನ್ನೂ ಎದುರಿಸಿ ಗೆಲ್ಲಬಹುದಾಗಿದೆ.

ಅನು: ವಿಶ್ವ

"ಸ್ಟಾರ್‌ಲಿಂಕ್ ಸ್ಪೆಕ್ಟ್ರಂ ವ್ಯವಹಾರದಲ್ಲಿ ದೇಶದ ಭದ್ರತೆಯ ಬಗ್ಗೆ ಎಚ್ಚರವನ್ನು ಗಾಳಿಗೆ ತೂರಲಾಗಿದೆ"

-ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸುವಂತೆ ನಿವೃತ್ತ ಹಿರಿಯ ಅಧಿಕಾರಿಯ ಆಗ್ರಹ

ಜೂನ್ 9, 2025 ರಂದು ಸಂಪುಟ ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಅವರನ್ನು ಉದ್ದೇಶಿಸಿ ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿ ಇಎಎಸ್ ಶರ್ಮಾ ಭಾರತದ ಉಪಗ್ರಹ ಸ್ಪೆಕ್ಟ್ರಮ್‌ನ್ನು ನೀಡಲು ಎಲಾನ್ ಮಸ್ಕ್ ಅವರ ವಿದೇಶಿ ಖಾಸಗಿ ಕಂಪನಿ ಸ್ಟಾರ್‌ಲಿಂಕ್‌ಗೆ ದೂರಸಂಪರ್ಕ ಇಲಾಖೆಯ (ಡಿಒಟಿ) ಆಡಳಿತಾತ್ಮಕ ಅನುಮತಿಯ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ, ಈ ಕ್ರಮವು ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತದೆ ಮತ್ತು ರಾಷ್ಟ್ರೀಯ ಭದ್ರತೆಗೆ ಒಂದು ಗಮನಾರ್ಹ ಬೆದರಿಕೆಯನ್ನು ಒಡ್ಡುತ್ತದೆ ಎಂದು ಕಟು ಶಬ್ದಗಳಲ್ಲಿ ಅವರು ಎಚ್ಚರಿಸಿದ್ದಾರೆ.

ಜೂನ್ 2, 2025 ರಂದು ಬರೆದ ತಮ್ಮ ಹಿಂದಿನ ಪತ್ರವನ್ನು ಉಲ್ಲೇಖಿಸಿ, ಸ್ಟಾರ್‌ಲಿಂಕ್‌ನಂತಹ ಖಾಸಗಿ ವಿದೇಶಿ ಘಟಕಕ್ಕೆ ಉಪಗ್ರಹ ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕವಾಗಿ ಹಂಚಿಕೆ ಮಾಡುವುದು 2ಜಿ ಸ್ಪೆಕ್ಟ್ರಮ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಉಲ್ಲಂಘಿಸುತ್ತದೆ ಎಂದು ಶರ್ಮಾ ಸರ್ಕಾರಕ್ಕೆ ನೆನಪಿಸಿದರು, ಆ ತೀರ್ಪು ಪಾರದರ್ಶಕ ಮತ್ತು ಹರಾಜು ಆಧಾರಿತ ಸ್ಪೆಕ್ಟ್ರಮ್ ಸಂಪನ್ಮೂಲಗಳ ಹಂಚಿಕೆಯನ್ನು ಕಡ್ಡಾಯಗೊಳಿಸಿತು. ಇಸ್ರೋ, ರಕ್ಷಣಾ ಸೇವೆಗಳು ಮತ್ತು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಿಂದ ಸ್ಪೆಕ್ಟ್ರಮ್‌ನ ಆಯಕಟ್ಟಿನ ಬಳಕೆಗೆ ಆದ್ಯತೆ ನೀಡುವ ಬದಲು ಸ್ಟಾರ್‌ಲಿಂಕ್‌ಗೆ ಅನುಕೂಲ ಮಾಡಿಕೊಡುವ ಸರ್ಕಾರದ ನಿರ್ಧಾರದ ಸುತ್ತಲಿನ ಸನ್ನಿವೇಶಗಳ ಕುರಿತು ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಬೇಕೆಂಬ ತಮ್ಮ ಬೇಡಿಕೆಯನ್ನು ಈ ಪತ್ರದಲ್ಲಿ ಪುನರುಚ್ಚರಿಸಿದ್ದಾರೆ.



"ನಾನು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದು ಇದೇ ಮೊದಲಲ್ಲ" ಎಂದು ನವೆಂಬರ್ 2024 ಮತ್ತು ಮೇ 2025 ರ ನಡುವೆ Countercurrents.org ನಲ್ಲಿ ಪ್ರಕಟವಾದ ಹಿಂದಿನ ಪತ್ರಗಳು ಮತ್ತು ಲೇಖನಗಳ ಸರಣಿಯನ್ನು ತೋರಿಸುತ್ತಾ ಶರ್ಮಾ ಹೇಳಿದ್ದಾರೆ. ವಿದೇಶಿ ಟೆಲಿಕಾಂ ಉದ್ಯಮಿಗಳಿಗೆ ಅವಕಾಶ ಕಲ್ಪಿಸಲು ನಮ್ಮ ದೇಶದ ಆಯಕಟ್ಟಿನ ಹಿತಾಸಕ್ತಿಗಳನ್ನು ಬದಿಗೊತ್ತುವುದರ ವಿರುದ್ಧ ಅವರು ಪದೇ ಪದೇ ಎಚ್ಚರಿಕೆ ನೀಡಿದ್ದರು ಮತ್ತು ನಿರ್ದಿಷ್ಟವಾಗಿ ಭಾರತದ ಉಪಗ್ರಹ ಸ್ಪೆಕ್ಟ್ರಮ್ ಕ್ಷೇತ್ರದಲ್ಲಿ ಪ್ರಾಬಲ್ಯ ಸಾಧಿಸಲು ಸ್ಟಾರ್‌ಲಿಂಕ್ ಎರಡು ದೇಶೀಯ ಟೆಲಿಕಾಂ ಆಪರೇಟರ್‌ಗಳೊಂದಿಗೆ ಕೂಟವನ್ನು ರಚಿಸುತ್ತಿದೆ ಎಂದು ಆರೋಪಿಸಿದ್ದರು.

ಅಮೆರಿಕದ ಅಧ್ಯಕ್ಷರ ಶ್ವೇತಭವನದಲ್ಲಿ ರಾಷ್ಟ್ರೀಯ ಭದ್ರತೆಯ ಉಲ್ಲಂಘನೆಯಾಗಿರಬಹುದು, ಇದರಲ್ಲಿ ಸ್ಟಾರ್‌ಲಿಂಕ್ ಪಾತ್ರವಿರಬಹುದು ಎಂದು ಸಲೂಚಿಸುವ ವರದಿಗಳು ತ್ತೀಚೆಗಷ್ಟೇ ವರದಿಯಾಗಿದ್ದು, ಶರ್ಮಾ ಅವರು ಎತ್ತಿರುವ ಪ್ರಶ್ನೆಗಳು ಮತ್ತಷ್ಟು ತುರ್ತನ್ನು ಪಡೆದುಕೊಂಡಿವೆ. ಈ ವರದಿಗಳ ಪ್ರಕಾರ, ಮಸ್ಕ್ ನೇತೃತ್ವದಲ್ಲಿ ರಚಿಸಿರುವ 'ಸರ್ಕಾರಿ ದಕ್ಷತೆಯ ಇಲಾಖೆ (ಡಿಒಜಿಇ)ಯ ಸಿಬ್ಬಂದಿ ಶ್ವೇತ ಭವನದಲ್ಲಿ ಸ್ಥಾಪಿಸಿದ ಒಂದು ಸ್ಟಾರ್‌ಲಿಂಕ್ ವೈ-ಫೈ ಟರ್ಮಿನಲ್ ಅಧಿಕೃತ ಭದ್ರತಾ ವಿಧಿ-ವಿಧಾನಗಳನ್ನು ಬದಿಗೊತ್ತಿ ಗಮನಾರ್ಹ ಪ್ರಮಾಣದ ದತ್ತಾಂಶಗಳನ್ನು ಪತ್ತೆಯಾಗದಂತೆ ರವಾನಿಸಿದ್ದಾರೆ ಎಂದು ಈ ವರದಿಗಳು ಹೇಳಿವೆ.

ಇಎಎಸ್ ಶರ್ಮಾ ಈ ವರದಿಗಳನ್ನು ಉಲ್ಲೇಖಿಸುತ್ತ, ಇವು ವಿದೇಶಿ ಕಾರ್ಪೊರೇಟ್‌ಗಳಿಗೆ ಸೂಕ್ಷ್ಮ ಸಂವಹನ ಮೂಲರಚನೆಗಳಲ್ಲಿ ಪ್ರವೇಶದ ಅನುಮತಿ ಕೊಡುವುದು ಎಷ್ಟು ಅಪಾಯಕಾರಿಯಾಗಬಹುದು ಎಂಬ ಬಗ್ಗೆ ಭಾರರ ಸರಕಾರಕ್ಕೆ ಎಚ್ಚರಿಕೆಯ ಗಂಟೆಯಾಗಬೇಕು ಎಂದು ಪತ್ರದಲ್ಲಿ ಹೇಳಿದ್ದಾರೆ. ಸ್ಟಾರ್‌ಲಿಂಕ್ ಒಪ್ಪಂದವನ್ನು ದೂರಸಂಪರ್ಕ ಇಲಾಖೆ "ಅವಿವೇಕ" ಮತ್ತು "ಬಾಹ್ಯ ಪರಿಗಣನೆಗಳಿಂದ" ನಿರ್ವಹಿಸಿದೆ, ಸ್ಟಾರ್‌ಲಿಂಕ್‌ಗೆ ಅನುಕೂಲ ಮಾಡಿಕೊಳ್ಳುವ ಭರದಲ್ಲಿ ಇಲಾಖೆ "ಎಚ್ಚರಿಕೆ ಮತ್ತು ಕಾನೂನುಬದ್ಧತೆಯನ್ನು ಗಾಳಿಗೆ ತೂರಿದಂತೆ" ಕಾಣುತ್ತದೆ ಎಂದು ಅವರು ಆರೋಪಿಸಿದ್ದಾರೆ. ಈ ಪರಿಸ್ಥಿತಿಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಲು ಪೂರ್ಣ ಪ್ರಮಾಣದ ನ್ಯಾಯಾಂಗ ತನಿಖೆಯ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದ್ದಾರೆ. "ಸರ್ಕಾರವು ಅಂತಹ ತನಿಖೆಗೆ ಆದೇಶಿಸಲು ವಿಫಲವಾದರೆ, ಅದು ಸಂಸತ್ತಿಗೆ ಅಥವಾ ಜನರಿಗೆ ಹೊಣೆಗಾರನಾಗಿರಲು ಬಯಸುವುದಿಲ್ಲ ಎಂದು ತೋರುತ್ತದೆ" ಎಂದು ಅವರು ಎಚ್ಚರಿಸಿದರು.

ಉಪಗ್ರಹ ಸ್ಪೆಕ್ಟ್ರಮ್ ಅನ್ನು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಇಸ್ರೋ, ರಕ್ಷಣಾ ಸೇವೆಗಳು ಮತ್ತು ಅಕಖಇ ಗಳ ಬಳಕೆಗೆ ಮಾತ್ರ ಮೀಸಲಿಡುವಂತೆ ಸರ್ಕಾರವನ್ನು ಹಿರಿಯ ಹುದ್ದೆಯಲ್ಲಿ ದೀರ್ಘಕಾಲದ ಅನುಭವ ಹೊಂದಿರುವ ಈ ನಿವೃತ್ತ ಅಧಿಕಾರಿ ಆಗ್ರಹಪಡಿಸಿದ್ದಾರೆ.

ಬಾಲಕಿಯರ ಭವಿಷ್ಯವನ್ನೇ ಹೊಸಕುವ.... ಪುಟ 8 ರಿಂದ

ಸಮಿತಿಗಳೂ ಈ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಇದನ್ನೆಲ್ಲ ಜಾರಿಗೊಳಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಜವಾಬ್ದಾರಿ. ಆದರೆ ಈ ಅಧಿಕಾರಿಗಳು ಇಂತಹ ಸಾಮಾಜಿಕ ವಿಷಯಗಳಲ್ಲಿ ಯಾವುದೇ ಆಸಕ್ತಿ ತೋರುವುದಿಲ್ಲ. ಆರ್ಥಿಕ ಸಂಬಂಧಿ ಕೆಲಸಗಳಲ್ಲಿ ಮಾತ್ರ ಅವರ ಸಂಪೂರ್ಣ ಸಮಯ ವ್ಯಯವಾಗುವುದು. ಇದೇ ಪ್ರವೃತ್ತಿ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಎಲ್ಲ ಹಂತದ ಅಧಿಕಾರಿಗಳು ಹೊಂದಿರುತ್ತಾರೆ. ಮಹಿಳೆ ಮತ್ತು ಮಕ್ಕಳ ಸಂಬಂಧಿ ಸಮಗ್ರ ಆಯಾಮದ ಅಂಶಗಳ ಬಗ್ಗೆ ಯಾವುದೇ ಇಲಾಖೆಗೂ ಸ್ಪಷ್ಟವಾದ ಕಾರ್ಯಯೋಜನೆ ಇಲ್ಲವಾಗಿದೆ.

ಯಾಕೆ ಘಟಿಸುತ್ತಿವೆ ಬಾಲ್ಯವಿವಾಹಗಳು?

ವಿಜ್ಞಾನ ತಂತ್ರಜ್ಞಾನ ಇಷ್ಟೆಲ್ಲ ಬೆಳೆದಿದೆ. ಆದರೆ ವಿವಾಹದ ವಿಷಯದಲ್ಲಿ ಮಾತ್ರ ಜನರ ಆಲೋಚನೆಗಳು ತೀರ ಅವೈಜ್ಞಾನಿಕ ನೆಲೆಯಲ್ಲಿಯೇ ಉಳಿದುಕೊಂಡಿವೆ. ರಕ್ತಸಂಬಂಧಗಳಲ್ಲಿ ಮದುವೆ ಮಾಡುವುದು, ಬಾಲ್ಯದಲ್ಲಿ ಮದುವೆ ಮಾಡುವುದು ಎಲ್ಲವೂ ತಮ್ಮ ಕುಟುಂಬಕ್ಕೆ ಸಂಬಂಧಪಟ್ಟಿದ್ದು ಇದರಲ್ಲಿ ಸಮಾಜವಾಗಲಿ, ಸರಕಾರವಾಗಲಿ ತಲೆ ಹಾಕಬಾರದು ಎಂಬ ಧೋರಣೆ ಇದೆ. ರಕ್ತ ಸಂಬಂಧದೊಳಗೆ ಹೆಚ್ಚು ಬಾಲ್ಯವಿವಾಹಗಳು ನಡೆಯುವುದು ಸಹಜವಾಗಿದೆ. ಆದರೆ ಬಾಲ್ಯವಿವಾಹ ನಡೆಯುವುದಕ್ಕೂ ಬಡತನ, ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಮತ್ತು ವಲಸೆಗೂ ನಂಟಿದೆ. ಪಲ್ಲಟಗೊಳ್ಳುತ್ತಿರುವ ರೈತಾಪಿ ಬದುಕಿನ ಆರ್ಥಿಕತೆ, ನಿರುದ್ಯೋಗ ಎಲ್ಲವೂ ಬಾಲ್ಯವಿವಾಹದ ಮೇಲೆ ಪರಿಣಾಮವಾಗುತ್ತವೆ. ಮತ್ತು ಸ್ತ್ರೀ ತಿರಸ್ಕಾರದ ನಂಬಿಕೆಯು ಈ ಎಲ್ಲ ಹಂತಗಳಲ್ಲಿ ಆಂತರಿಕ ಅಂಶವಾಗಿರುತ್ತದೆ. ಗ್ರಾಮದಲ್ಲಿ ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗದೇ ಹೋದಾಗ ರೈತರು ಸಾಲಗಾರರಾಗಿ ಹೊಟ್ಟೆ ಹೊರೆಯಲು ಪಟ್ಟಣಗಳಿಗೆ ವಲಸೆ ಹೋಗುವರು. ಕೃಷಿ ಬಿಕ್ಕಟ್ಟಿನ ಈ ದಿನಮಾನಗಳಲ್ಲಿ ವಲಸೆ ಪ್ರಮಾಣದಲ್ಲಿ ಅಧಿಕ ಏರಿಕೆ ಇದೆ. ಮಧ್ಯಮ ವರ್ಗದ ರೈತರು, ಬಡ ರೈತರು, ಕೃಷಿ ಕೂಲಿಕಾರ್ಮಿಕರು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗುತ್ತಿರುವುದರಿಂದ ಇದರ ದುಷ್ಪರಿಣಾಮಕ್ಕೆ ಬಾಲ್ಯವಿವಾಹ ಘಟಿಸುವಂತೆ ಆಗುತ್ತಿದೆ. ವಲಸೆಯು ಅನಿವಾರ್ಯವಾಗುತ್ತಿದ್ದು ಇರುವ ಮಕ್ಕಳಲ್ಲಿ ಗಂಡು ಹುಡುಗರಾದರೆ ಜೊತೆ ಕರೆದೊಯ್ಯುವರು ಅಥವ ಹಾಸ್ಟೆಲ್‌ಗೆ ಸೇರಿಸುವರು. ಅಥವ ಸಂಬಂಧಿಕರಲ್ಲಿ ಬಿಟ್ಟು ಹೋಗುವರು. ಹೆಣ್ಣು ಹುಡುಗಿಯರಾದರೆ ಹಾಗೆ ಮಾಡಲಾಗದು. ಯಾಕೆಂದರೆ, ಹುಡುಗಿಯರ ಮೇಲೆ ಯಾವ ಹೊತ್ತಿನಲ್ಲಾದರೂ ಯಾರಿಂದಲಾದರೂ ಲೈಂಗಿಕ ದೌರ್ಜನ್ಯ, ಅತ್ಯಾಚಾರ ನಡೆಯುವ ಸಾಧ್ಯತೆಗಳು ಹೆಚ್ಚಿರುತ್ತವೆ. ಹೀಗಾಗಿ ಹೆತ್ತವರ ಮುಂದೆ ಹೆಣ್ಣುಹುಡುಗಿಯರನ್ನು ರಕ್ಷಿಸುವ ಏಕೈಕ ಉಪಾಯ ಹೊಳೆಯುವುದೇನೆಂದರ ಮದುವೆ. ಅವಳನ್ನು ರಕ್ಷಿಸುವ ಜವಾಬ್ದಾರಿಯನ್ನು ಗಂಡ ಮತ್ತು ಗಂಡನ ಮನೆಯವರಿಗೆ ವಹಿಸಿದರೆ ಮುಗಿಯಿತು. ಇಷ್ಟಕ್ಕೂ ಮಹಿಳೆಗೆ ಗಂಡನ ಮನೆಯೇ ಅಂತಿಮ ಸ್ವಂತ ಮನೆ. ತವರು ಮನೆಯಲ್ಲ ಎಂದು ಬಲವಾಗಿ ನಂಬಲಾಗಿದೆ. ಸಂಭವಿಸಬಹುದಾದ ದೌರ್ಜನ್ಯ ಮತ್ತು ಅತ್ಯಾಚಾರದಿಂದ ರಕ್ಷಿಸುವುದಕ್ಕಾಗಿ ನಡೆಸಲಾಗುವ ಮದುವೆಯ ನಂತರ ಎಳೆ ಮಗುವಿನ ಮೇಲೆ ಪುರುಷನೊಬ್ಬ ನಡೆಸುವ ಲೈಂಗಿಕ ದೌರ್ಜನ್ಯವನ್ನು ದೌರ್ಜನ್ಯವೆಂದು ಇದೇ ಹೆತ್ತವರು ಮತ್ತು ಸಮಾಜ ಒಪ್ಪುವುದಿಲ್ಲ. ಅಂದರೆ ಇಲ್ಲಿ ಅವಳ ಅಸ್ತಿತ್ವ ಅಸ್ಮಿತೆಯ ಪ್ರಶ್ನೆಗಿಂತಲೂ, ಅತ್ಯಾಚಾರ ದೌರ್ಜನ್ಯ ತಡೆಯುವ ಇಚ್ಛೆಗಿಂತಲೂ ಅವಳೊಂದು ಹೊರೆ, ಭಾರವೆಂದು ಪರಿಗಣಿಸಿದ್ದರಿಂದ ವಿವಾಹವೆಂಬುದು ಪರಿಹಾರವಾಗಿ ಕಾಣಿಸುತ್ತವೆ. ತಾಳಿಯ ನೆರಳಿನಲ್ಲಿ ಗಂಡನೆನಿಸಿಕೊಂಡವನು ಎಳೆಮಗುವನ್ನು ಹೇಗೆ ಬಳಸುವನು ಮತ್ತು ಗೃಹಕೃತ್ಯದಲ್ಲಿ ಅವಳನ್ನು ಹೇಗೆ ದುಡಿಸುವರು ಎಂಬುದರ ಕಿಂಚಿತ್ತು ಕಾಳಜಿ ಇರುವುದಿಲ್ಲ. ಸರಳವಾಗಿ ಒಂದು ಮನೆಯಿಂದ ಇನ್ನೊಂದು ಮನೆಗೆ ಸಾಗಿಸುವ ಸರಕಿನಂತೆ ಹೆಣ್ಣು ಜೀವವನ್ನು ಪಾಳೇಗಾರಿ ಸಮಾಜವು ನಡೆಸಿಕೊಂಡು ಬಂದಿದೆ. ನಗರದಲ್ಲಿಯೂ ನಿರುದ್ಯೋಗವು ಅಗಾಧವಾಗುತ್ತಿದೆ. ಬಹಳಷ್ಟು ಕುಟುಂಬಗಳು ಆರ್ಥಿಕ ಭದ್ರತೆ ಹೊಂದಿಲ್ಲ. ಆ ಕುಟುಂಬಗಳಲ್ಲಿ ಹೆಣ್ಣಮಕ್ಕಳನ್ನು ಹೊರೆಯೆಂದು ಭಾವಿಸಲಾಗುತ್ತದೆ. ಹೆಚ್ಚುತ್ತಿರುವ ವರದಕ್ಷಿಣೆ, ಬೆಲೆಯೇರಿಕೆ ಎಲ್ಲವೂ ಕುಟುಂಬಗಳನ್ನು ಗಾಬರಿಗೊಳಿಸುತ್ತಿವೆ. ಹೆಂಗೂಸಿನ ಹೆಣ್ಣುಮಕ್ಕಳ ವಿಷಯದಲ್ಲಿ ಸಮಾಜವೂ ದೌರ್ಜನ್ಯದ ಅತ್ಯಾಚಾರದ ಅಸ್ತ್ರ ತೋರಿಸಿ ಗಾಬರಿಗೊಳಿಸುವುದು, ಕಾರ್ಪೋರೇಟ್ ಪರವಾದ ಸರಕಾರವೂ ಉದ್ಯೋಗ, ಶಿಕ್ಷಣ, ಆರೋಗ್ಯ ಒದಗಿಸದೆ ಗಾಬರಿಗೊಳಿಸುವುದು. ಮತ್ತು ಈಗಾಗಲೆ ಮಹಿಳೆ ಕುರಿತು ಸಮಾಜ ಮತ್ತು ಕುಟುಂಬದಲ್ಲಿ ಮಡುಗಟ್ಟಿದ ತಿರಸ್ಕಾರದ ಭಾವನೆ ಎಲ್ಲವೂ ಸೇರಿ ಸಂಕಟದಿಂದ ಪಾರಾಗಲು ಇರುವ ದಾರಿಗಳಲ್ಲಿ ಬಾಲ್ಯವಿವಾಹವೂ ಒಂದಾಗಿದೆ. ಎಲ್ಲ ಸಂಕಟಗಳಗಳ ಪರಿಹಾರದ ಬಲಿಯಾಗಬೇಕಾದ ಕೊನೆಯ ಕೊಂಡಿಯೆಂದರೆ ಅದು ಹೆಣ್ಣು ಜೀವ.

ಬಾಲ್ಯ ವಿವಾಹವೆನ್ನುವುದು ಮಹಿಳೆಗೆ ತನ್ನ ಬದುಕಿನ ಆಯ್ಕೆಯ ಹಕ್ಕನ್ನು ನಿರಾಕರಿಸುವ ಬಲವಾದ ಅಸ್ತ್ರವಾಗಿದೆ. ಇದು ಕೇವಲ ಸಾಮಾಜಿಕ ಅನಿಷ್ಠವಲ್ಲ. ಇದು ಸಮಾಜದ ಅಭಿವೃದ್ಧಿಯನ್ನು ಅಳೆಯುವ ಮಾನದಂಡವೂ ಆಗಿದೆ. ಭೂಮಾಲಕ ಬಂಡವಾಳಶಾಹಿ ಹಿಡಿತವು ಸಮಾಜವನ್ನು ವಿರೂಪಗೊಳಿಸಿದರಲ್ಲಿ ಅಸಮಾನತೆಗೆ ತಳ್ಳಿರುವುದರಲ್ಲಿ ಬಾಲ್ಯವಿವಾಹವೂ ಒಂದಾಗಿದೆ. ಆದ್ದರಿಂದಲೇ ನೀತಿ ನಿರೂಪಣೆ ಸ್ಥಾನದಲ್ಲಿದ್ದವರಿಗೆ ಬಾಲ್ಯವಿವಾಹ ತಡೆ ಕಾಯ್ದೆಯನ್ನು ಜಾರಿಗೊಳಿಸಬೇಕೆನ್ನುವ ಯಾವುದೇ ರಾಜಕೀಯ ಇಚ್ಛೆ ಇಲ್ಲವಾಗಿದೆ. ಅಂತೆಯೇ ನ್ಯಾಯಾಂಗ, ಕಾರ್ಯಾಂಗವೂ ತನ್ನ ಪಾತ್ರವನ್ನು ಭೂಮಾಲಿಕ ಬಂಡವಾಳಶಾಹಿಗೆ ಪೂರಕವಾಗಿಯೇ ನಿರ್ವಹಿಸುತ್ತದೆ. ಬಾಲಕಿಯರ ಮೇಲೆ ಅತ್ಯಾಚಾರ ದೌರ್ಜನ್ಯ ನಡೆಯುವ ಭಯದಿಂದಲೂ ಬಾಲ್ಯವಿವಾಹಗಳು ನಡೆಯುತ್ತಿರುವುದರಲ್ಲಿ ಒಂದಂಶ. ಇಂತಹ ಸಂದರ್ಭದಲ್ಲಿ ಪೋಕ್ಸೊ ಕಾಯ್ದೆ ಎಷ್ಟು ನೆರವಾಗಿದೆ ಎಂಬುದು ಗಮನಿಸಬೇಕು. ಉಧಾಹರಣೆಗೆ ವರದಿಯಾದ ಪೋಕ್ಸೊ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣದಲ್ಲಿ ಕುಸಿದಿದೆ. 2023 ಮತ್ತು 2024ರಲ್ಲಿ ದಾಖಲಾದ 8000 ಪ್ರಕರಣಗಳಲ್ಲಿ ಕೇವಲ 130 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಚಾರ್ಜ್‌ಶೀಟ್‌ಗಳಲ್ಲಿನ ದೋಷಗಳು ಅಥವ ಸುಳ್ಳು ಆರೋಪಗಳಿಂದಾಗಿ 1,682 ಪ್ರಕರಣಗಳನ್ನು ವಜಾಗೊಳಿಸಲಾಗಿದೆ. ಪೊಲೀಸ್ ಇಲಾಖೆಯು ಕೋರ್ಟಿಗೆ ಸಲ್ಲಿಸಬೇಕಾದ ಸಾಕ್ಷಿಗಳನ್ನು ಸಲ್ಲಿಸಲಿಲ್ಲವೆಂದರ್ಥ.

ಇಂತಹ ಸಂದರ್ಭದಲ್ಲಿ ಬಾಲ್ಯವಿವಾಹ ತಡೆ ಆಂದೋಲನವು ವ್ಯಾಪಕಗೊಳ್ಳಬೇಕಿದೆ. ಕಾನೂನು ಅನುಷ್ಠಾನಗೈಯ್ಯಲು ತೀವ್ರ ಒತ್ತಡ ತರಬೇಕಿದೆ. ತಳಹಂತದವರೆಗೂ ಬಾಲ್ಯವಿವಾಹ ತಡೆಯಬೇಕಾದ ಸರಕಾರಿ ಯಂತ್ರಗಳು ಚುನಾಯಿತ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾದ ರೀತಿಯಲ್ಲಿ ಚಳುವಳಿಯು ಬಲಗೊಳ್ಳಬೇಕಿದೆ.



ವೇತನ ಅಸಮಾನತೆಯಲ್ಲಿ ಹೆಚ್ಚಳ ಮತ್ತು ಶ್ರಮಜೀವಿಗಳ ಅನೈಕ್ಯತೆ

ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕರ ವೇತನದಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದ್ದರೂ, ಕಾರ್ಮಿಕರ ವೇತನದಲ್ಲಿನ ಅಸಮಾನತೆಗಳು ಹೆಚ್ಚುತ್ತಲೇ ಇವೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಇತ್ತೀಚಿನ ವರದಿಯು ಬಹಿರಂಗಪಡಿಸಿದೆ. ಬಂಡವಾಳದ ಕೇಂದ್ರೀಕರಣ ಹೆಚ್ಚುತ್ತಿದೆ. ಸಂಪತ್ತಿನ ಕ್ರೋಢೀಕರಣವೂ ಹೆಚ್ಚುತ್ತಿದೆ. ಮತ್ತೊಂದಡೆ, ಕಾರ್ಮಿಕರ ಪಾಲು ಕಡಿಮೆಯಾಗುತ್ತಲೇ ಇದೆ. ಕಾರ್ಮಿಕರು ಹಲವು ವಿಧಗಳಲ್ಲಿ ವಿಭಜನೆಗೊಳ್ಳುತ್ತಾರೆ. ಛಿದ್ರಗೊಂಡ ಕಾರ್ಮಿಕ ವರ್ಗದ ಒಂದು ವಿಭಾಗವನ್ನು ಇನ್ನೊಂದು ವಿಭಾಗದ ವಿರುದ್ಧ ಎತ್ತಿಕಟ್ಟುವ ಮೂಲಕ, ಅಧಿಕೃತ ಮತ್ತು ಅನಧಿಕೃತ ನಿಯಂತ್ರಣ ವಿಧಾನಗಳನ್ನು ಬಳಸಿಕೊಂಡು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ಬಂಡವಾಳಶಾಹಿಗಳು ಸಮರ್ಥರಾಗಿರುತ್ತಾರೆ. ಅಗ್ಗದ ಬೆಲೆಗೆ ಶ್ರಮ ಲಭ್ಯವಿರುವಲ್ಲೆಲ್ಲಾ ಮತ್ತು ಮೂರನೇ ಜಗತ್ತಿನ ದೇಶಗಳಲ್ಲಿ ಕಾರ್ಮಿಕರ ಶ್ರಮವನ್ನು ಅವರು ಶೋಷಿಸುತ್ತಿದ್ದಾರೆ.

ಸಂಜಯ್ ರಾಯ್

ಕೊರೊನ ಸಾಂಕ್ರಾಮಿಕದ ಪ್ರಭಾವದಿಂದಾಗಿ ಕಾರ್ಮಿಕರ ವೇತನ ಕುಸಿದಿದೆ. ಅಂದಿನ ಪರಿಸ್ಥಿತಿಗೆ ಹೋಲಿಸಿದರೆ ಇತ್ತೀಚೆಗೆ ಸ್ವಲ್ಪ ಬದಲಾವಣೆ ಕಂಡುಬಂದಿದೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕಾರ್ಮಿಕರ ನೈಜ ವೇತನದಲ್ಲಿ ಸ್ವಲ್ಪ ಬೆಳವಣಿಗೆ ಕಂಡುಬಂದಿದೆ, ಆದರೆ, ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕರ ವೇತನದಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದ್ದರೂ, ಅವರ ವೇತನದಲ್ಲಿನ ಅಸಮಾನತೆಗಳು ಮಾತ್ರ ಹೆಚ್ಚುತ್ತಲೇ ಇವೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಇತ್ತೀಚಿನ ವರದಿಯು ಬಹಿರಂಗಪಡಿಸಿದೆ. ಪ್ರಪಂಚದಾದ್ಯಂತ ವೇತನಗಳು ಹೇಗೆ ಬದಲಾಗುತ್ತಿವೆ ಎಂಬುದನ್ನು ಇತ್ತೀಚೆಗೆ ಐಎಲ್‌ಒ ಬಿಡುಗಡೆ ಮಾಡಿದ ಜಾಗತಿಕ ವೇತನ ವರದಿಯು (Global Wage Report) ಬಹಿರಂಗಪಡಿಸಿದೆ.

ಜಾಗತೀಕರಣದ ಪರಿಣಾಮವಾಗಿ, ಜಗತ್ತಿನಲ್ಲಿ ಎಲ್ಲಿಗೆ ಬೇಕಾಗಿದೆಯೋ ಅಲ್ಲಿಗೆ ಚಲಿಸುವ ಶಕ್ತಿ ಬಂಡವಾಳ ಪಡೆದಿದೆ. ಆದರೆ ಅದೇ ರೀತಿಯ ಸ್ವಾತಂತ್ರ್ಯ ಕಾರ್ಮಿಕ ವರ್ಗಕ್ಕೆ ಇಲ್ಲ. ಆದ್ದರಿಂದಲೇ, ಎಲ್ಲಿ ಕಾರ್ಮಿಕರ ಶ್ರಮವು ಅಗ್ಗವಾಗಿ ದೊರಕುತ್ತದೆಯೋ ಅಲ್ಲಿಗೆ ಹೋಗಿ, ಅಲ್ಲಿನ ಅಗ್ಗದ ಕಾರ್ಮಿಕ ಶ್ರಮವನ್ನು ಬಳಸಿಕೊಳ್ಳಲು ಬಂಡವಾಳ ಹೂಡಿಕೆ ಮಾಡಲಾಗುತ್ತಿದೆ. ಸರಕುಗಳ ಉತ್ಪಾದನೆಯನ್ನು ಒಂದೇ ಸ್ಥಳದಲ್ಲಿ ಕೇಂದ್ರೀಕರಿಸುವ ಬದಲು, ಅದನ್ನು ಹಲವು ಭಾಗಗಳನ್ನಾಗಿ ವಿಂಗಡಿಸಿ, ಯಾವ ಉತ್ಪಾದನಾ ಅನುಕ್ರಮದಲ್ಲಾದರೂ ಸರಿ, ಕಾರ್ಮಿಕರ ಪಾತ್ರವು ಹೆಚ್ಚು ಅಗತ್ಯವಿರುವ ಭಾಗಗಳನ್ನು ಕಾರ್ಮಿಕರು ಅಗ್ಗವಾಗಿ ದೊರೆಯುವ ಪ್ರದೇಶಗಳಿಗೆ ಸ್ಥಳಾಂತರಗೊಳಿಸುವುದು ಜಾಗತೀಕರಣದ ಒಂದು ಅವಿಭಾಜ್ಯ ಅಂಗವಾಗಿದೆ.

ಹೆಚ್ಚುತ್ತಿರುವ ಕೇಂದ್ರೀಕರಣ ಮತ್ತು ಅಸಮಾನತೆ

ಇಂದು ಮುಕ್ತ ಮಾರುಕಟ್ಟೆ ಅಸ್ತಿತ್ವದಲ್ಲಿದೆ ಎಂದು ಭಾವಿಸುವುದಕ್ಕಿಂತ ದೊಡ್ಡ ಭ್ರಮೆ ಇನ್ನೊಂದಿಲ್ಲ. ಹಿಂದೆಂದಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇಂದು ಜಾಗತಿಕ ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಉತ್ಪಾದನಾ ಜಾಲಗಳನ್ನು ಹೆಚ್ಚು ಕೇಂದ್ರೀಕೃತ ಮೇಲ್ವಿಚಾರಣೆಯಲ್ಲಿ ನಿರ್ವಹಿಸುತ್ತವೆ. ತಾವು ತಯಾರಿಸುವ ಸರಕುಗಳಿಗೆ ಬೇಕಾದ ಕಚ್ಚಾವಸ್ತುಗಳು ಮತ್ತು ಬಿಡಿಭಾಗಗಳನ್ನು ಪೂರೈಸುವ ಪೂರೈಕೆದಾರರ ನಡುವೆ ಸ್ಪರ್ಧೆ ಸೃಷ್ಟಿಸುತ್ತಾರೆ. ಅವುಗಳನ್ನು ಅತಿ ಕಡಿಮೆ ಬೆಲೆಗೆ ಯಾರು ಪೂರೈಸುತ್ತಾರೋ ಅವರೇ ಆ ಪೂರೈಕೆ ಒಪ್ಪಂದಗಳನ್ನು ಗೆಲ್ಲುತ್ತಾರೆ. ಇದರ ಪರಿಣಾಮವಾಗಿ, ಪೂರೈಕೆದಾರರು ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಕಡಿಮೆ ವೇತನದಲ್ಲಿ ದುಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ರೀತಿ ಮಾಡುವುದರಿಂದ ಕಾರ್ಮಿಕರ ಪ್ರತಿರೋಧ ಬರುವುದು ಸಹಜ. ಆದರೆ, ಅಂತಹ ಪ್ರತಿರೋಧ ಬಾರದಂತಿರಲು ಕಾರ್ಮಿಕರ ಹಕ್ಕುಗಳನ್ನು ತುಳಿಯುತ್ತಾರೆ. ಕಾರ್ಮಿಕ ಮಾರುಕಟ್ಟೆಯ ಕಡಿಮೆ ವೇತನ ಸಿಗುವ ಕ್ಷೇತ್ರಗಳಲ್ಲಿ ಮಹಿಳಾ ಕಾರ್ಮಿಕರ ಶೇಕಡಾವಾರು ಪ್ರಮಾಣ ಹೆಚ್ಚುತ್ತಿದೆ. ವೇತನ ನೀಡುವ ವ್ಯವಸ್ಥೆಯೂ ಜಾರಿಗೆ ಬಾರದೇ ಇರುವುದರಿಂದ ಗುಂಪುಗುತ್ತಿಗೆ (ಇಷ್ಟು ಕೆಲಸಕ್ಕೆ ಇಷ್ಟು ಹಣ ಕೊಡುತ್ತೇವೆ, ಎಷ್ಟು ಜನರು ಮತ್ತು ಎಷ್ಟು ಸಮಯ ಕೆಲಸ ಮಾಡಿದರು ಎಂದು ಉದ್ಯೋಗದಾತರು ಮಾಡಿಕೊಂಡ ಒಪ್ಪಂದಗಳು) ಕಾರ್ಮಿಕರನ್ನು ನೇಮಿಸಿಕೊಳ್ಳುವುದು ಹೆಚ್ಚುತ್ತಿದೆ.

ಈ ಮೇಲೆ ಹೇಳಿದ ಪದ್ಧತಿಗಳಿಂದಾಗಿ ಒಂದು ಕಡೆ ಕಾರ್ಮಿಕರ ವೇತನದಲ್ಲಿ ಅಸಮಾನತೆಗಳು ಹೆಚ್ಚುತ್ತಿವೆ. ಮತ್ತೊಂದೆಡೆ, ಆ ಕಾರ್ಮಿಕರು ಹಲವು ವಿಧಗಳಲ್ಲಿ ವಿಭಜನೆಗೊಳ್ಳುತ್ತಾರೆ. ಆದರೆ ಬಂಡವಾಳದ ಕೇಂದ್ರೀಕರಣ ಮಾತ್ರ ಹೆಚ್ಚುತ್ತಿದೆ. ಸಂಪತ್ತಿನ ಕ್ರೋಢೀಕರಣವೂ ಹೆಚ್ಚುತ್ತಿದೆ. ವಿಭಜನೆಗೊಂಡ ಕಾರ್ಮಿಕ ವರ್ಗದ ಒಂದು ವಿಭಾಗವನ್ನು ಇನ್ನೊಂದು ವಿಭಾಗದ ವಿರುದ್ಧ ಎತ್ತಿಕಟ್ಟುವ ಮೂಲಕ, ಅಧಿಕೃತ ಮತ್ತು ಅನಧಿಕೃತ ನಿಯಂತ್ರಣ ವಿಧಾನಗಳನ್ನು ಬಳಸಿಕೊಂಡು ಬಂಡವಾಳಶಾಹಿಗಳು ಮಾತ್ರ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ಸಮರ್ಥರಾಗಿರುತ್ತಾರೆ

2023 ರವರೆಗೆ ನೈಜ ವೇತನಗಳು ಹಣದುಬ್ಬರದಿಂದಾಗಿ ತೀವ್ರವಾಗಿ ಕುಸಿದವು. ಆದರೆ 2023 ರ ನಂತರ, ಹಣದುಬ್ಬರ ಕಡಿಮೆಯಾದಂತೆ ಅವರು ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡರು. ಆದರೆ, ಈ ಪರಿಸ್ಥಿತಿ ಪ್ರಪಂಚದಾದ್ಯಂತ ಒಂದೇ ರೀತಿಯಲ್ಲಿ ಇಲ್ಲ. ಐಎಲ್‌ಒ ಅಧ್ಯಯನ ಮಾಡಿದ 160 ದೇಶಗಳಲ್ಲಿ, 96 ದೇಶಗಳು ಹಣದುಬ್ಬರದಿಂದ ಉಂಟಾದ ನೈಜ ವೇತನದಲ್ಲಿನ ನಷ್ಟವನ್ನು ಸಂಪೂರ್ಣವಾಗಿ ಬದಲಾಯಿಸಲಿಲ್ಲ. ಪರಿಣಾಮವಾಗಿ, ಸಂಪತ್ತು ಹೆಚ್ಚಿದ್ದರೂ ಅದರಲ್ಲಿ ಕಾರ್ಮಿಕರ ಪಾಲು ಕಡಿಮೆಯಾಗುತ್ತಲೇ ಇದೆ. ಜಿಡಿಪಿಯಲ್ಲಿ ಬೆಳವಣಿಗೆಯ ಹೊರತಾಗಿಯೂ, ಅದರಲ್ಲಿ ಕಾರ್ಮಿಕರ ಪಾಲು ಕುಸಿಯುತ್ತಲೇ ಇದೆ. ಶ್ರೀಮಂತ ರಾಷ್ಟ್ರಗಳನ್ನು ಗಮನಿಸಿದರೆ, ಕಳೆದ 25 ವರ್ಷಗಳಲ್ಲಿ ಅಲ್ಲಿನ ಕಾರ್ಮಿಕರ ಉತ್ಪಾದಕತೆ ಶೇ.29ರಷ್ಟು ಹೆಚ್ಚಿದೆ, ಆದರೆ ಅವರ ನೈಜ ವೇತನ ಶೇ.15ರಷ್ಟು ಮಾತ್ರ ಹೆಚ್ಚಿದೆ. ಎರಡನೇ ಮಹಾಯುದ್ಧ ಮುಗಿದ ನಂತರದ ಅವಧಿಯಲ್ಲಿ, ಉದ್ಯೋಗದಾತರ ಲಾಭದ ಪಾಲು ಮತ್ತು ಕಾರ್ಮಿಕರ ವೇತನದ ಪಾಲು ದಶಕಗಳವರೆಗೆ ಬದಲಾಗದೆ ಸ್ಥಿರವಾಗಿತ್ತು. ಈಗ ಆ ಪರಿಸ್ಥಿತಿ ಇಲ್ಲ. ಕಾರ್ಮಿಕರ ಪಾಲು ಕಡಿಮೆಯಾಗುತ್ತಲೇ ಇದೆ.

ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕರ ನೈಜ ವೇತನದಲ್ಲಿ ಒಟ್ಟಾರೆ ಹೆಚ್ಚಳ ಕಂಡುಬಂದಿದ್ದರೂ, ಆ ವೇತನಗಳಲ್ಲಿನ ಅಸಮಾನತೆ ಮಾತ್ರ ಹೆಚ್ಚುತ್ತಿದೆ. ಪ್ರಸ್ತುತ ನವ ಉದಾರವಾದಿ ಯುಗದಲ್ಲಿ ವೇತನವನ್ನು ನಿರ್ಧರಿಸುವುದು ಒಂದು ರಾಜಕೀಯ ಪ್ರಕ್ರಿಯೆಯಾಗಿ ಬದಲಾಗುತ್ತಿದೆ. ಪರಿಣಾಮವಾಗಿ, ಅಸಂಘಟಿತ ಕಾರ್ಮಿಕರು ತೀವ್ರ ಮಟ್ಟದ ಶೋಷಣೆಗೆ ಒಳಗಾಗುತ್ತಿದ್ದಾರೆ. ಸರ್ಕಾರದಿಂದಾಗಲೀ, ಕಾನೂನಿನಿಂದಾಗಲೀ ಅವರಿಗೆ ಯಾವುದೇ ರಕ್ಷಣೆ ಸಿಗುವುದಿಲ್ಲ. ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಅಸಮಾನತೆ ಹೆಚ್ಚಾಗಿದೆ. ಅಸಂಘಟಿತ ವಲಯವು ಆ ದೇಶಗಳಲ್ಲಿ ಹೆಚ್ಚು ಬೆಳೆದಿರುವುದು ಇದಕ್ಕೆ ಕಾರಣ. ಕಡಿಮೆ ಆದಾಯದ ದೇಶಗಳಲ್ಲಿ, ಅಸಂಘಟಿತ ಕಾರ್ಮಿಕರು ಶೇಕಡಾ 90 ರವರೆಗೂ ಇದ್ದಾರೆ. ಮಧ್ಯಮ ಆದಾಯದ ದೇಶಗಳಲ್ಲಿ ಶೇಕಡಾ 49 ರಿಂದ 75 ರವರೆಗೆ ಇದ್ದಾರೆ. ಹೆಚ್ಚಿನ ವೇತನ ಮಟ್ಟವನ್ನು ಹೊಂದಿರುವ ದೇಶಗಳು ಕಡಿಮೆ ವೇತನ ಅಸಮಾನತೆಯನ್ನು ಹೊಂದಿರುವುದು ನಮಗೆ ಕಂಡುಬರುತ್ತದೆ. ತೃತೀಯ ಜಗತ್ತಿನ ರಾಷ್ಟ್ರಗಳ ಬಹುಪಾಲು ಅಸಂಘಟಿತ ಕಾರ್ಮಿಕರನ್ನು ಶೋಷಿಸುವ ಮೂಲಕ ಅವರ ಶ್ರಮವನ್ನು ಲೂಟಿ ಮಾಡಿ, ಅವರು ಸಂಗ್ರಹಿಸಿದ ಸಂಪತ್ತನ್ನು ಶ್ರೀಮಂತ ರಾಷ್ಟ್ರಗಳಿಗೆ ಸ್ಥಳಾಂತರಿಸಲಾಗುತ್ತಿವೆ.

ಪಿ.ಪಿ.ಪಿ. ಆಧಾರದಲ್ಲಿ

ಐಎಲ್‌ಒ ವರದಿಯು ಪ್ರಪಂಚದಾದ್ಯಂತ ಆಚರಣೆಯಲ್ಲಿರುವ ವೇತನದ ಮಟ್ಟವನ್ನು ಪರಿಶೀಲಿಸಿದೆ. ಇದು ಡಾಲರ್ ನ ಕೊಳ್ಳುವ ಶಕ್ತಿಯು(ಡಾಲರ್ ಪಿ.ಪಿ.ಪಿ.–Dollar Purchasing Power Parity- PPP) ಪ್ರಪಂಚದಲ್ಲಿ ಎಲ್ಲಿಯಾದರೂ ಒಂದೇ ಆಗಿರುತ್ತದೆ ಎಂಬ ಆಧಾರದ ಮೇಲೆ ವೇತನವನ್ನು ಹೋಲಿಸುತ್ತದೆ. ಹಾಗೆ ನೋಡಿದಾಗ, ಕಡಿಮೆ ಆದಾಯವಿರುವ ಮೂರನೇ ಜಗತ್ತಿನ ದೇಶಗಳಲ್ಲಿ ವೇತನವು 201 ಡಾಲರ್ ಇದೆ. ಅದೇ ಮಧ್ಯಮ ಆದಾಯದ ದೇಶಗಳಲ್ಲಿ, ಅದು 630 ಡಾಲರ್ ಗಳಿವೆ. ಇನ್ನೂ ಹೆಚ್ಚಿನ ಆದಾಯದ ದೇಶಗಳಲ್ಲಿ, ವೇತನವು 3333 ಡಾಲರ್‌ಗಳಿವೆ.

ಇದರ ಆಧಾರದ ಮೇಲೆ ನೋಡಿದರೆ, ಕಡಿಮೆ ಆದಾಯದ ದೇಶಗಳಲ್ಲಿ ಕಾರ್ಮಿಕನ ಕೊಳ್ಳುವ ಶಕ್ತಿಯು ಮಧ್ಯಮ–ಆದಾಯದ ದೇಶಗಳ ಕಾರ್ಮಿಕನಿಗೆ ಹೋಲಿಸಿದರೆ ಮೂರನೇ ಒಂದು ಭಾಗ ಮಾತ್ರವೇ ಇದೆ. ಹೆಚ್ಚಿನ ಆದಾಯದ ದೇಶಗಳ ಕಾರ್ಮಿಕನಿಗೆ ಹೋಲಿಸಿದರೆ, ಅದು ಕೇವಲ 16 ನೇ ಒಂದು ಭಾಗ ಮಾತ್ರವೇ ಇದೆ! ಎಲ್ಲಿ ಕಾರ್ಮಿಕ ಶ್ರಮ ಚೌಕಾಸಿಯಿಂದ ಅಗ್ಗವಾಗಿ ದೊರಕುತ್ತದೋ ಅಲ್ಲಿ ಮುಕ್ತವಾಗಿ ಬಂಡವಾಳ ಹರಿಯುತ್ತದೆ ಎಂಬ ಸತ್ಯ ಈ ವಾಸ್ತವತೆಯಿಂದ ಮತ್ತೊಮ್ಮೆ ಸ್ಪಷ್ಟವಾಗುತ್ತದೆ. ತಾವು ಯಾವ ದೇಶಗಳಿಗೆ ಸೇರಿದವರಾಗಿದ್ದರೂ, ಅದನ್ನೆಲ್ಲ ಲೆಕ್ಕಿಸದೆ ಪ್ರಪಂಚದಾದ್ಯಂತದ ಎಲ್ಲಾ ಶ್ರೀಮಂತರು ಒಟ್ಟಿಗೆ ಸೇರುತ್ತಾರೆ. ಅಗ್ಗದ ಬೆಲೆಗೆ ಶ್ರಮ ಲಭ್ಯವಿರುವಲ್ಲೆಲ್ಲಾ, ಅವರು ಮೂರನೇ ಜಗತ್ತಿನ ದೇಶಗಳಲ್ಲಿ ಕಾರ್ಮಿಕರ ಶ್ರಮವನ್ನು ಶೋಷಿಸುತ್ತಿದ್ದಾರೆ.

ವೇತನದಲ್ಲಿನ ಚಾಲ್ತಿಯಲ್ಲಿರುವ ಅಸಮಾನತೆಯನ್ನು ಐಎಲ್‌ಒ ವರದಿಯು ಪರಿಶೀಲಿಸಿತು. ಜಾಗತಿಕವಾಗಿ ನೋಡಿದಾಗ, 2006 ರಲ್ಲಿ ನಿಜವಾದ ವೇತನವು ತಿಂಗಳಿಗೆ 525 ಡಾಲರ್ ಇದ್ದರೆ, ಅದು 2021 ರ ವೇಳೆಗೆ 825 ಡಾಲರ್ ಗೆ ಏರಿತು ಎಂದು ವರದಿಯು ಹೇಳುತ್ತದೆ. ಆದರೆ, ಇದು ಇಡೀ ಜಗತ್ತಿಗೆ ಲೆಕ್ಕಹಾಕಿದ ಅಂಕಿ ಅಂಶ ಮಾತ್ರ. ವಾಸ್ತವವಾಗಿ, ಆಯಾ ದೇಶಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿದಾಗ, ವೇತನಗಳಲ್ಲಿನ ಅಸಮಾನತೆಗಳು ಗಮನಾರ್ಹವಾಗಿ ಹೆಚ್ಚುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಅಸಮಾನತೆಗಳು ಶ್ರೀಮಂತ ದೇಶಗಳಲ್ಲಿ ಶೇಕಡಾ 35 ರಷ್ಟು ಕಡಿಮೆಯಾಗಿದೆ. ಅದೇ ಮೂರನೇ ಜಗತ್ತಿನ ದೇಶಗಳಲ್ಲಿ, ಕೇವಲ ಶೇಕಡಾ 11 ರಷ್ಟು ಕಡಿಮೆಯಾಗಿದೆ.

ಹೊಸ ತಂತ್ರಜ್ಞಾನದ ಪರಿಣಾಮಗಳು?

ಹೊಸ ತಂತ್ರಜ್ಞಾನವನ್ನು ಮುಂದಿನ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪರಿಚಯಿಸಲಾಗುವುದು. ಇದರಿಂದ ಉತ್ಪಾದನೆಯಲ್ಲಿ ಮಾನವ ಶ್ರಮದ ಬಳಕೆಯ ಅಗತ್ಯವನ್ನು ಮತ್ತಷ್ಟು ಕಡಿಮೆ ಮಾಡುತ್ತದೆ. ಅದೇ ಸಮಯದಲ್ಲಿ, ವಿಶೇಷ ಕೌಶಲ್ಯ ಹೊಂದಿರುವ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗುತ್ತದೆ. ಈ ವಿಶೇಷ ಕೌಶಲ್ಯವನ್ನು ಹೊಂದಬೇಕೆಂದರೆ ಅದಕ್ಕೆ ಅಗತ್ಯವಾದ ಶಿಕ್ಷಣ ಮತ್ತು ಪರಿಣತಿಯನ್ನು ಪಡೆಯಲು ಶಕ್ತರಾಗಿರಬೇಕು. ಶಿಕ್ಷಣ ಖಾಸಗೀಕರಣಗೊಂಡ ನಂತರ, ಆರ್ಥಿಕ ಸಾಮರ್ಥ್ಯವಿರುವ ಕೆಲವರು ಮಾತ್ರ ಈ ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ. ಉಳಿದ ಬಹುಪಾಲು ಜನರು ಈ ಹೊಸ ತಂತ್ರಜ್ಞಾನದಿಂದ ಹೊರಗುಳಿಯುತ್ತಾರೆ. ಅವರೆಲ್ಲರೂ ವೇತನದ ವಿಷಯದಲ್ಲಿ ಕನಿಷ್ಠ ಮಟ್ಟಕ್ಕೆ ಇಳಿಯುತ್ತಾರೆ.

ಆಧುನಿಕ ತಂತ್ರಜ್ಞಾನ ಮತ್ತು ರೋಬೋಟ್ ಗಳ ಬಳಕೆಯ ಹೊರತಾಗಿಯೂ, ಮೇಲ್ವಿಚಾರಣಾ ಕಾರ್ಯಗಳು, ಆರೈಕೆಗೆ ಸಂಬಂಧಿಸಿದ ಕೆಲಸಗಳು (ಶುಶ್ರೂಷೆಯ ಆರೈಕೆ, ವೈದ್ಯಕೀಯ ಆರೈಕೆ, ಇತ್ಯಾದಿ) ಮತ್ತು ಮನೆಕೆಲಸಗಳನ್ನು ನಿರ್ವಹಿಸಲು ಮಾನವ ಸಂಪನ್ಮೂಲಗಳು ಇನ್ನೂ ಅಗತ್ಯವಿದೆ. ಆದ್ದರಿಂದ ಈ ವಲಯಗಳಲ್ಲಿ ಅತ್ಯಂತ ಕಡಿಮೆ ಕೂಲಿಯಲ್ಲಿ ಕೆಲಸ ಮಾಡಲು ಸಾಧ್ಯವಿರುವ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹೊಸ ತಂತ್ರಜ್ಞಾನದ ಪರಿಚಯದ ಪರಿಣಾಮವಾಗಿ,

ಪುಟ 12 ಕ್ಕೆ

ತುರ್ತು ಪರಿಸ್ಥಿತಿ: ಒಂದು ಅವ್ಯವಸ್ಥೆಯ... ಪುಟ 7 ರಿಂದ

ಆಗಸ್ಟ್ 22, 1975 ರಂದು ಬರೆದ ಪತ್ರದಲ್ಲಿ, ಇಂದಿರಾ ಗಾಂಧಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣವನ್ನು 'ಸಮಯೋಚಿತ ಮತ್ತು ಸಮತೋಲಿತ' ಎಂದು ದೇವರಸ್ ಶ್ಲಾಘಿಸುತ್ತಾ, "ಆರ್.ಎಸ್.ಎಸ್. ಮೇಲಿನ ನಿಷೇಧವನ್ನು ರದ್ದುಗೊಳಿಸಲು ನಾನು ನಿಮ್ಮನ್ನು ವಿನಂತಿಸುತ್ತೇನೆ. ನೀವು ಸೂಕ್ತವೆಂದು ಭಾವಿಸಿದರೆ ನಿಮ್ಮನ್ನು ವೈಯಕ್ತಿಕವಾಗಿ ಭೇಟಿಯಾಗುವುದು ನನಗೆ ತುಂಬಾ ಸಂತೋಷವನ್ನು ನೀಡುತ್ತದೆ" ಎಂದು ಅವರು ತಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿ ಹೇಳುವ ಮೂಲಕ ಪತ್ರವನ್ನು ಮುಕ್ತಾಯಗೊಳಿಸಿದ್ದರು.

ನವೆಂಬರ್ 10, 1975 ರಂದು ಬರೆದ ಮತ್ತೊಂದು ಪತ್ರದಲ್ಲಿ, ದೇವರಸ್–ಅನೇಕ ಬಿಜೆಪಿ ನಾಯಕರ ಹೇಳಿಕೆಗಳಿಗೆ ವಿರುದ್ಧವಾಗಿ–ಆ ಕಾಲದ ಸರ್ಕಾರಿ ವಿರೋಧಿ ಚಳುವಳಿಗಳಿಂದ ಆರ್.ಎಸ್.ಎಸ್. ಅನ್ನು ದೂರವಿಟ್ಟರು. "ಜೈಪ್ರಕಾಶ್ ನಾರಾಯಣ್ ಅವರ ಚಳವಳಿಯ ಸಂದರ್ಭದಲ್ಲಿ ಆರ್.ಎಸ್.ಎಸ್. ಅನ್ನು ಹೆಸರಿಸಲಾಗಿದೆ, ಸರ್ಕಾರವು ಯಾವುದೇ ಕಾರಣವಿಲ್ಲದೆ ಗುಜರಾತ್ ಚಳುವಳಿ ಮತ್ತು ಬಿಹಾರ ಚಳುವಳಿಯೊಂದಿಗೆ ಆರ್.ಎಸ್.ಎಸ್. ಅನ್ನು ಸಂಪರ್ಕಿಸಿದೆ, ಆದರೆ, ಸಂಘಕ್ಕೆ ಈ ಚಳುವಳಿಗಳೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ಬರೆಯುತ್ತಾ, ಮತ್ತೊಮ್ಮೆ, ಅವರು ಇಂದಿರಾ ಗಾಂಧಿಯವರನ್ನು ಆರ್.ಎಸ್.ಎಸ್. ಮೇಲಿನ ನಿಷೇಧವನ್ನು ತೆಗೆದು ಹಾಕುವಂತೆ ಬೇಡಿಕೊಳ್ಳುತ್ತಾ, ಆರ್.ಎಸ್.ಎಸ್. ನ ಸಹಕಾರದ ಭರವಸೆಯನ್ನು ನೀಡಿದ್ದರು. ಆ ಮೂಲಕ "ಲಕ್ಷಾಂತರ ಆರ್.ಎಸ್.ಎಸ್. ಕಾರ್ಯಕರ್ತರ ನಿಸ್ವಾರ್ಥ ಪ್ರಯತ್ನಗಳನ್ನು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಲು ಬಳಸಬಹುದು." ಎಂಬ ಭರವಸೆಯೊಂದಿಗೆ ದೇವರಸ್ ತಮ್ಮ ಪತ್ರವನ್ನು ಮುಗಿಸಿದ್ದಾರೆ.

ಈ ಪತ್ರದ ತಕ್ಷಣದ ಫಲಿತಾಂಶವೆಂದರೆ, ಇಂದಿನ ಬಿಜೆಪಿಯ ಪೂರ್ವಗಾಮಿಯಾದ 'ಭಾರತೀಯ ಜನ ಸಂಘ' ದ (ಬಿಜೆಎಸ್) ಉತ್ತರ ಪ್ರದೇಶ ಘಟಕವು ತುರ್ತು ಪರಿಸ್ಥಿತಿ ಘೋಷಣೆಯ ಮೊದಲ ವಾರ್ಷಿಕೋತ್ಸವ ಜೂನ್ 25, 1976 ರಂದು ಸರ್ಕಾರಕ್ಕೆ ಸಂಪೂರ್ಣ ಬೆಂಬಲವನ್ನು ಘೋಷಿಸಿತು. ಯಾವುದೇ ಸರ್ಕಾರಿ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಅದು ಪ್ರತಿಜ್ಞೆ ಮಾಡಿತು. ಕುತೂಹಲಕಾರಿಯಾದ ಮತ್ತೊಂದು ವರದಿಗಳ ಪ್ರಕಾರ, 'ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಬಿಜೆಎಸ್ ನ 34 ನಾಯಕರು ಕಾಂಗ್ರೆಸ್ ಸೇರಿದರು'.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಅದರ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಗುಪ್ತಚರ ಬ್ಯೂರೋ (ಐಬಿ)ದ ಮಾಜಿ ಮುಖ್ಯಸ್ಥ ಟಿವಿ ರಾಜೇಶ್ವರ್ ತಮ್ಮ ಪುಸ್ತಕ ಇಂಡಿಯಾದಲ್ಲಿ: ಗಂಭೀರವಾದ ಈ ವರ್ಷಗಳಲ್ಲಿ ಮಧುಕರ್ ದೇವರಸ್" ರವರು ಪ್ರಧಾನ ಮಂತ್ರಿ ಕಚೇರಿಯೊಂದಿಗೆ ನೇರ ಸಂವಹನ ಮಾರ್ಗವನ್ನು ಸ್ಥಾಪಿಸಿದರು ಮತ್ತು "ದೇಶದಲ್ಲಿ ಸುವ್ಯವಸ್ಥೆ ಮತ್ತು ಶಿಸ್ತನ್ನು ಜಾರಿಗೊಳಿಸಲು ತೆಗೆದುಕೊಂಡ ಹಲವಾರು ಕ್ರಮಗಳಿಗೆ ಬಲವಾದ ಬೆಂಬಲವನ್ನು ವ್ಯಕ್ತಪಡಿಸಿದರು" ಎಂದು ಬರೆಯುತ್ತಾರೆ. ಇದರಲ್ಲಿ ಸಂಜಯ್ ಗಾಂಧಿಯವರ ಕುಟುಂಬ ಯೋಜನಾ ಅಭಿಯಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ವಿಶೇಷವಾಗಿ ಮುಸ್ಲಿಮರಲ್ಲಿ ಅದನ್ನು ಹೇರುವ ಬಗ್ಗೆಯೂ ಕೂಡ ದೇವರಸ್ ಒತ್ತಿ ಹೇಳಿದ್ದಾರೆ.



ಜೂನ್ 13, 2000 ರಂದು ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ 'ದಿ ಅನ್ಲರ್ಂಟ್ ಲೆಸನ್ಸ್ ಆಫ್ ಎಮರ್ಜೆನ್ಸಿ' (the unlearnt lessons of emergency) ಬಿಜೆಪಿಯ ಹಿರಿಯ ನಾಯಕ ಸುಬ್ರಮಣಿಯನ್ ಸ್ವಾಮಿ, ಈ ಅವಧಿಯಲ್ಲಿ ಆರ್.ಎಸ್.ಎಸ್. ಮತ್ತು ಅದರ ನಾಯಕರು ವಹಿಸಿದ ಸಂಶಯಾಸ್ಪದ ಪಾತ್ರವನ್ನು ಮತ್ತಷ್ಟು ಬಹಿರಂಗಪಡಿಸಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ಕೆಲವೇ ದಿನಗಳನ್ನು ಜೈಲಿನಲ್ಲಿ ಕಳೆದರು ಮತ್ತು ತುರ್ತು ಪರಿಸ್ಥಿತಿಯ ಉಳಿದ ಅವಧಿಗೆ ಪೆರೋಲ್ ನಲ್ಲಿ ಹೊರಗಿದ್ದರು ಎಂದು ಅವರು ಹೇಳುತ್ತಾರೆ. ವಾಜಪೇಯಿ ಅವರು ಇಂದಿರಾ ಗಾಂಧಿಯವರೊಂದಿಗೆ ಒಪ್ಪಂದ ಮಾಡಿಕೊಂಡರು, ಬಿಡುಗಡೆಯಾದರೆ ಯಾವುದೇ ಸರ್ಕಾರಿ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ ಎಂದು ಭರವಸೆ ನೀಡಿದರು ಎಂದು ಸ್ವಾಮಿ ಹೇಳಿಕೊಳ್ಳುತ್ತಾರೆ. ಸ್ವಾಮಿಯವರ ಪ್ರಕಾರ, "ವಾಜಪೇಯಿ ಅವರು ಪೆರೋಲ್ ನಲ್ಲಿ ಹೊರಗೆ ಕಳೆದ ಸಮಯದಲ್ಲಿ, ಸರ್ಕಾರ ಹೇಳಿದ್ದನ್ನು ಮಾಡಿದರು". ನವೆಂಬರ್ 1976 ರಲ್ಲಿ, ಹಿರಿಯ ಆರ್.ಎಸ್.ಎಸ್. ನಾಯಕ ಮಾಧವರಾವ್ ಮುಳೆ ಅವರು "ಜನವರಿ ಅಂತ್ಯದಲ್ಲಿ ಸಹಿ ಹಾಕಬೇಕಾದ ಶರಣಾಗತಿಯ ದಾಖಲೆಯನ್ನು ಆರ್.ಎಸ್.ಎಸ್. ಅಂತಿಮಗೊಳಿಸಿದ್ದರಿಂದ" ತಮ್ಮ ಪ್ರತಿರೋಧ ಪ್ರಯತ್ನಗಳನ್ನು ನಿಲ್ಲಿಸುವಂತೆ ಸಲಹೆ ನೀಡಿದರು ಎಂದು ಅವರು ಮತ್ತಷ್ಟು ಆರೋಪಿಸುತ್ತಾರೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಆರ್.ಎಸ್.ಎಸ್. ನಿರ್ವಹಿಸಿದ ದ್ವಂದ್ವ ಪಾತ್ರ ಹೀಗಿತ್ತು, ಆ ಅವಧಿಯನ್ನು ಅವರು ಈಗ ವೀರೋಚಿತವಾಗಿ ವಿರೋಧಿಸಿದ್ದಾರೆಂದು ಹೇಳಿಕೊಳ್ಳುತ್ತಾರೆ.

ಆಂತರಿಕ ತುರ್ತು ಪರಿಸ್ಥಿತಿಯ ಘೋಷಣೆಯು ಯಾವುದೇ ರೀತಿಯಲ್ಲಿ ಆ ಕ್ಷಣದ ನಿರ್ಧಾರವಲ್ಲ. ಜೆಪಿ ಚಳುವಳಿ ವೇಗವಾಗಿ ಜನಪ್ರಿಯತೆ ಗಳಿಸುತ್ತಿತ್ತು ಮತ್ತು ವಿದ್ಯಾರ್ಥಿಗಳು ಮತ್ತು ಯುವಕರು 'ಸಂಪೂರ್ಣ ಕ್ರಾಂತಿ'ಯ ಕರೆಯನ್ನು ಬೆಂಬಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಹೊರಬರುತ್ತಿದ್ದರು. ಇದು ಸ್ವಾಭಾವಿಕವಾಗಿಯೇ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಅನ್ನು ದಬ್ಬಾಳಿಕೆಯ ಹಾದಿಗೆ ಕೊಂಡೊಯ್ಯಿತು. 1974 ರ ರೈಲ್ವೆ ಮುಷ್ಕರ ಸರ್ಕಾರವನ್ನು ಬೆಚ್ಚಿಬೀಳಿಸಿತು. ಅದರ ಮೇಲೆ ನಡೆದ ಬಲವಂತದ ದಬ್ಬಾಳಿಕೆಯು ರಾಷ್ಟ್ರದಾದ್ಯಂತ ವ್ಯಾಪಕ ಪ್ರತಿಭಟನೆಗಳಿಗೆ ಕಾರಣವಾಯಿತು. ಗುಜರಾತ್ ನಲ್ಲಿ ಕಾಂಗ್ರೆಸ್ ಸರ್ಕಾರ ಜನರ ಕೋಪವನ್ನು ತಡೆದುಕೊಳ್ಳಲು ಸಾಧ್ಯವಾಗದೆ ಪತನಗೊಂಡರೂ, ಚುನಾವಣೆಗಳು ನಡೆಯಲಿಲ್ಲ ಮತ್ತು ಮೊರಾರ್ಜಿ ದೇಸಾಯಿ ಅದರ ವಿರುದ್ಧ ಉಪವಾಸ ಸತ್ಯಾಗ್ರಹ ನಡೆಸಿದರು. ಅಂತಿಮವಾಗಿ, ಯಾವುದೇ ದಾರಿಯಿಲ್ಲದೆ, ಇಂದಿರಾ ಗಾಂಧಿ ಗುಜರಾತ್ ನಲ್ಲಿ ಚುನಾವಣೆಗಳನ್ನು ಘೋಷಿಸಬೇಕಾಯಿತು.

ಗುಜರಾತ್ ಚುನಾವಣಾ ತೀರ್ಪು ಮತ್ತು ಅಲಹಾಬಾದ್ ಹೈಕೋರ್ಟ್ ತೀರ್ಪು ಒಂದೇ ದಿನ ಅಂದರೆ, ಜೂನ್ 12, 1975 ರಂದು ಪ್ರಕಟವಾಯಿತು. ಎರಡರಲ್ಲೂ, ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವು ಅವಮಾನಕರ ಸೋಲನ್ನು ಅನುಭವಿಸಿತು. ಹೈಕೋರ್ಟ್ ತೀರ್ಪು ಆಗಿನ ಪ್ರಧಾನಿಯನ್ನು ಚುನಾವಣಾ ದುಷ್ಕೃತ್ಯಗಳಲ್ಲಿ ತಪ್ಪಿತಸ್ಥರೆಂದು ಘೋಷಿಸಿತು ಮತ್ತು ಆರು ವರ್ಷಗಳ ಕಾಲ ಚುನಾಯಿತ ಹುದ್ದೆಯನ್ನು ಅಲಂಕರಿಸುವುದನ್ನು ಅಥವಾ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿತು. ಅವರು ಸುಪ್ರೀಂ ಕೋರ್ಟ್ ಅನ್ನು ಬೇಷರತ್ತಾದ ತಡೆಯಾಜ್ಞೆಗಾಗಿ ಕೋರಿದರು. ಆದಾಗ್ಯೂ, ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರಿಗೆ ಅವಮಾನಕರ ಷರತ್ತುಬದ್ಧ ತಡೆಯಾಜ್ಞೆಯನ್ನು ಮಾತ್ರ ನೀಡಿದರು. ಆದ್ದರಿಂದ, ಅವರು ಅಧಿಕಾರದಲ್ಲಿ ಮುಂದುವರಿಯಲು ಬಯಸಿದರೆ, ತುರ್ತು ಪರಿಸ್ಥಿತಿ ಘೋಷಿಸುವುದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ. ಅದು ಕೇವಲ ಸರ್ವಾಧಿಕಾರಿ ಕ್ರಮವಾಗಿರಲಿಲ್ಲ, ಇದು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸದೆ ಮಾಡಿದ ಘೋಷಣೆಯೂ ಆಗಿತ್ತು. ಆಗಿನ ಪ್ರಧಾನಿ ತಮ್ಮ ಸ್ವಂತ ಸಚಿವ ಸಂಪುಟವನ್ನು ಸಂಪರ್ಕಿಸದೆ ತುರ್ತು ಪರಿಸ್ಥಿತಿ ಘೋಷಿಸುವ ನಿರ್ಧಾರವನ್ನು ತೆಗೆದುಕೊಂಡರು ಎಂದು. ಆಯೋಗವು ಖಚಿತಪಡಿಸಿಕೊಂಡಿತ್ತು.

'ಪ್ರಜಾಪ್ರಭುತ್ವ ಸದನ'ದಲ್ಲಿ 'ಸರ್ವಾಧಿಕಾರಕ್ಕೆ ಅವಕಾಶ' ಇರುತ್ತದೆ ಎಂದು ಹೇಳಲಾಗುತ್ತದೆ. ಆಧುನಿಕ ಬೂರ್ಜ್ವಾ ಸಂಸದೀಯ ಪ್ರಜಾಪ್ರಭುತ್ವದಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಭೆ ಸೇರುವ ಸ್ವಾತಂತ್ರ್ಯ ಇತ್ಯಾದಿಗಳು ಅದರ ಭಾಗವಾಗಿವೆ. ಆದಾಗ್ಯೂ, ಶೋಷಣಾ ವ್ಯವಸ್ಥೆಯನ್ನು ಜನರ ಚಳುವಳಿಗಳ ಮೂಲಕ ಸಮತಾವಾದ ವ್ಯವಸ್ಥೆಯನ್ನಾಗಿ ಬದಲಾಯಿಸಬಹುದಾದ ಪರಿಸ್ಥಿತಿ ಉದ್ಭವಿಸಿದಾಗ, ಅಂತಹ ಸ್ವಾತಂತ್ರ್ಯಗಳು ಮತ್ತು ಹಕ್ಕುಗಳು ಕಣ್ಮರೆಯಾಗುತ್ತವೆ. ನಂತರ, ಬೂರ್ಜ್ವಾ ಪ್ರಜಾಪ್ರಭುತ್ವದ ಹೊಳೆಯುವ ಮುಂಭಾಗದ ಕೆಳಗೆ ಅಡಗಿರುವ ಸರ್ವಾಧಿಕಾರಿ ಪ್ರವೃತ್ತಿಗಳು ಅದರ ಕೊಳಕು ಗ್ರಹಣಾಂಗಗಳನ್ನು ಬಹಿರಂಗಪಡಿಸುತ್ತವೆ. 50 ವರ್ಷಗಳ ಹಿಂದೆ ಆಂತರಿಕ ತುರ್ತು ಪರಿಸ್ಥಿತಿಯ ಸಮಯದಲ್ಲಿ ನಾವು ನೋಡಿದ್ದು ಇದನ್ನೇ ಮತ್ತು ನರೇಂದ್ರ ಮೋದಿ ಸರ್ಕಾರದ ಅಡಿಯಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯ ಸಮಯದಲ್ಲಿ ಈಗ ನೋಡುತ್ತಿದ್ದೇವೆ.

1977 ರ ಚುನಾವಣೆಗಳಲ್ಲಿ ಆಂತರಿಕ ತುರ್ತು ಪರಿಸ್ಥಿತಿಯ ವಿರುದ್ಧ ಅತ್ಯಂತ ನಿರ್ಣಾಯಕವಾಗಿ ಪ್ರತಿಕ್ರಿಯಿಸಿದವರು ಭಾರತದ ಸಾಮಾನ್ಯ ಜನರು, ವಿಶೇಷವಾಗಿ ನಮ್ಮ ಜನಸಂಖ್ಯೆಯ ಬಡವರು ಮತ್ತು ಗ್ರಾಮೀಣ ವರ್ಗಗಳು. ವಾಸ್ತವವಾಗಿ, ತುರ್ತು ಪರಿಸ್ಥಿತಿಯ ಸಮಯದಲ್ಲಿ ವಿಧಿಸಲಾದ ಕೆಲವು ಷರತ್ತುಗಳನ್ನು ಸಡಿಲಿಸುವ ಮೂಲಕ ಚುನಾವಣೆಗಳನ್ನು ನಡೆಸಲಾಯಿತು ಮತ್ತು ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಭಾರತೀಯ ಜನರ ಕೈಯಲ್ಲಿ ಅವಮಾನಕರ ಸೋಲನ್ನು ಅನುಭವಿಸಿದ ನಂತರವೇ ನಿಜವಾದ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಲಾಯಿತು.

ಭಾರತದ ಆಂತರಿಕ ತುರ್ತು ಪರಿಸ್ಥಿತಿ ನಮಗೆ ಏನನ್ನಾದರೂ ಕಲಿಸಿದ್ದರೆ, ಅದು ಜನರೇ ಸರ್ವೋಚ್ಚರು ಮತ್ತು ಆಡಳಿತ ನಡೆಸುವವರು ಎಷ್ಟೇ ಉನ್ನತ ಮತ್ತು ಪ್ರಬಲರಾಗಿದ್ದರೂ ಸಹ, ಜನರನ್ನು ತುಳಿದು ಹಾಕುವ ಯಾವುದೇ ವ್ಯವಸ್ಥೆಯನ್ನು ಅವರು ಸಹಿಸುವುದಿಲ್ಲ ಎಂಬುದು ಪ್ರಮುಖ ಪಾಠವಾಗಿತ್ತು. ಜನರಿಗಾಗಿ ಜನರೊಂದಿಗೆ ನಮ್ಮ ಹೋರಾಟವನ್ನು ದೃಢವಾಗಿ ಮುಂದುವರಿಸಲು ಇದು ನಮ್ಮನ್ನು ಇಂದಿಗೂ ನೆನಪಿಸುತ್ತದೆ.

ಅನು: ನಾಗರಾಜ ನಂಜುಂಡಯ್ಯ

ವೇತನ ಅಸಮಾನತೆಯಲ್ಲಿ ಹೆಚ್ಚಳ ಮತ್ತು ಶ್ರಮಜೀವಿಗಳ ಅನೈಕ್ಯತೆ...... ಪುಟ 11 ರಿಂದ

ಕೆಲವರು ವೇತನ ಶ್ರೇಣಿಯಲ್ಲಿ ಉನ್ನತ ಸ್ಥಾನವನ್ನು ತಲುಪಿದರೆ, ಬಹುಪಾಲು ಜನರು, ವಿಶೇಷವಾಗಿ ಮಹಿಳೆಯರು, ಕೆಳಮಟ್ಟಕ್ಕೆ ಇಳಿಯುತ್ತಾರೆ. ಇದರಿಂದಾಗಿ ವೇತನ ಅಸಮಾನತೆಗಳ ಜೊತೆಗೆ ಲಿಂಗ ಅಸಮಾನತೆಗಳು ಹೆಚ್ಚಾಗುತ್ತವೆ.

ಒಟ್ಟಾರೆ ನೈಜ ವೇತನ ಏರಿಕೆಯಾಗಿದೆ ಎಂದು ಐಎಲ್ಒ ವರದಿ ಹೇಳುತ್ತಿದ್ದರೂ, ವೇತನ ಅಸಮಾನತೆ ವೇಗವಾಗಿ ಬೆಳೆಯುತ್ತಿದೆ ಎಂಬುದು ವಾಸ್ತವವಾಗಿದೆ. ಬಂಡವಾಳ ಎಷ್ಟು ಹೆಚ್ಚಾಗಿ ಒಂದೇ ಕಡೆ ಎಷ್ಟು ವೇಗವಾಗಿ ಕೇಂದ್ರೀಕೃತವಾಗುತ್ತದೆಯೋ, ಅಷ್ಟೇ ವೇಗವಾಗಿ ವೇತನಗಳ ಅಸಮಾನತೆ ಬೆಳೆಯುತ್ತಾ ಹೋಗುತ್ತದೆ. ಅದರೊಂದಿಗೆ, ಕಾರ್ಮಿಕರ ವಿಘಟನೆಯೂ ಹೆಚ್ಚುತ್ತಿದೆ. ಕಾರ್ಮಿಕ ಶಕ್ತಿ ಮೇಲೆ ಮತ್ತು ಉತ್ಪಾದನೆಯ ಕ್ರಮದ ಮೇಲೆ ಬಂಡವಾಳದ ರಾಜಕೀಯ ಪ್ರಾಬಲ್ಯದಿಂದಾಗಿ ಇದು ಸಾಧ್ಯವಾಗಿದೆ. ಈ ಬಂಡವಾಳದ ಪ್ರಾಬಲ್ಯವನ್ನು ಎದುರಿಸಲು ಮತ್ತು ಬೆಳೆಯುತ್ತಿರುವ ಅಸಮಾನತೆಯಿಂದ ಹೊರಬರಲು ಪರಿಹಾರವೆಂದರೆ ಛಿದ್ರಗೊಂಡ ಕಾರ್ಮಿಕ ವರ್ಗದ ನಡುವೆ ಸಾಮೂಹಿಕ ವರ್ಗ ಪ್ರಜ್ಞೆಯನ್ನು ನಿರ್ಮಿಸುವ ರಾಜಕೀಯ ಪ್ರಕ್ರಿಯೆಯನ್ನು ವೇಗಗೊಳಿಸುವುದು.

ಕನ್ನಡಕ್ಕೆ: ಸಿಬಿ

ಭಾರತದ ಜಿಡಿಪಿಯು ಹೊಂದಿರುವ ಸ್ಥಾನ-ಮಾನದ ಸುತ್ತ ನಡೆಯುತ್ತಿರುವ ಚರ್ಚೆಗಳು, ಜಿಡಿಪಿಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೆಲವು ಸವಾಲುಗಳಿವೆ ಎಂಬ ಅಂಶವನ್ನು ಒತ್ತಿಹೇಳುತ್ತವೆ. ಡಾಲರ್ ವಿನಿಮಯ ದರದ ಆಧಾರದಲ್ಲಿ ಲೆಕ್ಕ ಹಾಕಿದರೆ ಭಾರತ ಸದ್ಯಕ್ಕೇ ನಾಲ್ಕನೇ ಅತಿ ದೊಡ್ಡ ಅರ್ಥವ್ಯವಸ್ಥೆ ಯಾಗುತ್ತಿದೆಯಾದರೆ, ಪಿಪಿಪಿ (ಅಂದರೆ, ಕೊಳ್ಳುವ ಶಕ್ತಿ ಅನುರೂಪತೆ)ಯ ಆಧಾರದಲ್ಲಿ ಲೆಕ್ಕ ಹಾಕಿದರೆ, ಭಾರತವು ಮೂರನೇ ಸ್ಥಾನವನ್ನು ೨೦೦೯ರಲ್ಲೇ ಪಡೆದುಕೊಂಡಿತ್ತು ಮತ್ತು ಅಂದಿನಿಂದಲೂ ಅದೇ ಸ್ಥಾನದಲ್ಲಿ ಮುಂದುವರೆದಿದೆ, ಮಾತ್ರವಲ್ಲ, ಮುಂದಿನ ೫೦ ವರ್ಷಗಳಲ್ಲೂ ಭಾರತವು ಮೂರನೇ ಸ್ಥಾನದಿಂದ ಮೇಲೆ ಏರಬಹುದು ಎಂದು ಆಶಿಸಲು ಕಾರಣಗಳಿಲ್ಲ. ಸರ್ಕಾರ ಮತ್ತು ಅದರ ವಕ್ತಾರರು ಮಾರುಕಟ್ಟೆ ವಿನಿಮಯ ದರಗಳ ಆಧಾರದ ಮೇಲೆ ತಲುಪಿದ ಸ್ಥಾನ-ಮಾನವನ್ನು ಸಂಭ್ರಮಿಸುತ್ತಿರುವ ಸಮಯದಲ್ಲಿ, ಪಿಪಿಪಿ ವಿನಿಮಯ ದರ ಆಧಾರದ ಮೇಲೆ ಮೂರನೇ ಸ್ಥಾನವನ್ನು ಭಾರತವು ಅದಾಗಲೇ ತಲುಪಿದ್ದ ಬಗ್ಗೆ ಮೌನ ವಹಿಸಿರುವುದು ತಮಾಷೆಯಾಗಿ ಕಾಣುತ್ತದೆ.

ಪ್ರೊ.ಆರ್.ರಾಮಕುಮಾರ್ ಅನು: ಕೆ.ಎಂ.ನಾಗರಾಜ್



ಭಾರತದ ಜಿಡಿಪಿ ಗಾತ್ರ: ಸಂಭ್ರಮಾಚರಣೆಯ ಆಚೆಗಿನ ನೋಟ

ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕ ಶಕ್ತಿಯ ಸ್ಥಾನ-ಮಾನ ಕುರಿತು ಮಾಧ್ಯಮಗಳಲ್ಲಿ ವರದಿಗಳು ಗಮನಾರ್ಹ ಏರಿಕೆಯನ್ನು ಕಂಡಿವೆ. ಮಾಧ್ಯಮಗಳು ತೋರುವ ಈ ಆಸಕ್ತಿಗೆ ಕಾರಣವೆಂದರೆ, ದೇಶ-ದೇಶಗಳ ಜಿಡಿಪಿಯ (ಒಟ್ಟು ದೇಶೀಯ ಉತ್ಪನ್ನದ) 2024ರ ನವೀಕರಿಸಿದ ಅದರ ಅಂದಾಜುಗಳ ಜೊತೆಗೆ 2025-2030ರ ವರ್ಷಗಳ ಮುನ್ಸೂಚನೆಗಳನ್ನೂ ಐಎಂಎಫ್ (ಅಂತಾರಾಷ್ಟ್ರೀಯ ಹಣಕಾಸು ನಿಧಿ) ಪ್ರಕಟಿಸಿದೆ. ಈ ಮುನ್ಸೂಚನೆಗಳ ಪ್ರಕಾರ, 2025ರಲ್ಲಿ ಭಾರತದ ಜಿಡಿಪಿಯು ಸುಮಾರು $4,187.03 ಬಿಲಿಯನ್ ಮಟ್ಟವನ್ನು ತಲುಪಲಿದೆ ಮತ್ತು ಇದು ಜಪಾನ್‌ನ ಜಿಡಿಪಿಗಿಂತಲೂ ($4,186.43 ಬಿಲಿಯನ್) ತುಸು ಹೆಚ್ಚಿಗೆ ಇರಲಿದೆ. ಈ ಮುನ್ಸೂಚನೆಗಳು ಒಂದು ವೇಳೆ ಸಾಕಾರಗೊಂಡರೆ, ಭಾರತವು 2025ರ ವೇಳೆಗೆ ಜಾಗತಿಕವಾಗಿ ನಾಲ್ಕನೇ ಅತಿ ದೊಡ್ಡ ಅರ್ಥವ್ಯವಸ್ಥೆಯ ಸ್ಥಾನವನ್ನು ಪಡೆದುಕೊಳ್ಳುವ ಸಾಧ್ಯತೆಯಿದೆ ಮತ್ತು ಜಾಗತಿಕ ಶ್ರೇಣಿಯ ಪಟ್ಟಿಯಲ್ಲಿ ಯುಎಸ್, ಚೀನಾ ಮತ್ತು ಜರ್ಮನಿಯ ನಂತರದ ಸ್ಥಾನವನ್ನು ಪಡೆದುಕೊಳ್ಳಲಿದೆ.

ಈ ಬೆಳವಣಿಗೆಯು ಪತ್ರಿಕೆಗಳ ಶಿರೋನಾಮೆಗಳಿಗೆ ಕಾರಣವಾಗಿರುವುದು ಮಾತ್ರವಲ್ಲದೆ, ಭಾವಾವೇಶದ ರಾಜಕೀಯ ಚರ್ಚೆಯನ್ನೂ ಹುಟ್ಟುಹಾಕಿದೆ. ಉದಾಹರಣೆಗೆ, ಸರ್ಕಾರದ ಅಧಿಕಾರಿಗಳು, ಈ ಸಾಧನೆಯ ಶ್ರೇಯಸ್ಸಿಗೆ ಪ್ರಧಾನ ಮಂತ್ರಿಯವರ "ದೂರದರ್ಶಿ" ನಾಯಕತ್ವವೇ ಕಾರಣವೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಈ ಮೈಲಿಗಲ್ಲು ಸಾಧನೆಯ ಕಥನವು 2028ರ ವೇಳೆಗೆ ಭಾರತವು ಮತ್ತಷ್ಟು ಮೇಲೆ ಜಿಗಿಯಲು ಮತ್ತು ಮೂರನೆಯ ಅತಿ ದೊಡ್ಡ ಅರ್ಥವ್ಯವಸ್ಥೆಯ ಬಿರುದನ್ನು ಪಡೆಯಲು ಒಂದು ಜಿಗಿ ಹಲಗೆಯಾಗಬಹುದು ಎಂಬುದನ್ನು ಸೂಚಿಸುತ್ತದೆ. 2028ರ ಆಚೆಗೆ, 2047ರ ವೇಳೆಗೆ ಭಾರತವು ಹೆಚ್ಚು ವರಮಾನದ, ಅಭಿವೃದ್ಧಿ ಹೊಂದಿದ (ವಿಕಸಿತ ಭಾರತ ಎಂದು ಕರೆಯಲಾದ) ರಾಷ್ಟ್ರವಾಗಿ ಹೊರಹೊಮ್ಮುವ ಹೆಬ್ಬಯಕೆಯನ್ನು ವ್ಯಕ್ತಪಡಿಸಲಾಗಿದೆ.

ಜಿಡಿಪಿ ಮಾಪನದ ಮಿತಿಗಳು

ಒಂದು ಸಾರಾಂಶದ ರೂಪದಲ್ಲಿ ಹೇಳುವುದಾದರೆ, ಜಿಡಿಪಿ ಎಂಬುದು ಒಂದು ದೇಶದ ಅರ್ಥವ್ಯವಸ್ಥೆಯ ಗಾತ್ರದ ಚಿತ್ರಣವನ್ನು ಸಂಖ್ಯೆಗಳ ರೂಪದಲ್ಲಿ ಕೊಡುತ್ತದೆ. ಆದರೂ, ದೇಶದ ನಾಗರಿಕರು ಹೇಗೆ ಬದುಕುತ್ತಾರೆ, ಎಂಥಹ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ ಅಥವಾ ಯಶಸ್ವಿಯಾಗುತ್ತಾರೆ ಎಂಬುದನ್ನು ಅದು ತಿಳಿಸುವುದಿಲ್ಲ. ಜಿಡಿಪಿಯಂತಹ ಮಾಪನಗಳು ಜನರ ಆರೋಗ್ಯ ಮಟ್ಟ, ಶಿಕ್ಷಣ ಮಟ್ಟ ಅಥವಾ ವರಮಾನ ವಿತರಣೆಯಲ್ಲಿರುವ ಅಸಮಾನತೆಗಳ ಬಗ್ಗೆ ಏನನ್ನೂ ತಿಳಿಸುವುದಿಲ್ಲ. ಮಾತ್ರವಲ್ಲ, ಆರ್ಥಿಕ ಚಟುವಟಿಕೆಯ ಹಲವು ಅವಶ್ಯ ಆಯಾಮಗಳು ಜಿಡಿಪಿ ಲೆಕ್ಕಾಚಾರಗಳ ವ್ಯಾಪ್ತಿಯಿಂದ ಹೊರಗಿವೆ. ಉದಾಹರಣೆಗೆ, ಪ್ರಧಾನವಾಗಿ ಮಹಿಳೆಯರೇ ಸಂಬಳವಿಲ್ಲದೆ ನಿರ್ವಹಿಸುವ ಮನೆಕೆಲಸ ಮತ್ತು ಲಾಲನೆ-ಆರೈಕೆ ಮುಂತಾದವುಗಳನ್ನು ದೇಶದ ಆರ್ಥಿಕ ಚಟುವಟಿಕೆಗಳ ಲೆಕ್ಕಾಚಾರದಿಂದ ಹೊರಗಿಡಲಾಗಿದೆ.

ಈ ಕೊರತೆಯ ಸಂಬಂಧವಾಗಿ, ಜಿಡಿಪಿ ಲೆಕ್ಕಾಚಾರಗಳ ಸಲುವಾಗಿ ಪರಿಗಣಿಸುವ ಅಂಶಗಳನ್ನು ಸಮಗ್ರವಾಗಿ ಪರಿಷ್ಕರಿಸುವಂತೆ ತಜ್ಞರು ಪದೇ ಪದೇ ಒತ್ತಾಯ ಮಾಡಿದ್ದಾರೆ. ಸಾಮಾಜಿಕ-ಆರ್ಥಿಕ ಪ್ರಗತಿ ಮತ್ತು ಸಾಧನೆಗಳ ಸಂಬಂಧವಾಗಿ ತಿಳುವಳಿಕೆಯನ್ನು ಸೂಕ್ಷ್ಮವಾಗಿಯಾದರೂ ನೀಡುವಂತಹ ಪರ್ಯಾಯ ಸೂಚಕಗಳನ್ನು ಬಳಸಬೇಕೆಂದು ಇನ್ನೂ ಕೆಲವರು ವಾದಿಸುತ್ತಾರೆ. ಆದರೆ, ಈ ಎಲ್ಲ ಟೀಕೆಗಳ ಹೊರತಾಗಿಯೂ, ಆಂತರಿಕ ಮತ್ತು ಅಂತಾರಾಷ್ಟ್ರೀಯ ಆರ್ಥಿಕ ಚರ್ಚೆಗಳಲ್ಲಿ ಈ ಮಾಪನವೇ ಪ್ರಧಾನ.



ನಾನಾ ರೀತಿಯ ಜಿಡಿಪಿ ಅಳತೆಗಳು

ಭಾರತದ ಜಿಡಿಪಿಯು ಹೊಂದಿರುವ ಸ್ಥಾನ-ಮಾನದ ಸುತ್ತ ನಡೆಯುತ್ತಿರುವ ಚರ್ಚೆಗಳು, ಜಿಡಿಪಿಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೆಲವು ಸವಾಲುಗಳಿವೆ ಎಂಬ ಅಂಶವನ್ನು ಒತ್ತಿಹೇಳುತ್ತವೆ. ಒಂದು ತಾಂತ್ರಿಕ ವಿವರಣೆಯಾಗಿ ಹೇಳುವುದಾದರೆ, ಜಿಡಿಪಿ ಎಂಬುದು ಒಂದು ದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಅಂತಿಮವಾಗಿ ಉತ್ಪಾದಿಸಿದ ಸರಕು ಮತ್ತು ಸೇವೆಗಳ ಹಣ ಮೌಲ್ಯವನ್ನು ಅಳೆಯುತ್ತದೆ. ಈ ಅಳತೆ ಪ್ರಕ್ರಿಯೆಯ ಕೊನೆಯಲ್ಲಿ ಜಿಡಿಪಿಯ ಅಂತಿಮ ಮೌಲ್ಯವನ್ನು ಅಂದಾಜು ಮಾಡಲು ನಾವು ಉತ್ಪಾದನೆಯ ಒಟ್ಟು "ಪ್ರಮಾಣ"ವನ್ನು ಅದರ "ಬೆಲೆ"ಯೊಂದಿಗೆ ಗುಣಿಸುತ್ತೇವೆ. ಬೇರೆ ಬೇರೆ ದೇಶಗಳ ಜಿಡಿಪಿ ಅಂದಾಜುಗಳನ್ನು ಹೋಲಿಸುವ ಕಾರ್ಯವು, ಕೆಲವು ಪ್ರಮಾಣೀಕೃತ ವಿಧಾನಗಳ ಮೂಲಕ ನಿರ್ಣಯಿಸುವ ಒಂದು ಸಂಕೀರ್ಣ ಕಸರತ್ತಾಗಿದೆ. ಈ ವಿಧಾನಗಳನ್ನು ಪರಿಷ್ಕರಿಸಲು ಅರ್ಥಶಾಸ್ತ್ರಜ್ಞರು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಹಲವಾರು ವರ್ಷಗಳ ಕಾಲ ಶ್ರಮಪಟ್ಟಿದ್ದಾರೆ. ಆದಾಗ್ಯೂ, ಜಿಡಿಪಿಯನ್ನು ಅಂದಾಜು ಮಾಡುವ ಯಾವ ಏಕ ವಿಧಾನವೂ ಅರ್ಥವ್ಯವಸ್ಥೆಯ ಎಲ್ಲ ಆಯಾಮಗಳನ್ನೂ ಒಳಗೊಳ್ಳುವಷ್ಟು ಸಮರ್ಥವಾಗಿಲ್ಲ. ಆದ್ದರಿಂದ, ಅಂದಾಜುಗಳು ಭಿನ್ನ ಭಿನ್ನವಾಗಿರುತ್ತವೆ ಮತ್ತು ಅವುಗಳನ್ನು ಭಿನ್ನ ಭಿನ್ನ ವಿಧಾನಗಳನ್ನು ಮತ್ತು ಅಂಶಗಳನ್ನು ಬಳಸಿಕೊಂಡು ಮಾಡಲಾಗಿರುತ್ತದೆ.

ಗುಣಮಟ್ಟದ ದತ್ತಾಂಶಗಳ ಸಂಗ್ರಹಣೆಯ ವಿಷಯದಲ್ಲಿ ಒಂದು ದೇಶಕ್ಕೂ ಮತ್ತೊಂದು ದೇಶಕ್ಕೂ ಕೆಲವು ವ್ಯತ್ಯಾಸಗಳು ಇರುತ್ತವೆಯಾದರೂ, ಜಿಡಿಪಿಯನ್ನು ಲೆಕ್ಕಹಾಕುವ ಪ್ರಕ್ರಿಯೆಯು ಸುಮಾರಾಗಿ ಎಲ್ಲ ದೇಶಗಳಲ್ಲೂ ಸಮನ್ವಯಗೊಂಡಿದೆ. ಸಾಮಾನ್ಯವಾಗಿ, ಪ್ರತಿ ದೇಶದ ಜಿಡಿಪಿಯನ್ನು ಅದರ ಕರೆನ್ಸಿಯಲ್ಲೇ ಲೆಕ್ಕಹಾಕಲಾಗುತ್ತದೆ ಮತ್ತು ಪ್ರಸ್ತುತಪಡಿಸಲಾಗುತ್ತದೆ. ಆದರೆ, ಒಂದು ದೇಶದ ಜಿಡಿಪಿಯನ್ನು ಮತ್ತೊಂದು ದೇಶದ ಜಿಡಿಪಿಯೊಂದಿಗೆ ಹೋಲಿಸುವಾಗ - ಉದಾಹರಣೆಗೆ, ಭಾರತ ಮತ್ತು ಅಮೆರಿಕದ ಜಿಡಿಪಿಯನ್ನು ಹೋಲಿಸುವಾಗ, ಒಂದು ಸಾಮಾನ ಕರೆನ್ಸಿಯು ಅಗತ್ಯವಾಗುತ್ತದೆ. ಇಂಥಹ ಹೋಲಿಕೆಗಳಿಗಾಗಿ ಯುಎಸ್ ಡಾಲರ್‌ಅನ್ನು ಒಂದು ಪ್ರಮಾಣಿತ ಕರೆನ್ಸಿಯಾಗಿ ಒಪ್ಪಿಕೊಳ್ಳಲಾಗಿದೆ.

ಮಾರುಕಟ್ಟೆ ವಿನಿಮಯ ದರ ಲೆಕ್ಕದ ಜಿಡಿಪಿ

ದೇಶದ ಕರೆನ್ಸಿಯ ಮೂಲಕ ಲೆಕ್ಕಹಾಕಿದ ಜಿಡಿಪಿಯನ್ನು ಯುಎಸ್ ಡಾಲರ್ ಲೆಕ್ಕದ ಜಿಡಿಪಿಯಾಗಿ ಪರಿವರ್ತಿಸುವ ಎರಡು ವಿಧಾನಗಳಿವೆ. ಈ ಎರಡೂ ವಿಧಾನಗಳೂ ಸವಾಲುಗಳಿಂದ ಕೂಡಿವೆ. ಮೊದಲನೆಯ ವಿಧಾನದಲ್ಲಿ, ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಹೊಂದಿರುವ ದರವನ್ನು (ಬೆಲೆಯನ್ನು) ಪರಿಗಣಿಸಲಾಗುತ್ತದೆ. ಉದಾಹರಣೆಗೆ, ನಮ್ಮ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಒಂದು ಯುಎಸ್ ಡಾಲರ್‌ನ ಪ್ರಸ್ತುತ ಬೆಲೆಯು/ದರವು ಸುಮಾರು 85.59 ರೂ.ಗಳಿಗೆ ಸಮಾನಾಗಿದೆ. ಈ ದರವನ್ನು ಬಳಸಿಕೊಂಡು, ಯುಎಸ್ ಡಾಲರ್ ಲೆಕ್ಕದ ಜಿಡಿಪಿ ಅಂಕಿಯನ್ನು ಪಡೆಯಲು ಭಾರತದ ನಾಮಮಾತ್ರ ಜಿಡಿಪಿಯ ಅಂಕಿಯನ್ನು ರೂ. 85.59 ರಿಂದ ಭಾಗಿಸಬೇಕು. ನಂತರ, ಇದೇ ವಿಧಾನದ ಮೂಲಕ ಬೇರೆ ಬೇರೆ ದೇಶಗಳ ಜಿಡಿಪಿಯ ಡಾಲರ್ ಲೆಕ್ಕದ ಅಂಕಿಯನ್ನು ಪಡೆಯಬಹುದು ಮತ್ತು ಅವುಗಳ ಜಾಗತಿಕ ಶ್ರೇಯಾಂಕ ಪಟ್ಟಿಯನ್ನು ಸಿದ್ಧಪಡಿಸಬಹುದು.

ಡಾಲರ್‌ನ ಮಾರುಕಟ್ಟೆ ಮೌಲ್ಯವನ್ನು ಬಳಸಿಕೊಂಡು ಮಾಡಿದ ಜಿಡಿಪಿಯ ಲೆಕ್ಕಾಚಾರಗಳ ಆಧಾರದ ಮೇಲೆ, ಭಾರತವು 2021ರಿಂದಲೂ ಐದನೇ ಅತಿದೊಡ್ಡ ಅರ್ಥವ್ಯವಸ್ಥೆಯ ಸ್ಥಾನವನ್ನು ಹೊಂದಿದೆ. ಐಎಂಎಫ್ ಮಾಡಿರುವ ಭವಿಷ್ಯದ ಅಂದಾಜಿನ ಪ್ರಕಾರ ಭಾರತವು 2025ರ ವೇಳೆಗೆ ನಾಲ್ಕನೇ ಅತಿ ದೊಡ್ಡ ಅರ್ಥವ್ಯವಸ್ಥೆಯಾಗಿಯೂ ಮತ್ತು 2028ರ ವೇಳೆಗೆ ಮೂರನೇ ಅತಿದೊಡ್ಡ ಅರ್ಥವ್ಯವಸ್ಥೆಯಾಗಿಯೂ ಹೊರಹೊಮ್ಮುವ ಸಾಧ್ಯತೆಯಿದೆ. ಈ ಶ್ರೇಯಾಂಕ (ranking) ಪಟ್ಟಿಯ ಪ್ರಕಾರ, ಅಮೆರಿಕವು ಮೊದಲ ಸ್ಥಾನದಲ್ಲಿದೆ ಮತ್ತು ಚೀನಾ ಎರಡನೇ ಸ್ಥಾನದಲ್ಲಿದೆ.

ಪಿಪಿಪಿ ವಿನಿಮಯ ದರ ಲೆಕ್ಕದ ಜಿಡಿಪಿ

ಮಾರುಕಟ್ಟೆಯಲ್ಲಿ ಡಾಲರ್ ಹೊಂದಿದ ವಿನಿಮಯ ದರವನ್ನು ಆಧರಿಸಿದ ಜಿಡಿಪಿಯನ್ನು ಬಳಸುವಾಗ ಕೆಲವು ಸಮಸ್ಯೆಗಳಿರುತ್ತವೆ. ಡಾಲರ್-ರೂಪಾಯಿ ವಿನಿಮಯ ದರಗಳ ಏರಿಳಿತಗಳು ವಿಪರೀತವಾಗಿರುತ್ತವೆ. ಆದ್ದರಿಂದ, ಜಿಡಿಪಿಯ ಅಂದಾಜುಗಳು ಕಾಲಾನಂತರದಲ್ಲಿ ಸ್ಥಾನ-ಮಾನದ ಶ್ರೇಣಿಯಲ್ಲಿ ಪಲ್ಲಟಗೊಳ್ಳುತ್ತವೆ. ಜೊತೆಗೆ, ಮಾರುಕಟ್ಟೆ ವಿನಿಮಯ ದರಗಳನ್ನು ಬಳಸಿಕೊಂಡು ಮಾಡಿದ ಜಿಡಿಪಿಯ ಲೆಕ್ಕಾಚಾರಗಳು ದೇಶ ದೇಶಗಳ ಜನರ ಭಿನ್ನ ಭಿನ್ನ ಕೊಳ್ಳುವ ಸಾಮರ್ಥ್ಯಗಳ ಸಂಗತಿಯನ್ನು ನಿರ್ಲಕ್ಷಿಸುತ್ತವೆ. ಉದಾಹರಣೆಗೆ, ಸರಕು ಸಾಮಗ್ರಿಗಳ ಬೆಲೆಗಳು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಕೆಳ ಮಟ್ಟದಲ್ಲಿರುತ್ತವೆ. ಏಕೆಂದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಕಾರ್ಮಿಕರಿಗೆ ಕೊಡುವ ಕೂಲಿಯು ತೀರಾ ಕೆಳ ಮಟ್ಟದಲ್ಲಿರುತ್ತದೆ. ಇದು ಕಾರ್ಮಿಕರ ಕೆಳ ಮಟ್ಟದ ವರಮಾನಕ್ಕೂ ಕಾರಣವಾಗುತ್ತದೆ.

ಆದ್ದರಿಂದ, ಜಿಡಿಪಿಯನ್ನು ಪಿಪಿಪಿ (ಅಂದರೆ, ಕೊಳ್ಳುವ ಶಕ್ತಿ ಅನುರೂಪತೆ - purchasing power parity) ವಿನಿಮಯ ದರಗಳನ್ನು ಬಳಸಿಕೊಂಡು ಹೋಲಿಕೆ ಮಾಡಲಾಗುತ್ತದೆ. ಪಿಪಿಪಿ ವಿಧಾನವು ದೇಶ ದೇಶಗಳ ಬೆಲೆಗಳ ವ್ಯತ್ಯಾಸಗಳನ್ನು ಹೊಂದಾಣಿಕೆ ಮಾಡುತ್ತದೆ. ಒಂದು ಅರ್ಥವ್ಯವಸ್ಥೆಯಲ್ಲಿ ಇದು ನಾಗರಿಕರಿಗೆ ಕೊಳ್ಳುವ ಶಕ್ತಿಯ ಹೋಲಿಕೆಯ ದೃಷ್ಟಿಯಲ್ಲಿ ಒಂದು ಅರ್ಥವನ್ನು ಒದಗಿಸುತ್ತದೆ. ಈ ವಿಧಾನವು ಒಂದು ಸಮಾನ ಕರೆನ್ಸಿಯಲ್ಲಿ ನಿಗದಿಪಡಿಸಿದ ಅದೇ ಸರಕು ಮತ್ತು ಸೇವೆಗಳು ಅದೇ ಬೆಲೆಗಳನ್ನು ಹೊಂದಿರುತ್ತವೆ ಎಂಬ ಪರಿಕಲ್ಪನೆಯನ್ನು ಹೊಂದಿದೆ.

ಪಿಪಿಪಿ ವಿನಿಮಯ ದರಗಳನ್ನು ಬಳಸಿಕೊಂಡು ಭಾರತದ ಜಿಡಿಪಿಯನ್ನು ಲೆಕ್ಕಹಾಕಿದಾಗ, ಜಾಗತಿಕ ಶ್ರೇಣೀಕರಣವು ಗಮನಾರ್ಹವಾಗಿ ಬದಲಾಗುತ್ತದೆ. ಪಿಪಿಪಿ ಪರಿಭಾಷೆಯಲ್ಲಿ, ಐಎಂಎಫ್ ಮಾಡಿರುವ ಭವಿಷ್ಯದ ಅಂದಾಜು, ಭಾರತವನ್ನು ಚೀನಾ ಮತ್ತು ಯುಎಸ್ ನಂತರ ಜಾಗತಿಕವಾಗಿ ಮೂರನೇ ಅತಿ ದೊಡ್ಡ ಅರ್ಥವ್ಯವಸ್ಥೆಯ ಸ್ಥಾನದಲ್ಲಿ ಇರಿಸುತ್ತದೆ. ಆದರೆ, ಸಾಂದರ್ಭಿಕವಾಗಿ ಕುತೂಹಲಕರವಾದ ಒಂದು ಸಂಗತಿಯನ್ನು ಪುಟ 15 ಕ್ಕೆ

"ಪಹಲ್‌ಗಾಂ ದಾಳಿಯ ನಂತರ ನಾನು ಪ್ರತಿಯೊಬ್ಬ ಭಾರತೀಯನನ್ನು ರಕ್ಷಣಾ ತಜ್ಞರಾಗ ಮಾಡಿಬಿಟ್ಟೆ! ಈಗ ಅವರನ್ನೆಲ್ಲ ತಜ್ಞ ಅರ್ಥಶಾಸ್ತ್ರಜ್ಞರನ್ನಾಗಿ ಪರಿವರ್ತಿಸಿದ್ದೇನೆ!"

ವ್ಯಂಗ್ಯಚಿತ್ರ ಕೃಪೆ: ಪೊನ್ನಪ್ಪ @ ಎಕ್ಸ್

"ಪ್ರತಿ ಪೀಳಿಗೆಯೂ ತನ್ನದೇ ಆದ ತುರ್ತು ಪರಿಸ್ಥಿತಿಯನ್ನು ಎದುರಿಸಲೇಬೇಕೆ?":

ಈ ಪ್ರಶ್ನೆಯನ್ನು 1975ರ ಮತ್ತು 2014ರ ನಂತರದ ಎರಡೂ ತುರ್ತುಪರಿಸ್ಥಿತಿಗಳಲ್ಲಿ ಬಂಧಿತರಾದ ಪ್ರಬೀರ್ ಪುರಕಾಯಸ್ತ ಕೇಳುತ್ತಾರೆ. ಇದು ಅವರ *"Keeping Up the Good Fight: From the Emergency to the Present Day"* ಎಂಬ ಆತ್ಮಕಥಾತ್ಮಕ ಪುಸ್ತಕದ ಕನ್ನಡ ಅನುವಾದದ ಮೊದಲ ಅಧ್ಯಾಯದ ತಲೆಬರಹ. ಇಂಜಿನಿಯರ್, ಅಖಿಲ ಭಾರತ ಜನ ವಿಜ್ಞಾನ ಚಳುವಳಿಯ ಸಂಸ್ಥಾಪಕರಲ್ಲೊಬ್ಬ, ವಿಜ್ಞಾನ-ತಂತ್ರಜ್ಞಾನ ನೀತಿ ಪರಿಣತ, ರಾಜಕೀಯ ಆಕ್ಟಿವಿಸ್ಟ್, ಚಿಂತಕ, ಲೇಖಕ, ಜನತಾ ಮಾಧ್ಯಮದ ಸಂಸ್ಥಾಪಕರಲ್ಲೊಬ್ಬ-ಪ್ರಬೀರ್ ಇವೆಲ್ಲವೂ ಆಗಿದ್ದರು. ಈ ಪುಸ್ತಕ ಇವೆರಡು ತುರ್ತುಪರಿಸ್ಥಿತಿಗಳ ನಡುವಿನ ದಶಕಗಳ ಅವರ ಈ ವಿಶಿಷ್ಟ ಬದುಕಿನ ನೆನಪುಗಳು. ಕನ್ನಡ ಅನುವಾದದ ಹೆಸರು "ಆರದ ಹೋರಾಟದ ಕಿಚ್ಚು'. ಇದನ್ನು ಸದಾನಂದ ಆರ್ ಅನುವಾದಿಸಿದ್ದು ಅಭಿರುಚಿ ಪ್ರಕಾಶನ ಪ್ರಕಟಿಸಿದೆ. ಇದರ ಬಿಡುಗಡೆ ಸಮಾರಂಭ ಕ್ರಿಯಾ ಮಾಧ್ಯಮದ ಜತೆ ಸಹಯೋಗದಲ್ಲಿ ಜೂನ್ 21ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದಿದೆ. ಈ ಸಂದರ್ಭದಲ್ಲಿ ಈ ಪುಸ್ತಕದ ಝಲಕ್ ಕೊಡುವ ಮೊದಲ ಅಧ್ಯಾಯದ ಆಯ್ದ ಭಾಗಗಳು.

ಪ್ರಬೀರ್ ಪುರಕಾಯಸ್ತ

1. **1975, ಸೆಪ್ಟೆಂಬರ್ 25ರ ಮುಂಜಾನೆ**

ಜವಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ (ಜೆ.ಎನ್.ಯು) ಆ ಮುಂಜಾನೆ ಎಂದಿನ ಮುಂಜಾನೆಯಂತೆ ಇರಲಿಲ್ಲ. ವಿದ್ಯಾರ್ಥಿಗಳ ಪ್ರತಿಭಟನೆ ಎರಡನೇ ದಿನಕ್ಕೆ ಕಾಲಿಟ್ಟಿತ್ತು. ವಿದ್ಯಾರ್ಥಿ ಸಂಘದ ಚುನಾಯಿತ ಸದಸ್ಯರಾದ ಕು. ಅಶೋಕಲತ ಜೈನ್ ಅವರ ಉಚ್ಚಾಟನೆಯನ್ನು ವಿರೋಧಿಸಿ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್ಎಫ್ಐ) ಕರೆ ನೀಡಿದ್ದ ಪ್ರತಿಭಟನೆ ಇದಾಗಿತ್ತು. ಸ್ವಲ್ಪ ಬಿಗುವಿನ ವಾತಾವರಣ ಕ್ಯಾಂಪಸ್‌ನಲ್ಲಿತ್ತು. ಈ ಹೊತ್ತಿಗೆ ಪ್ರಧಾನಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಮೂರು ತಿಂಗಳು ಕಳೆದಿತ್ತು.

ನಾನಂದು ಭಾಷಾ ವಿಭಾಗದ (School of Languages) ಮುಂದಿದ್ದ ಹುಲ್ಲು ಹಾಸಿನ ಮೇಲೆ ಕೆಲವು ಎಸ್ಎಫ್ಐ ಗೆಳೆಯರೊಂದಿಗೆ ಕುಳಿತಿದ್ದೆ. ಅಲ್ಲಿಗೆ ದಿಢೀರನೆ ಬಂದ ಕಪ್ಪು ಬಣ್ಣದ ಅಂಬಾಸಿಡರ್ ಕಾರಿನಿಂದ ಓರ್ವ ದಪ್ಪಗಿನ ವ್ಯಕ್ತಿ ಇಳಿದರು. ಇಳಿದವರೆ ನೇರವಾಗಿ ನನ್ನ ಬಳಿ ಬಂದು "ನೀನು ಡಿ.ಪಿ.ತ್ರಿಪಾಠಿಯೇ?" ಎಂದು ಕೇಳಿದರು. ನಾನು "ಇಲ್ಲ" ಎಂದೆ. ಡಿ.ಪಿ.ತ್ರಿಪಾಠಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದವರು. ಆದರೆ ನನ್ನನ್ನು ನಂಬಲು ಡಿಐಜಿ ಪಿ.ಎಸ್. ಬಿಂದರ್ ಸಿದ್ಧರಿರಲಿಲ್ಲ. ಮಫ್ತಿಯಲ್ಲಿದ್ದ ಅವರು ಮತ್ತವರ ಕಡೆಯವರು ನನ್ನನ್ನು ಹಾಡು ಹಗಲೇ ಅಪಹರಿಸಿಯೇಬಿಟ್ಟರು. ಹೀಗೆ ಅಪಹೃತನಾದ ಮೇಲೆ ನಾನು ಆಂತರಿಕ ಭದ್ರತಾ ನಿರ್ವಹಣಾ ಕಾಯ್ದೆ (MISA-Maintenance of Internal Security Act)–ಮೀಸಾದಡಿಯಲ್ಲಿ ಒಂದು ವರ್ಷ ಜೈಲಿನಲ್ಲಿರಬೇಕಾಯಿತು.

ನಾವೀಗ ಐದು ದಶಕಗಳನ್ನು ದಾಟಿ ಮುಂದೆ ಬರೋಣ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಡಿಯಲ್ಲಿ ಬಿಜೆಪಿ ಸರ್ಕಾರ 2014ರಿಂದ ಅಧಿಕಾರದಲ್ಲಿದೆ. ಎರಡನೇ ಅವಧಿಗೆ 2019ರಲ್ಲಿ ಚುನಾಯಿತವಾಯಿತು. ನಮಗೆಲ್ಲಾ ಚಿರಪರಿಚಿತವಾಗಿದ್ದ ಭಾರತವು ಈಗ ಬದಲಾಗುತ್ತಿದೆ.

2021 ಫೆಬ್ರವರಿ 9ರ ಮುಂಜಾನೆ


ಮತ್ತದೇ ಮುಂಜಾನೆ. ಆದರೆ ನಾನು ಈ ಬಾರಿ ಮನೆಯಲ್ಲಿದ್ದೆ. ಬೆಳಗಿನ ಉಪಹಾರವನ್ನು ಸೇವಿಸಿ, ದಿನಪತ್ರಿಕೆಗಳನ್ನು ಓದುತ್ತಾ ಕುಳಿತಿದ್ದೆ. ಮನೆಯ ಡೋರ್‌ಬೆಲ್ ಸದ್ದು ಮಾಡಿತು. ಬಾಗಿಲು ತೆರೆದು ನೋಡಿದರೆ, ಬಾಗಿಲ ಬಳಿ ಒಂದಷ್ಟು ಜನರ ಗುಂಪು. ಒಬ್ಬಾತನ ಕೈಯಲ್ಲಿ ಸರ್ಕಾರದ ಅಧಿಕೃತ ಪತ್ರದಂತೆ ಕಾಣುವ ಪತ್ರವೊಂದಿತ್ತು. ನಾವು ಜಾರಿ ನಿರ್ದೇಶನಾಲಯದವರು (ಇ.ಡಿ) ಎಂದಾತ ಘೋಷಿಸಿದ. ಇ.ಡಿ ದಾಳಿ ನಡೆಸಲು ಸಿದ್ಧವಾಗಿ ಬಂದಿತ್ತು. ನಾನು ನ್ಯೂಸ್ ಕ್ಲಿಕ್ ಅನ್ನೋ ಡಿಜಿಟಲ್ ಸುದ್ದಿತಾಣವನ್ನು 2009ರಲ್ಲಿ ಸ್ಥಾಪಿಸಿದ್ದೆ. ಇ.ಡಿ ದಾಳಿಯ ಗುರಿ ಅದೇ ಆಗಿತ್ತು. ನ್ಯೂಸ್‌ಕ್ಲಿಕ್ ಸ್ಥಾಪನೆಯಾದ ಮೇಲೆ ಸಾಕಷ್ಟು ಕೆಲಸವನ್ನು ಮಾಡುವುದರ ಜೊತೆಗೆ ಸಾಕಷ್ಟು ಓದುಗರನ್ನು ಅದು ಗಳಿಸಿಕೊಂಡಿತ್ತು.

ಈ ದಾಳಿ ಐದು ದಿನಗಳವರೆಗೆ ನಿರಂತರವಾಗಿ ಸಾಗಿತು – ಒಟ್ಟು 113 ಗಂಟೆಗಳ ದಾಳಿ. ಇದು ಖಾಸಗಿ ನಿವಾಸದ ಮೇಲೆ ನಡೆದ ಅತ್ಯಂತ ದೀರ್ಘವಾದ ದಾಳಿಗಳಲ್ಲಿ ಒಂದಾಗಿದೆ ಎಂದು ದಾಖಲೆಗಳು ತಿಳಿಸುತ್ತವೆ. .. ..ಇ.ಡಿಯವರಿಗೆ ನನ್ನ ಮನೆಯ ಹುಡುಕಾಟ ನಡೆಸಲು ಅಷ್ಟು ಸಮಯ ಬೇಕಿರಲಿಲ್ಲ. ನನ್ನ ಮನೆ ಜಾಲಾಡಲು ಅವರಿಗೆ ಒಂದರೆಡು ಗಂಟೆಗಳು ಸಾಕಾಗಿತ್ತು. ಆದರೆ ಅವರ ಮುಂದೊಂದು ಹೈಟೆಕ್ ಸಮಸ್ಯೆ ಇತ್ತು: ಗೂಗಲ್‌ನಿಂದ ನನ್ನ ಬೃಹತ್ ಪ್ರಮಾಣದ ಡೇಟಾವನ್ನು ಸಂಪೂರ್ಣವಾಗಿ ಡೌನ್‌ಲೋಡ್ ಮಾಡಿಕೊಳ್ಳುವುದು ಹೇಗೆ? ಏಕೆಂದರೆ ಒಂದು ಹಂತದ ನಂತರ ಗೂಗಲ್ ಡೌನ್‌ಲೋಡ್ ವೇಗವನ್ನು ತಾನಾಗಿಯೇ ಕಡಿಮೆ ಮಾಡುತ್ತದೆ. ಹಾಗಾಗಿ ಡೌನ್‌ಲೋಡಿಂಗ್ ಕೆಲಸ ಅನೇಕ ಗಂಟೆಗಳವರೆಗೆ ಸಾಗುತ್ತದೆ. ನಾನು ಡೇಟಾ ನಿರ್ವಹಣೆಯಲ್ಲಿ ತೋರಿಸಿದ್ದ ಅಸಡ್ಡೆ ಇ.ಡಿಯವರಿಗೂ ತೊಡಕಾಯಿತು ಮತ್ತು ನನಗಂತೂ ಮಾರಕವಾಯಿತು. ಅಲ್ಲ ನೀವೇ ಹೇಳಿ –ಐದು ದಿನಗಳವರೆಗೆ ಒಂದು ಇಲಾಖೆಗೆ–ಅದರಲ್ಲೂ ಇ.ಡಿಗೆ–ಆತಿಥ್ಯ ನೀಡುವುದು ಎಂದರೆ? ನನ್ನ ಶಕ್ತಿಯನ್ನು ಮೀರಿದ ಕೆಲಸ. ನಾನಂತು ಸುಸ್ತಾದೆ.

ನಾನು ಜೆ.ಎನ್.ಯು ನ ವಿದ್ಯಾರ್ಥಿ ಸಂಘದ ಪ್ರತಿಭಟನೆಯ ಭಾಗವಾಗಿ "ಅಂದಿನ ತುರ್ತು ಪರಿಸ್ಥಿತಿಗೆ" ಮುಖಾಮುಖಿಯಾಗಿದ್ದೆನು. ಡಿ.ಪಿ.ತ್ರಿಪಾಠಿ, ಅಶೋಕಲತಾ (ನಾವೆಲ್ಲ ಕೇವಲ ಅಶೋಕ ಎನ್ನುತ್ತಿದ್ದೆವು), ಸೀತಾರಾಮ (ಯೆಚೂರಿ) ಮತ್ತಿತರರು ಈ ಪ್ರತಿಭಟನೆಯ ಮುಂದಾಳುಗಳಾಗಿದ್ದರು. ನಾನು ಈಗ ಮುಖಾಮುಖಿಯಾಗಿರುವ ಇಂದಿನ ತುರ್ತು ಪರಿಸ್ಥಿತಿ, ಅಂದಿನ ತುರ್ತು ಪರಿಸ್ಥಿತಿಗಿಂತ ಭಿನ್ನವಾದ ಪರಿಸರ ಹಾಗೂ ಭಿನ್ನವಾದ ಕಾರಣಗಳಿಂದಾಗಿದೆ. ನಾನು ಆರಂಭಸಿದ್ದ ನ್ಯೂಸ್‌ಕ್ಲಿಕ್ ಅನ್ನೋ ಮುಷ್ಟಿ ಗಾತ್ರದ ಸುದ್ದಿ ಸಂಸ್ಥೆಯನ್ನು ಅದೇಕೋ ಕಾಣೆ ಸಮಸ್ಯೆ ಅಂತ ಪ್ರಭುತ್ವ ಗುರುತಿಸಿ ಬಿಟ್ಟಿದೆ. ನ್ಯೂಸ್‌ಕ್ಲಿಕ್ ಅನೇಕ ವಿದ್ಯಮಾನಗಳನ್ನು ವರದಿ ಮಾಡಿದೆ. ಸರ್ಕಾರದ ಕೆಂಗಣ್ಣಿಗೆ ಬೀಳುವ ತುಸು ಮೊದಲು ರೈತರ ಚಳುವಳಿಯನ್ನು ವಿವರವಾಗಿ ವರದಿಸಿತ್ತು. ರೈತ ಚಳುವಳಿಯನ್ನು ಸೂಕ್ಷ್ಮವಾಗಿ ಮತ್ತು ವಿವರಬದ್ಧವಾಗಿ ನ್ಯೂಸ್‌ಕ್ಲಿಕ್ ವರದಿ ಮಾಡಿದಾಗ, ಅದರ ಓದುಗರು ಭಾರತ ದೇಶಕ್ಕೆ ಮಾತ್ರ ಸೀಮಿತಗೊಳ್ಳದೇ, ಹೊರ ದೇಶಗಳಿಂದಲೂ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿತ್ತು.

ಆದರೆ ನ್ಯೂಸ್‌ಕ್ಲಿನಿಕ್‌ನಲ್ಲಿ ಈ ವರದಿಗಳು ಬಂದ ಮೇಲೂ ಅಂತಹ ವಿಶೇಷವೇನು ನಡೆದಿರಲಿಲ್ಲ. ನಮ್ಮಂತಹ ಅನೇಕ ಡಿಜಿಟಲ್ ಸಂಸ್ಥೆಗಳು ಮತ್ತು ಕೆಲವು ಮುಖ್ಯವಾಹಿನಿಗೆ ಸೇರಿದ ಚಾನೆಲ್‌ಗಳು ಜನರ ಮೇಲೆ ನಡೆಯುತ್ತಿದ್ದ ಹಲ್ಲೆಗಳನ್ನು, ಜನರ ಜೀವನದ ಅವಕಾಶಗಳನ್ನು ಕಸಿಯುವ ಯತ್ನಗಳನ್ನು ಮತ್ತು ಇವುಗಳ ಕಾರಣದಿಂದಾಗಿ ನಡೆಯುತ್ತಿರುವ ಸಾರ್ವಜನಿಕ ಪ್ರತಿಭಟನೆಗಳನ್ನು ನಮ್ಮಂತೆಯೇ ವರದಿ ಮಾಡುತ್ತಿದ್ದವು. ನಮ್ಮ ರೀತಿಯೇ ಇನ್ನೂ ಕೆಲವು ಸುದ್ದಿ ಸಂಸ್ಥೆಗಳು ಸರ್ಕಾರದ ನಿಗಾದಲ್ಲಿದ್ದವು.

ನಾನಾಗಲಿ ಇಲ್ಲವೇ ನನ್ನ ಸಂಸ್ಥೆಯಾದ ನ್ಯೂಸ್‌ಕ್ಲಿಕ್ ಆಗಲಿ ಎದುರಿಸುತ್ತಿರುವ ಪ್ರಕರಣಗಳ ಕುರಿತಾಗಲಿ ಇಲ್ಲವೇ ವಿವಿಧ ಸುದ್ದಿ ಸಂಸ್ಥೆಗಳು ಈ ಕುರಿತು ನಡೆಸಿದ ತೀವ್ರವಾದ ಪ್ರಚಾರ ಹಲ್ಲೆಯ ಕುರಿತಾಗಲಿ ಹೆಚ್ಚಿನ ವಿವರಗಳನ್ನು



ನಾನಿಲ್ಲಿ ಚರ್ಚಿಸುವುದಿಲ್ಲ. ಪ್ರಕರಣಗಳು ಕೋರ್ಟಿನಲ್ಲಿವೆ ಮತ್ತು ಅವುಗಳನ್ನು ಅಲ್ಲಿಯೇ ನಿಭಾಯಿಸಿಕೊಳ್ಳುತ್ತೇನೆ. ನನಗೆ ಸುದ್ದಿಯಾಗುವ ಯಾವ ಆಸೆಯೂ ಇಲ್ಲ. ಅದೇ ರೀತಿಯಲ್ಲಿ ನ್ಯೂಸ್‌ಕ್ಲಿಕ್‌ಗೂ ಸಹಾ ಅಷ್ಟೆ. ನ್ಯೂಸ್‌ಕ್ಲಿಕ್‌ನ ಕೆಲಸ ಸುದ್ದಿ ನೀಡುವುದು ಮಾತ್ರ; ಸುದ್ದಿಯಾಗುವುದು ಅಲ್ಲ. ನ್ಯೂಸ್‌ಕ್ಲಿಕ್ ಸ್ಥಾಪನೆಯಾದಗಿನಿಂದ ಮಾಡುತ್ತಿರುವ ಕೆಲಸವನ್ನೇ ಮುಂದೆಯೂ ಸಹಾ ಮಾಡಿಕೊಂಡು ಹೋಗಲಿದೆ. ಅದರ ಕೆಲಸ ಇಷ್ಟೆ; ತಳಮಟ್ಟದಲ್ಲಿ ನಡೆಯುವ ಜನರ ಆಂದೋಲನಗಳನ್ನು ಅರಿಯುವುದು ಮತ್ತು ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ಅವರ ಧ್ವನಿಗಳಿಗೊಂದು ವೇದಿಕೆಯಾಗುವುದು.

2. ಮಾಧ್ಯಮಗಳು; ಅಂದು ಮತ್ತು ಇಂದು

ಆಳುವ ಸರ್ಕಾರದ ಶಕ್ತಿಗೆ ಬೆದರಿ ನಿಷ್ಕ್ರಿಯವಾದ ಮಾಧ್ಯಮದ ನೆನಪು (ಬಲವಂತದ ಪುರುಷರ ಸಂತಾನಹರಣ ಶಸ್ತ್ರಚಿಕಿತ್ಸೆ–ವಾಸೆಕ್ಟಮಿ ನೆನಪನ್ನು ಹೊರತುಪಡಿಸಿ) ತರ್ತುಪರಿಸ್ಥಿಯ ಸಂದರ್ಭದ ನೆನಪುಗಳಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ನೆನಪಾಗಿದೆ. ಮಾಧ್ಯಮದವರ ಮೇಲೆ ಸವಾರಿ ಮಾಡುವ ಅಧಿಕಾರವನ್ನು ಆಡಳಿತ ಯಂತ್ರ ಪಡೆದುಕೊಂಡಿತ್ತು. ಯಾವುದೇ ಸುದ್ದಿಯನ್ನು ಪ್ರಕಟಿಸುವ ಮುನ್ನ ಬರೆದಿರುವುದನ್ನು ಸೆನ್ಸಾರ್ ಅಧಿಕಾರಗಳ ಅನುಮೋದನೆಗಾಗಿ ಸಲ್ಲಿಸಬೇಕಾಗಿತ್ತು. "ನಿಮಗೆ ಬಗ್ಗಲು ಹೇಳಿದರೆ, ತೆವಳಿದವರು ನೀವು" ಎಂದು ಅಡ್ವಾಣಿ ಮಾಧ್ಯಮದವರನ್ನು ಲೇವಡಿ ಮಾಡಿದ್ದರು. ಇಂತಹ ಪರಿಸ್ಥಿತಿಯಲ್ಲೂ ಶರಣಾಗಲು ಒಪ್ಪದೆ, ಸರ್ಕಾರದ ಪ್ರಚಾರದ ತುತ್ತೂರಿಯಾಗಲು ನಿರಾಕರಿಸಿದ ಧೈರ್ಯವಂತರೂ ಅಲ್ಲಲ್ಲಿ ಇದ್ದರು ಮತ್ತು ಅವರನ್ನು ನಾವಿಂದು ಗೌರವದಿಂದ ನೆನೆಯಬೇಕಿದೆ. ದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ತನ್ನ ಮೇಲೆ ಹೇರಲಾದ ಮಿತಿಯೊಳಗೇ ಸಮರ್ಥವಾಗಿ ಕಾರ್ಯನಿರ್ವಹಿಸಿತು. ಅದು ಪ್ರಕಟಿಸಿದ 'ಖಾಲಿ ಸಂಪಾದಕೀಯ ಪುಟ' ಪ್ರಜಾಪ್ರಭುತ್ವದ ನಾಲ್ಕನೇ ಕಂಬವಾದ ಮಾಧ್ಯಮ ದಾಖಲಿಸಬಹುದಾದ ಅತ್ಯಂತ ಪ್ರಬಲವಾದ ಪ್ರತಿಭಟನೆಯ ಸಂಕೇತವಾಗಿತ್ತು. ರೋಮೇಶ್ ಥಾಪರ್ ಅವರು ಪ್ರಕಟಿಸುತ್ತಿದ್ದ ಸೆಮಿನಾರ್ ನಿಯತಕಾಲಿಕದ ರೀತಿಯ ಪುಟ್ಟ ಪುಟ್ಟ ಸಂಸ್ಥೆಗಳು ಸೆನ್ಸಾರ್ ಹೆಸರಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಯನ್ನು ವಿರೋಧಿಸಿದ್ದವು. ಇಷ್ಟಾದರೂ, ಇಂತಹ ಮಾಧ್ಯಮಗಳ ಪ್ರತಿರೋಧಕ್ಕೆ ಪುಟ್ಟದೊಂದು ಮಿತಿಯಿತ್ತೆನ್ನುವುದು ಒಪ್ಪಬೇಕಾದ ಮಾತೇ ಆಗಿದೆ.

ಅಂದಿಗೆ ಹೋಲಿಸಿದರೆ, ಇಂದಿನ ಮಾಧ್ಯಮಗಳ ಪರಿಸ್ಥಿತಿ ಹೇಗಿದೆ? ಅಂದು ಮಾಧ್ಯಮ ಎಂದರೆ ಮುದ್ರಣ ಮಾಧ್ಯಮ (ಪ್ರೆಸ್) ಮಾತ್ರವೇ ಆಗಿತ್ತು. ಇಂದು ಮಾಧ್ಯಮಗಳು ಅನೇಕ ರೂಪದಲ್ಲಿವೆ ಮತ್ತು ಅಂದಿನಂತೆ ಇವುಗಳನ್ನು ಇಂದು ನಿಯಂತ್ರಿಸುವುದು ಕಷ್ಟಸಾಧ್ಯವಾದ ಮಾತಾಗಿದೆ. ಇಂದಿನ ಮಾಧ್ಯಮ ಬಹುರೂಪಿಯಾದುದು; ಹಾಗೇ ಇವುಗಳ ಮುಂದಿರುವ ಅಜೆಂಡಾಗಳು ಸಹಾ ಅಷ್ಟೆ ವಿಭಿನ್ನವಾದವುಗಳು. ಅಂದು ಮುದ್ರಣ ಮಾಧ್ಯಮ ಸುದ್ದಿಯ ವ್ಯಾಖ್ಯಾನವನ್ನು ನಿರ್ಧರಿಸುತ್ತಿತ್ತು. ಇವತ್ತಿನ ಮುಖಪುಟದ ಹೆಡ್‌ಲೈನ್ ನಿನ್ನೆಯ ಸುದ್ದಿಯಲ್ಲಿ ಯಾವುದು ಮುಖ್ಯ ಸುದ್ದಿಯೆಂದು ತೋರಿಸುತ್ತಿತ್ತು. ಆದರೆ ಇಂದು 24/7 ಗಂಟೆ ಕೆಲಸ ಮಾಡುವ ನ್ಯೂಸ್ ಟಿವಿ ಚಾನಲ್‌ಗಳಿವೆ. ಇವುಗಳ ಕೆಲಸದ ರೀತಿಯಿಂದಾಗಿ, ಸುದ್ದಿಯ ಲಕ್ಷಣಗಳೂ ಬದಲಾಗಿವೆ. ಇಲ್ಲಿ ಪ್ರೈಮ್ ಟೈಮ್‌ನಲ್ಲಿ ನಡೆಯುವ ಚರ್ಚೆಗಳನ್ನು ಗಮನಿಸಿದರೆ ಒಟ್ಟಾರೆ ಸುದ್ದಿಯ ಲಕ್ಷಣಗಳನ್ನು ಅರಿಯಬಹುದಾಗಿದೆ.

ಸಾಮಾಜಿಕ ಜಾಲತಾಣಗಳು ಸುದ್ದಿಯ ಲಕ್ಷಣವನ್ನೇ ಪೂರ್ಣವಾಗಿ ಬದಲಿಸಿವೆ. ಜೊತೆಗೆ ಸುದ್ದಿಯು ಬೀರುವ ಪ್ರಭಾವ ಮತ್ತು ಅದರ ವ್ಯಾಪಕತೆಯನ್ನು ಸಹಾ ಬದಲಿಸಿವೆ. ಇಂದು ಯಾವುದು ಸುದ್ದಿಯಾಗಬೇಕೆನ್ನುವುದನ್ನು ಈ ಜಾಲತಾಣಗಳು ನಿರ್ಧರಿಸುತ್ತವೆ. ಜೊತೆಗೆ ಯಾವ ವಿಚಾರದ ಕುರಿತು ಚರ್ಚೆಯಾಗಬೇಕು ಮತ್ತು ಯಾವುದನ್ನು ಓದುಗರು ಗಮನಿಸಬೇಕು ಇತ್ಯಾದಿಗಳನ್ನು ಇವೇ ನಿರ್ದೇಶಿಸುತ್ತವೆ. ಇಂತಹ ವ್ಯವಸ್ಥೆಯನ್ನು ನಿಯಂತ್ರಿಸುವುದು ಸುಲಭದ ಕೆಲಸವಲ್ಲ. ಈ ಕಾರಣದಿಂದಲೇ ಬಿಜೆಪಿ ಮತ್ತು ಅಮಿತ್‌ಶಾ ಎಷ್ಟೇ ಕಷ್ಟಪಟ್ಟರೂ ನಮ್ಮ ಕಿವಿಗೆ ತಲುಪಬೇಕಾದ ವಿಚಾರಗಳು ಬಹುತೇಕ ತಲುಪಿಬಿಡುತ್ತವೆ. ಸರ್ಕಾರ ಮತ್ತು ಅದರ ಅಂಗ ಸಂಸ್ಥೆಗಳು ಎಷ್ಟು ಸಾಧ್ಯವೋ ಅಷ್ಟು ವ್ಯಕ್ತಿಗಳನ್ನು ಜಾಲತಾಣಗಳ ಮೂಲಕ ನಿಯಂತ್ರಿಸುವ ಕೆಲಸ ಮಾಡುತ್ತಿವೆ. ಹೇಗಾದರೂ ಮಾಡಿ ತನ್ನ ಇಚ್ಛೆಗೆ ➚

ಭಾರತದ ಜಿಡಿಪಿ ಗಾತ್ರ...... ಪುಟ 13 ರಿಂದ

ಹೇಳುವುದಾದರೆ, ಜಿಡಿಪಿ ಗಾತ್ರದ ಲೆಕ್ಕದಲ್ಲಿ ಭಾರತವು ಮೂರನೇ ಸ್ಥಾನವನ್ನು 2009ರಲ್ಲೇ ಪಡೆದುಕೊಂಡಿತ್ತು ಮತ್ತು ಅಂದಿನಿಂದಲೂ ಅದೇ ಸ್ಥಾನದಲ್ಲಿ ಮುಂದುವರೆದಿದೆ, ಮಾತ್ರವಲ್ಲ, ಮುಂದಿನ 50 ವರ್ಷಗಳಲ್ಲೂ ಭಾರತವು ಮೂರನೇ ಸ್ಥಾನದಿಂದ ಮೇಲೆ ಏರಬಹುದು ಎಂದು ಆಶಿಸಲು ಕಾರಣಗಳಿಲ್ಲ. ಸರ್ಕಾರ ಮತ್ತು ಅದರ ವಕ್ತಾರರು ಮಾರುಕಟ್ಟೆ ವಿನಿಮಯ ದರಗಳ ಆಧಾರದ ಮೇಲೆ ತಲುಪಿದ ಸ್ಥಾನ-ಮಾನವನ್ನು ಸಂಭ್ರಮಿಸುತ್ತಿರುವ ಸಮಯದಲ್ಲಿ, ಪಿಪಿಪಿ ವಿನಿಮಯ ದರ ಆಧಾರದ ಮೇಲೆ ಮೂರನೇ ಸ್ಥಾನವನ್ನು ಭಾರತವು ಅದಾಗಲೇ ತಲುಪಿದ್ದ ಬಗ್ಗೆ ಮೌನ ವಹಿಸಿರುವುದು ತಮಾಷೆಯಾಗಿ ಕಾಣುತ್ತದೆ.

ಆರ್ಥಿಕ ಶ್ರೇಯಾಂಕಗಳ ಮರುಚಿಂತನೆ

ಪಿಪಿಪಿ ವಿಧಾನದಲ್ಲೂ ಸಮಸ್ಯೆಗಳಿವೆ. ಪಿಪಿಪಿ ವಿಧಾನವು ಜಿಡಿಪಿ ಗಾತ್ರಗಳ ಹೋಲಿಕೆಯನ್ನು ತೆಳುವಾಗಿ ನೀಡುತ್ತದೆಯಾದರೂ, ಅದನ್ನು ಬಳಸುವಾಗ ಅದು ಹೊಮ್ಮಿಸುವ ಸೂಚನೆಗಳಿಂದ ದಾರಿತಪ್ಪದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಪಿಪಿಪಿ ವಿನಿಮಯ ದರಗಳನ್ನು ಬಳಸುವ ಸಂದರ್ಭದಲ್ಲಿ, ಅಭಿವೃದ್ಧಿ ಹೊಂದಿದ ಜಗತ್ತಿನ ಜನರ ಕೊಳ್ಳುವ ಶಕ್ತಿಯೊಂದಿಗೆ "ಹೊಂದಿಕೆ" ಮಾಡಲು ಭಾರತದಂತಹ ದೇಶಗಳ ಜಿಡಿಪಿ ಗಾತ್ರವನ್ನು ಅವಶ್ಯವಾಗಿ "ಉಬ್ಬಿಸಬೇಕಾಗುತ್ತದೆ". ಈ "ಉಬ್ಬಿಕೆ"ಯು ಜಿಡಿಪಿಯನ್ನು ಉನ್ನತ ಸ್ಥಾನದಲ್ಲಿಡುತ್ತದೆ (ಅಂದರೆ, ಐದನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಸ್ಥಳಾಂತರ). ಆದರೆ, ಇದು ದೇಶ ದೇಶಗಳ ನಡುವಿನ ವರಮಾನಗಳ ನಿಜ ಅಸಮಾನತೆಯನ್ನು "ಮುಚ್ಚಿಡುತ್ತದೆ". ಉದಾಹರಣೆಗೆ, ಇದು ಕೆಳ ಮಟ್ಟದ ಕೂಲಿ, ವ್ಯಾಪಕ ಅಸಂಘಟಿತ/ಅನೌಪಚಾರಿಕ ಕೂಲಿ ಮತ್ತು ಸಂಬಳ-ರಹಿತ ಮಹಿಳಾ ಕೆಲಸಗಾರರಂತಹ ಗಮನಾರ್ಹ ಸಾಮಾಜಿಕ-ಆರ್ಥಿಕ ಸವಾಲುಗಳನ್ನು ಮರೆಮಾಚುತ್ತದೆ. ತಲಾ ಜಿಡಿಪಿಯನ್ನೇ ತೆಗೆದುಕೊಳ್ಳಿ. 2024ರಲ್ಲಿ $2,711ರಷ್ಟು ತಲಾ ಜಿಡಿಪಿಯನ್ನು ಹೊಂದಿದ ಭಾರತವು, ಮಾರುಕಟ್ಟೆ ವಿನಿಮಯ ದರ ಲೆಕ್ಕದಲ್ಲಿ ಜಾಗತಿಕವಾಗಿ 144ನೇ ಸ್ಥಾನದಲ್ಲಿದ್ದರೆ ಮತ್ತು ಪಿಪಿಪಿ ಪರಿಭಾಷೆಯಲ್ಲಿ ಜಾಗತಿಕವಾಗಿ 127ನೇ ಸ್ಥಾನದಲ್ಲಿರುತ್ತದೆ. ವಿಯೆಟ್ನಾಂ, ಶ್ರೀಲಂಕಾ ಮತ್ತು ಭೂತಾನ್‌ನಂತಹ ದೇಶಗಳೊಂದಿಗೆ ಹೋಲಿಸಿದಾಗ, ತನ್ನ ಬೃಹತ್ ಗಾತ್ರದ ಜಿಡಿಪಿಯ ಹೊರತಾಗಿಯೂ ಭಾರತವು ಪ್ರಗತಿಯ ದೃಷ್ಟಿಯಲ್ಲಿ ಹಿಂದುಳಿದಿದೆ. ಆದ್ದರಿಂದ, ಬೃಹತ್ ಗಾತ್ರದ ಜಿಡಿಪಿಗೂ ಮತ್ತು ನಾಗರಿಕರ ಜೀವನ ಪರಿಸ್ಥಿತಿಗಳ ಸುಧಾರಣೆಗೂ ಅಥವಾ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೂ ತಾಳಮೇಳವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು "ಬೃಹತ್ ಅರ್ಥವ್ಯವಸ್ಥೆಯ ಭ್ರಮೆ"ಯನ್ನು ಬಯಲು ಮಾಡುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಿಡಿಪಿಯ ಅಳತೆಯು ದೇಶದ ಆರ್ಥಿಕ ಸಾಮರ್ಥ್ಯದ ಒಂದು ಚಿಟಿಕೆ ಚಿತ್ರವನ್ನು ಒದಗಿಸುತ್ತದೆಯಾದರೂ, ಸಾಮಾಜಿಕ ಪ್ರಗತಿಯ ಪ್ರಮುಖ ಆಯಾಮಗಳನ್ನು ಸೆರೆಹಿಡಿಯುವಲ್ಲಿ ಅದು ವಿಫಲವಾಗಿದೆ. ಒಂದು ಅರ್ಥವ್ಯವಸ್ಥೆಯ ಜಿಡಿಪಿ ಗಾತ್ರವು ಅದರ ನಾಗರಿಕರು ಅನುಭವಿಸುವ ಜೀವನದ ಗುಣಮಟ್ಟವನ್ನೇನೂ ಬಿಂಬಿಸುವುದಿಲ್ಲ. ಜಿಡಿಪಿಯ ಗಾತ್ರವು ಬೃಹತ್ತಾಗಿದ್ದರೂ ನಿಕೃಷ್ಟ ವರಮಾನದ ಬಡತನ, ಸಮಾನ ಶಿಕ್ಷಣ, ವ್ಯಾಪಕ ಆರೋಗ್ಯ ಸೇವೆಯ ಲಭ್ಯತೆ ಅಥವಾ ವರಮಾನ ಅಸಮತೆಗಳ ಇಳಿಕೆಯ ಸಮಸ್ಯೆಗಳು ಬಗೆಹರಿಯುವುದಿಲ್ಲ.

ಇದಲ್ಲದೆ, ಜಿಡಿಪಿ ಮಾಪನಗಳು ಅನೌಪಚಾರಿಕ ಅರ್ಥವ್ಯವಸ್ಥೆಗಳು ಮತ್ತು ಸಾಮುದಾಯಿಕ ಅಥವಾ ಮನೆಗೆಲಸ-ಆರೈಕೆಯಂತಹ ಮಾರುಕಟ್ಟೆಯೇತರ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸಾಮಾನ್ಯವಾಗಿ ವಿಫಲವಾಗುತ್ತವೆ. ಈ ಅಂಶಗಳ ಬಹಿಷ್ಕರಣವು ಜಿಡಿಪಿಯ ಅಂಕಿ-ಅಂಶಗಳು ದೇಶದ ಆರ್ಥಿಕ ವಾಸ್ತವಗಳನ್ನು ಅಪೂರ್ಣವಾಗಿ ಚಿತ್ರಿಸುತ್ತವೆ ಎಂಬುದನ್ನು ಸೂಚಿಸುತ್ತದೆ. ಜಿಡಿಪಿಯ ಈ ಮಿತಿಗಳು, ಜಾಗತಿಕ ಆರ್ಥಿಕ ಶ್ರೇಯಾಂಕದಲ್ಲಿ ಭಾರತವು ಉನ್ನತ ಸ್ಥಾನಕ್ಕೆ ಏರುತ್ತಿದ್ದಂತೆಯೇ ಜಿಡಿಪಿಯ ಬೆಳವಣಿಗೆಯು ಅದಕ್ಕೆ ಅನುರೂಪವಾಗಿ ಮಾನವ ಅಭಿವೃದ್ಧಿ ಸೂಚಕಗಳ ಪರಿಸ್ಥಿತಿ ಉತ್ತಮಗೊಳ್ಳುವಂತಾಗಬೇಕು ಎಂಬುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಗಮನ ಹರಿಸುವಂತೆ ಸರ್ಕಾರಗಳನ್ನು ಪ್ರೇರೇಪಿಸಬೇಕು. ಮತ್ತು, ಅಭಿವೃದ್ಧಿಯು ಒಳಗೊಳ್ಳುವಿಕೆಯ ಮತ್ತು ಸಮಗ್ರ ವಿಕಾಸದ ಸೂಚಕಗಳನ್ನು ಹೊಂದುವಂತೆ ಪ್ರತಿಪಾದಿಸುವ ಚರ್ಚೆಯನ್ನು ಭಾರತವು ಮುಂಬರುವ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಮುನ್ನಡೆಸಬೇಕು.

ತಕ್ಕಂತೆ ಎಲ್ಲರನ್ನು ನಿಯಂತ್ರಿಸಬೇಕೆನ್ನುವ ಆಕಾಂಕ್ಷೆ ಹೊಂದಿರುವ ಸರ್ಕಾರ ಅನೇಕ ಕ್ರಮಗಳನ್ನು ಜಾರಿಗೊಳಿಸಿದೆ. ಇವು ಅಂದಿನ ತುರ್ತು ಪರಿಸ್ಥಿತಿಯಲ್ಲಿ ಜಾರಿಗೊಂಡಿದ್ದ ಕ್ರಮಗಳಿಗಿಂತ ತುಸು ಭಿನ್ನವಾದ ಕ್ರಮಗಳಾಗಿವೆ.

ಇಂದು ಲಭ್ಯವಿರುವ ತಂತ್ರಜ್ಞಾನಗಳು ಅಂದಿಗಿಂತ ಭಿನ್ನವಾಗಿ ಮಾಧ್ಯಮಗಳನ್ನು ನಿಯಂತ್ರಿಸುವ ಸಾಧನಗಳನ್ನು ಸರ್ಕಾರಕ್ಕೆ ನೀಡಿವೆ. ಹಾಗಾಗಿ ನಿಯಂತ್ರಣದ ವಿಧಾನಗಳು ಅಂದಿಗಿಂತಲೂ ಭಿನ್ನವಾಗಿವೆ ಎಂದು ನಿಮಗೆ ಸರಳವಾಗಿ ಬಿಡಿಸಿ ಹೇಳಬಹುದಾಗಿದೆ. ಅಂದು ಜಾರಿಯಲ್ಲಿದ್ದ ಸೆನ್ಸಾರ್‌ಶಿಪ್ ಸಾಧನ ಇಂದು ನೇರವಾಗಿ ಬಳಕೆಯಾಗುತ್ತಿಲ್ಲ. ಇಂದು ಜಾರಿಯಲ್ಲಿರುವ ಅಧಿಕೃತ ಮತ್ತು ಅನಧಿಕೃತ ಸೆನ್ಸಾರ್ ವ್ಯವಸ್ಥೆಯ ಕಾರ್ಯವೈಖರಿ ಹೇಗಿದೆ? ಕೆಲವರನ್ನು ತೀವ್ರವಾದ ಸಂಕಷ್ಟಕ್ಕೆ ಈಡು ಮಾಡಿ, ತನ್ಮೂಲಕ ಇತರರಲ್ಲಿ ಭಯ ಮೂಡಿಸುವುದು ಈ ವ್ಯವಸ್ಥೆಗಳ ಕಾರ್ಯವಿಧಾನವಾಗಿದೆ. ಯಾವಾಗ ಜನ ಬೆದರುತ್ತಾರೋ, ಆಗ ಸ್ವಯಂ ಸೆನ್ಸಾರ್‌ಶಿಪ್ ಜಾರಿಗೆ ಬರುತ್ತದೆ. ದೇಶದ ವಿವಿಧ ಭಾಗದಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸುವ ಮೂಲಕ ನಿರಂತರ ಕಿರುಕುಳ ನೀಡಲಾಗುತ್ತದೆ. ಕಾನೂನಿನ ಸಮರವನ್ನು ಸಾರಲಾಗುತ್ತದೆ. ಕಲಾವಿದ ಎಂ.ಎಫ್. ಹುಸೈನ್ ಅವರ ಪ್ರಕರಣದ ನೆನಪು ನಿಮಗಿದೆಯೇ? … ..ಇತ್ತೀಚಿನ ಕೆಲವು ಉದಾಹರಣೆಗಳು ಹುಸೈನ್ ಅವರ ಪ್ರಕರಣಕ್ಕಿಂತಲೂ ಆತಂಕಕಾರಿ ಉದಾಹರಣೆಗಳಾಗಿವೆ. ಹಿಂದುತ್ವ ವಿರೋಧಿ ಇಲ್ಲವೇ ಸರ್ಕಾರದ ವಿರೋಧಿಯೆಂದು ಪರಿಗಣಿತವಾದ ವರದಿಗಾರರನ್ನು ಟ್ರೋಲ್ ಮಾಡಲಾಗುತ್ತದೆ. ಅಂತಹವರ ಮೇಲೆ ದೈಹಿಕ ಹಲ್ಲೆ ನಡೆಯುತ್ತದೆ. ಇನ್‌ಫರ್‌ಮೇಶನ್ ಟೆಕ್ನಾಲಜಿ ಆಕ್ಟ್ ಅಂಡ್ ಐಟಿ ರೂಲ್ಸ್ 2021ರಡಿಯಲ್ಲಿ ಪ್ರಕರಣಗಳು ದಾಖಲಾಗುತ್ತವೆ. ಜೊತೆಗೆ ಉಗ್ರವಾದವನ್ನು ತಡೆಯಲು ಇರುವ, ಇಲ್ಲವೇ ಆಂತರಿಕ ಭದ್ರತೆಯನ್ನು ಕಾಪಾಡಲು ಇರುವ ಭೀಕರ ಕಾನೂನುಗಳ ಬಳಕೆ ಮಾಡಿ ಜೈಲಿಗೆ ತಳ್ಳಲಾಗುತ್ತದೆ. ಸ್ವತಂತ್ರ ಮಾಧ್ಯಮ ಸಂಸ್ಥೆಗಳು ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಗಳಂತಹ ಇಲಾಖೆಗಳ ದಾಳಿಗಳಿಗೆ ಈಡಾಗುತ್ತವೆ. ಟ್ವೀಟ್‌ಗಳನ್ನು ಆಧರಿಸಿ ಪತ್ರಕರ್ತರ ಮೇಲೆ ದೂರು ದಾಖಲಾದರೆ, ಫೇಸ್‌ಬುಕ್‌ಗಳಲ್ಲಿ ಮಾಡಿದ ಶೇರ್‌ಗಳನ್ನು ಆಧರಿಸಿ ಸಾಮಾಜಿಕ ಜಾಲತಾಣಗಳ ಬಳಕೆದಾರರ ಮೇಲೆ ದೂರು ದಾಖಲಾಗುತ್ತವೆ. ಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಕ್ರಿಕೆಟ್ ಮ್ಯಾಚ್‌ಗಳನ್ನು ನೋಡುವಾಗ ಪಾಕಿಸ್ತಾನದ ತಂಡಕ್ಕೆ ಬೆಂಬಲ ನೀಡಿ ಚಪ್ಪಾಳೆ ಹೊಡೆದರೆಂಬ ಕಾರಣಕ್ಕೆ ವಿದ್ಯಾರ್ಥಿಗಳ ಮೇಲೆ ಕೇಸುಗಳು ದಾಖಲಾಗುತ್ತವೆ. ಜಾಹೀರಾತುಗಳಲ್ಲಿ ಮುಸ್ಲಿಂ ಪರಂಪರೆಯನ್ನು ಸೂಚಿಸುವ ಪದಗಳು ಇಲ್ಲವೇ ಸಂಕೇತಗಳನ್ನು ಬಳಸಿದರೆಂದು ಸಂಶಯಿಸಿ, ಅವರ ಉತ್ಪನ್ನಗಳನ್ನು ಬಹಿಷ್ಕರಿಸುವ ಬೆದರಿಕೆಯನ್ನು ಒಡ್ಡಲಾಗುತ್ತದೆ. ಇದೇ ತಂತ್ರವನ್ನು ಬಳಸಿ ಸಾಮರಸ್ಯ ಸೂಚಿಸುವ ಜಾಹೀರಾತುಗಳನ್ನು ಹಿಂಪಡೆಯುವಂತೆ ಮಾಡಲಾಗುತ್ತದೆ. ಮಾಧ್ಯಮಗಳ ನಿಯಂತ್ರಣಕ್ಕೆ ಬಳಕೆಯಾಗುತ್ತಿರುವ ವಿಧಾನ ಮತ್ತು ತಂತ್ರಗಳ ಪಟ್ಟಿ ದೀರ್ಘವಾಗಿದೆ; ಇದು ದಿನೇ ದಿನೇ ಮತ್ತಷ್ಟು ಉದ್ದವಾಗುತ್ತಿದೆ.

ಅಂದಿನ ತುರ್ತು ಪರಿಸ್ಥಿತಿಯನ್ನೇ ಗಮನಿಸಿದರೂ, ಇಂದಿನ ತುರ್ತು ಪರಿಸ್ಥಿತಿಯೆಂದು ಘೋಷಿತವಾಗದ ತುರ್ತು ಪರಿಸ್ಥಿತಿಯನ್ನೇ ಪರಿಗಣಿಸಿದರೂ, ಮಾಧ್ಯಮಗಳನ್ನು ಉಸಿರುಗಟ್ಟಿಸುವ ಯತ್ನ ನಡೆಯುತ್ತಲೇ ಬಂದಿರುವುದು ಕಾಣುತ್ತದೆ. ಹಾಗಾಗಿ, ಪ್ರತಿ ಹಂತದಲ್ಲೂ ದಬ್ಬಾಳಿಕೆಯ ಯತ್ನಗಳನ್ನು ವಿವರವಾಗಿ ಗಮನಿಸಿದಷ್ಟೇ ಮುಖ್ಯವಾಗಿ ದಾಖಲಾದ ಪ್ರತಿರೋಧಗಳನ್ನೂ ಗಮನಿಸುವುದು ಮುಖ್ಯವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಇಂತಹ ಧೈರ್ಯವನ್ನು ಅಂದು ಕಂಡಿದ್ದೇವೆ ಮತ್ತು ಇಂದೂ ಕಾಣುತ್ತಿದ್ದೇವೆ. ಉದಾಹರಣೆಗಾಗಿ ಮಾಧ್ಯಮಗಳನ್ನೇ ತೆಗೆದುಕೊಳ್ಳೋಣ-ಕಠಿಣ ವಿಮರ್ಶಾ ದನಿಗಳಾದ ಸುದ್ದಿ ವೇದಿಕೆಗಳು ಈಗಲೂ ಸಾಕಷ್ಟು ಸಂಖ್ಯೆಯಲ್ಲಿವೆ. ಅನೇಕ ವೇಳೆ ಮುಖ್ಯವಾಹಿನಿಗಳ ಸುದ್ದಿಯಲ್ಲೂ ಸಹಾ ಟೀಕೆಗಳು ನಮಗೆ ಲಭ್ಯವಾಗುತ್ತವೆ. ಕೋವಿಡ್ 19ರ ಸಂದರ್ಭದಲ್ಲಿ ದಾಖಲಾಗದೇ ಉಳಿದ ಸಾವುಗಳ ಪ್ರಮಾಣವನ್ನು ವಿವರವಾಗಿ ಪ್ರಕಟಿಸಿದ ಮುದ್ರಣ ಮಾಧ್ಯಮಗಳು ಗುಜರಾತ್ ಮತ್ತು ಉತ್ತರಪ್ರದೇಶದಲ್ಲೂ ಇದ್ದ ಉದಾಹರಣೆಗಳು ನಮಗೆ ದೊರೆತಿವೆ. ಇಂತಹ ಸುದ್ದಿಗಳು ಪ್ರಕಟವಾದ ತರುವಾಯ ಆದಾಯ ತೆರಿಗೆ ಇಲಾಖೆಯ ದಾಳಿಗೆ ಈ ಪ್ರಕಟಣೆಗಳು ಈಡಾದವು. ಆಡಳಿತ ಯಂತ್ರದ ವಿರುದ್ಧ ಹೊರಟ ನಡೆಗೆ ತೆತ್ತ ಬೆಲೆ ಇದಾಗಿದೆ.

ಈ ಮುಖ್ಯವಾಹಿನಿಯ ಕೆಲವು ಮಾಧ್ಯಮಗಳು ಇಬ್ಬಂದಿಯ ಆಟದಲ್ಲಿ ತೊಡಗಿರುವ ವಿದ್ಯಮಾನಗಳನ್ನು ಸಹಾ ಗಮನಿಸಬಹುದಾಗಿದೆ. ಇವು ಸರ್ಕಾರದ ಪೋಷಿತ ಸುದ್ದಿಗೆ ಮನ್ನಣೆಯನ್ನು ನೀಡುವುದರ ಜೊತೆಗೆ ಒಂದಿಷ್ಟು ತಿದ್ದಿ ತೀಡಿಸಿಕೊಂಡಿರುವ ವಾಸ್ತವಿಕ ಸುದ್ದಿಯನ್ನು ಆಗಾಗ್ಗೆ ಪ್ರಕಟಿಸುತ್ತವೆ. ತಮ್ಮ ಓದುಗರು ಶಾಶ್ವತವಾಗಿ ದೂರವಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಒಂದಿಷ್ಟು ಮರೆಮಾಚುವ ಮತ್ತೆ ಒಂದಿಷ್ಟು ಬಿಡಿಸಿಹೇಳುವ ಸುದ್ದಿಗಳನ್ನು ಪ್ರಕಟಿಸುತ್ತವೆ. ಇದೇ ಸ್ಥಿತಿ ಟಿವಿ ಮಾಧ್ಯಮಗಳಲ್ಲೂ ಇದೆ. ಇಲ್ಲಿನ ಪ್ರೈಮ್ ಟೈಮ್ ಚರ್ಚೆಗಳಲ್ಲಿ ನ್ಯೂಸ್ ಆ್ಯಂಕರ್‌ಗಳು ರಿಂಗ್ ಮಾಸ್ಟರ್‌ಗಳಂತೆ ವರ್ತಿಸಿ-ಚರ್ಚೆಯಲ್ಲಿ ಭಾಗವಹಿಸುವವರ ಮೇಲೆ ಪೂರ್ಣ ಹಿಡಿತವನ್ನು ಸಾಧಿಸುತ್ತಾರೆ. ಇಷ್ಟಾದರೂ ಸಹಾ, ಇಂದಿಗೂ ಅಲ್ಲಲ್ಲಿ ಕೆಲವು ವಿಮರ್ಶಾತ್ಮಕ ಕಾರ್ಯಕ್ರಮಗಳ ಎಳೆಗಳು ಮುಖ್ಯವಾಹಿನಿಯಲ್ಲಿ ಬದುಕುಳಿದಿವೆ. ಇಲ್ಲೂ ಸಹಾ ಕೆಲವು ಪ್ರಮುಖ ಅಂಶಗಳನ್ನು ನಿರ್ಲಕ್ಷಿಸಲಾಗುತ್ತದೆ. ಜನರ ಸಂಕಟಗಳು ಮತ್ತು ಚಳುವಳಿಗಳು ಇಲ್ಲಿ ಯಾವುದೇ ಸ್ಥಾನ ಪಡೆಯುವುದಿಲ್ಲ. ನೀವು ಇಂದು ಇರುವ ರಾಷ್ಟ್ರೀಯ ಮತ್ತು ಪ್ರಮುಖ ಸುದ್ದಿವಾಹಿನಿಗಳನ್ನು ಗಮನಿಸಿದಾಗ ಮೂಡುವ ಪ್ರಶ್ನೆಗಳು ಇವು: ಶ್ರಮಿಕ ವರ್ಗದವರಿಗೆ ಅಲ್ಲಿ ಜಾಗವಿದೆಯೇ? ಕಾರ್ಮಿಕ ಯೂನಿಯನ್‌ಗಳಿಗೆ ಅವಕಾಶವಿದೆಯೇ? ರೈತರಿಗೆ? ಇಲ್ಲಿ ಪ್ರಸಾರವಾಗುವ ಕೈಗಾರಿಕಾ ಸುದ್ದಿಯಲ್ಲಿ ಸಿಗುವುದು ಮಾಲೀಕರ ಪರವಾದ ಮತ್ತು ಕಂಪನಿಗಳ ಆರ್ಥಿಕತೆ ಕುರಿತಾದ ಚರ್ಚೆಗಳು ಮಾತ್ರ. ಕೈಗಾರಿಕೆಗಳನ್ನು ನೆಡೆಸುವವರಿಗೆ ಆದ್ಯತೆ ನೀಡಿ, ಅಲ್ಲಿ ದುಡಿಯುವ ಕಾರ್ಮಿಕರನ್ನು ಕಡೆಗಣಿಸಿರುವುದು ಎದ್ದು ಕಾಣುತ್ತದೆ. ಪೇಜ್ 3ನ ಸುದ್ದಿಗಳೆಂದು ಪರಿಗಣಿತವಾಗಿದ್ದ ಲೈಫ್‌ಸ್ಟೈಲ್ ಮತ್ತು ಫ್ಯಾಷನ್ ಸುದ್ದಿಗಳು ಈಗೀಗ ಮುಖಪುಟಕ್ಕೂ ಬಂದಿವೆ. ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾದ (ಪಿಎಆರ್‌ಎಐ) ಸಂಸ್ಥಾಪಕರು ಮತ್ತು ಅಭಿವೃದ್ಧಿ ಪತ್ರಕರ್ತರು ಆಗಿರುವ ಪಿ ಸಾಯಿನಾಥ್ ಅವರ ಪ್ರಕಾರ ಮುಂಬೈನಲ್ಲಿ ನಡೆಯುವ ಫ್ಯಾಷನ್‌ಶೋದ ಸುದ್ದಿಯನ್ನು 40 ಪತ್ರಕರ್ತರು ವರದಿ ಮಾಡುತ್ತಿದ್ದರೆ, ಕೇವಲ ಒಬ್ಬ ಪತ್ರಕರ್ತ ಇಡೀ ಗ್ರಾಮೀಣ ಮಹಾರಾಷ್ಟ್ರವನ್ನು, ಅಲ್ಲಿ ಸಂಭವಿಸುತ್ತಿರುವ ರೈತರ ಮತ್ತು ರೈತ ಕಾರ್ಮಿಕರ ಸಾವಿನಂತಹ ಸುದ್ದಿಗಳನ್ನು ವರದಿ ಮಾಡಲು ಇರುತ್ತಾನೆ.

ಯಾವುದೇ ಬದಲಾವಣೆಗೆ ಮೂಲದ್ರವ್ಯವಾಗಿರುವ ಜನರ ಆಂದೋಲನಗಳು ಸಾಮಾಜಿಕ ಜಾಲತಾಣಗಳ ಬಳಕೆ ವಿಚಾರದಲ್ಲಿ ಯಾವುದೇ ತಿಳುವಳಿಕೆಯನ್ನು ಹೊಂದಿರುವುದಿಲ್ಲ. ಜೊತೆಗೆ ಈಗಿನ ತಲೆಮಾರು ಜಾಲತಾಣಗಳನ್ನು ಹೇಗೆ ಬಳಸಿ ಕೊಳ್ಳುತ್ತದೆನ್ನುವ ಕನಿಷ್ಟ ಜ್ಞಾನವೂ ಇರುವುದಿಲ್ಲ. ಮುದ್ರಿತವಾದ ಯಾವುದೇ ವಿಚಾರ ಸತ್ಯವಾಗಿರುತ್ತದೆ ಎಂದು ನನ್ನ ಅಜ್ಜಿ ನಂಬಿದ್ದರು. ಇದೇ ನಂಬಿಕೆಯನ್ನು ಮುಂದುರಿಸಿರುವ ಈ ತಲೆಮಾರು, ವಾಟ್ಸ್‌ಅಪ್‌ನಲ್ಲಿ ಬರುವುದೆಲ್ಲವೂ ಸತ್ಯವೇ ಎಂದು ನಂಬುತ್ತದೆ. ಇವರಿಗೆ ಹೋಲಿಸಿದಾಗ ಕಿರಿಯ ತಲೆಮಾರು ಸ್ವಲ್ಪ ವಾಸಿ ಎನ್ನಬಹುದಾದರೂ, ನಮಗಿರುವ ಸಾಮಾಜಿಕ ಜಾಲತಾಣಗಳ ಸಾಕ್ಷರತಾ ಪ್ರಮಾಣ ನಗಣ್ಯವಾಗಿದೆ. ಸದ್ಯದ ದುರಂತವೆಂದರೆ, ಆರ್ಥಿಕವಾಗಿ ಬಲಾಢ್ಯವಾಗಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಂತಹ ಸಂಸ್ಥೆಗಳು ಸಾಮಾಜಿಕ ಜಾಲತಾಣಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸುವುದರಲ್ಲಿ ಎಲ್ಲರಿಗಿಂತಲೂ ಮುಂದಿರುವುದು.

ಇಂತಹ ಚಳವಳಿಗಳ ಸಾಮಾಜಿಕ ಜಾಲತಾಣಗಳ ಸಾಕ್ಷರತೆಯನ್ನು ಹೆಚ್ಚಿಸುವುದು ಹೇಗೆ? ಹಾಗೆ ನಮ್ಮ ಸಾಮಾಜಿಕ ಜಾಲತಾಣಗಳ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವುದು ಹೇಗೆ? ಇದೊಂದು ದೊಡ್ಡ ಸವಾಲು. ಈ ಸಾಕ್ಷರತೆಯನ್ನು ಹೊಂದಿರುವವರ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಾದರೆ, ಇದು ಸಂಭವಿಸುತ್ತದೆ. ರೈತರ ಚಳುವಳಿಯ ಸನ್ನಿವೇಶದಲ್ಲಿ ನಮಗಿದು ಅರ್ಥವಾಯಿತು: ರೈತರು ತಮ್ಮ ಧ್ವನಿಯನ್ನು ಕೇಳುವಂತೆ ಮಾಡಲು, ತಮ್ಮದೇ ಆದ ಮಾಧ್ಯಮವನ್ನು ಕಂಡುಕೊಂಡರು. ಅವರಿಗೆ ಸ್ಪಂದಿಸಲು ಸಿದ್ಧವಾಗಿದ್ದ ನ್ಯೂಸ್‌ಕ್ಲಿಕ್‌ಗಳಂತಹ ವೇದಿಕೆಗಳು ಅವರಿಗೆ ದೊರೆತರೂ, ತಮ್ಮ ಚಳುವಳಿಯ ವಿಷಯವನ್ನು (ಕಂಟೆಂಟ್) ತಮ್ಮ ಆಯ್ಕೆಯ ದೃಶ್ಯ, ಹಿನ್ನೆಲೆ ಸಂಗೀತ ಮತ್ತು ಸಾಹಿತ್ಯದ ಅಳವಡಿಕೆಯೊಂದಿಗೆ, ತಮ್ಮ ಅಗತ್ಯಕ್ಕೆ ಅನುಗುಣವಾದ ವೇದಿಕೆಯ ಮೂಲಕ ಹಂಚಿಕೊಳ್ಳುವ ಸಾಮರ್ಥ್ಯವನ್ನು ಅವರು ಗಳಿಸಿಕೊಂಡರು. ಅವರೇ ಸಿದ್ಧಪಡಿಸಿಕೊಂಡಿದ್ದ ಯೂಟ್ಯೂಬ್ ಇಲ್ಲವೇ ಫೇಸ್‌ಬುಕ್‌ನ ಚಾನಲ್‌ನಲ್ಲಿ ಈ ಕಂಟೆಂಟ್‌ಗಳನ್ನು ಅವರಿಗೆ ಬೇಕಿದ್ದ ಸಮಯದಲ್ಲಿ ಹಂಚಿಕೊಳ್ಳುವ ಶಕ್ತಿಯನ್ನು ಅವರೆ ಪಡೆದುಕೊಂಡರು; ಜೊತೆಗೆ ವಾರದಲ್ಲಿ ಒಮ್ಮೆ ಇಲ್ಲವೇ ಎರಡು ಬಾರಿ ಪ್ರಕಟವಾಗುತ್ತಿದ್ದ ನಾಲ್ಕು ಪುಟಗಳ ಟ್ರಾಲಿಟೈಮ್ಸ್ ಅನ್ನು ಜಾಲತಾಣಗಳಲ್ಲಿ ಪ್ರಕಟಿಸಿದರು. ಇದು ಒಂದು ಉದಾಹರಣೆ ಅಷ್ಟೆ. ಅಂದಿನ ತುರ್ತು ಪರಿಸ್ಥಿತಿಯಲ್ಲಿ ವಿದ್ಯುತ್ ಸಂಪರ್ಕ ಕಡಿತವಾದರೆ ಪತ್ರಿಕೆಯ ಮುದ್ರಣ ಸಾಧ್ಯವಾಗದೇ ಇರುವ ಪರಿಸ್ಥಿತಿ ಇತ್ತು. ಆದರೆ ಇಂದು ಹಾಗಿಲ್ಲ. ಇಂದಿನ ಡಿಜಿಟಲ್ ಯುಗದಲ್ಲಿ ಎಲ್ಲಾ ಜಾಲತಾಣಗಳನ್ನು (ಸಾಮಾಜಿಕ ಜಾಲತಾಣಗಳೂ ಸೇರಿದಂತೆ) ಒಂದೇ ಬಾರಿಗೆ ನಿಯಂತ್ರಿಸುವ ಅವಕಾಶವೇ ಇರುವುದಿಲ್ಲ.

NEW No. MAG(3)/NPP/205/2021-2022
JANASHAKTHI KANNADA VARA PATRIKE June 23-29, 2025 Price: Rs. 10/- Date of Publication: 20 June 2025 RNI No. KARKAN/2006/17926 Posted on 23-06-2025
Posted at BG PSO, BG - 560026 **Posted at Periodical Rate -** Rs. 2

ಚೀನಾ ದೇಶದಲ್ಲಿ ಜರುಗಿದ ಜಂಟಿ ವೈದ್ಯಕೀಯ ಮಿಷನ್ 7:

ವೈದ್ಯಕೀಯ ಕ್ಷೇತ್ರದಲ್ಲಿ ಚೀನಾ ಮತ್ತು ಭಾರತ ವೈದ್ಯರ ಸಹಕಾರ, ಮೈತ್ರಿ



ಏಷ್ಯಾ ಖಂಡದಲ್ಲಿ ಅತಿ ದೊಡ್ಡ ಹಾಗೂ ಪ್ರಾಚೀನ ನಾಗರಿಕತೆಗಳುಳ್ಳ ಭಾರತ ಮತ್ತು ಚೀನಾ ದೇಶಗಳ ನಡುವಿನ ಮೈತ್ರಿ ಸಹಕಾರ ಜಾಗತಿಕವಾಗಿಯೂ ಅತ್ಯಂತ ಶಕ್ತಿಯುತ ಪರಿಣಾಮ ಬೀರುವಂತಹದು. ಕೆಲವು ಭಿನ್ನಾಭಿಪ್ರಾಯಗಳಿದ್ದರೂ ಈ ಎರಡು ದೇಶಗಳ ಜನತೆಯ ನಡುವೆ ಪರಸ್ಪರ ಮೈತ್ರಿ ಸಹಕಾರ ಬಲಗೊಳಿಸುವ ಪ್ರಕ್ರಿಯೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಚೀನಾ ದೇಶದಲ್ಲಿ ನಡೆದ ವೈದ್ಯಕೀಯ ಮಿಷನ್ 7 ಸಮಾವೇಶ ಮಹತ್ವದ್ದು. ಅದರಲ್ಲಿ ಭಾರತವನ್ನು ಪ್ರತಿನಿಧಿಸಿ ಭಾಗವಹಿಸಿದ ಪ್ರಜಾ ವೈದ್ಯ ಡಾ. ಅನಿಲ್ ಕುಮಾರ್ ಅವರ ಭೇಟಿಯ ಸಂಕ್ಷಿಪ್ತ ನೋಟ.

ಭಾರತ ಮತ್ತು ಚೀನಾ ದೇಶಗಳ ನಡುವೆ ವೈದ್ಯಕೀಯ ಮೈತ್ರಿ, ಸಹಕಾರ ಬೆಸೆಯುವಲ್ಲಿ 'ಜಂಟಿ ವೈದ್ಯಕೀಯ ಮಿಷನ್' ನ ಪಾತ್ರ ಅತ್ಯಂತ ಮಹತ್ವದ್ದು. ಈ ಮಿಷನ್ 7 ನೆಯ ಸಮಾಗಮ ಸಭೆ 2025 ಜೂನ್ 9 ರಿಂದ ಜೂನ್ 15ನೇ ತಾರೀಖಿನವರೆಗೆ ಚೀನಾ ದೇಶದಲ್ಲಿ ನಡೆಯಿತು. ಈ ಮಿಷನ್ (ನಿಯೋಗ) ಸಭೆ ಒಟ್ಟು ಭಾರತದಿಂದ 11 ಜನ ವೈದ್ಯರು ಚೀನಾ ದೇಶದಲ್ಲಿ ನಡೆದ ಜಂಟಿ ವೈದ್ಯಕೀಯ ಮಿಷನ್ ಸಭೆಯಲ್ಲಿ ಭಾಗವಹಿಸಿದ್ದರು.

ಹುತಾತ್ಮ ಡಾ. ಕೊಟ್ನೀಸ್ ಗೌರವಾರ್ಥ

ಡಾ. ದ್ವಾರಕನಾಥ್ ಕೊಟ್ನೀಸ್ ರವರು 1938 ರಲ್ಲಿ ಎರಡನೆಯ ಪ್ರಪಂಚ ಯುದ್ಧದ ಭಾಗವಾಗಿ ಜಪಾನ್ ದೇಶ ಚೀನಾದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಚೀನಾ ಜನರಿಗೆ ನೆರವನ್ನು ಒದಗಿಸಲು ಚೀನಾ ದೇಶಕ್ಕೆ ತೆರಳಿ ಚೀನಾದ ಮಣ್ಣಿನಲ್ಲಿಯೇ 1942ರಲ್ಲಿ ವೀರ ಮರಣವನ್ನು ಹೊಂದುತ್ತಾರೆ. ಈ ಹುತಾತ್ಮನ ನೆನಪಿಗಾಗಿ ಹಾಗೂ ಐತಿಹಾಸಿಕ ಫ್ಯಾಸಿಸ್ಟ್ ವಿರೋಧವಾದ ಯುದ್ಧದಲ್ಲಿ ಮಡಿದ ಭಾರತೀಯ ವೈದ್ಯನ ಗೌರವಾರ್ಥವಾಗಿ ಈ ಒಂದು ಜಂಟಿ ವೈದ್ಯಕೀಯ ಮಿಷನ್ ನಲ್ಲಿ ಕರ್ನಾಟಕದಿಂದ ಇಬ್ಬರು ವೈದ್ಯರು–ಡಾ.ಎ.ಅನಿಲ್ ಕುಮಾರ್ ಹಾಗೂ ಡಾ.ಶಂಕರ್ ಗುಹಾ ಹಾಗೂ ತೆಲಂಗಾಣದಿಂದ ಎಂಟು ಜನ ವೈದ್ಯರು ಹಾಗೂ ಉತ್ತರಪ್ರದೇಶದಿಂದ ಒಬ್ಬ ವೈದ್ಯರು ಭಾಗವಹಿಸಿದ್ದರು.

2008ರಲ್ಲಿ ಮೊದಲನೆಯ ಬಾರಿಗೆ ಡಾ.ದ್ವಾರಕನಾಥ್ ಕೋಟ್ನಿಸ್ ರವರ ನೆನಪಿನಲ್ಲಿ ಹಾಗೂ ಅವರ ಗೌರವಾರ್ಥ, ಭಾರತ ಚೀನಾ ಫ್ರೆಂಡ್ ಶಿಪ್ ಅಸೋಸಿಯೇಷನ್(ICFA) ಹಾಗೂ ಚೀನಾ ಪೀಪಲ್ಸ್ ಅಸೋಸಿಯೇಷನ್ ಆಫ್ ಫ್ರೆಂಡ್ಸ್ ಆಫ್ ಫಾರಿನ್ ಕಂಟ್ರೀಸ್ (CPAFFC). ಈ ಎರಡು ಸಂಸ್ಥೆಗಳ ಸಹಭಾಗಿತ್ವದಲ್ಲಿ ಜಂಟಿ ವೈದ್ಯಕೀಯ ಮಿಷನ್ ಪ್ರಾರಂಭವಾಗಿದ್ದು, ಈಗ 2025ರಲ್ಲಿ ಏಳನೆಯ ಜಂಟಿ ವೈದ್ಯಕೀಯ ಮಿಷನ್ ಭಾಗವಾಗಿ ಭಾರತದಿಂದ 11 ಜನ ವೈದ್ಯರ ತಂಡ ಜೂನ್ 8 ರಂದು ಕುನ್ನಿಂಗ್ ಎನ್ನುವ ಪಟ್ಟಣವನ್ನು ತಲುಪಿತು. ಅಲ್ಲಿಂದ ಗುಜೋ ಪ್ರೋವಿನ್ಸ್ ನ ರಾಜಧಾನಿಯಾದ ಗುಯಾನ್ಗ್ ನಗರವನ್ನು ತಲುಪಿತು. ಜೂನ್ ಒಂಬತ್ತನೇ ತಾರೀಕು ಗುಜೋ ವೈದ್ಯಕೀಯ ವಿಶ್ವವಿದ್ಯಾಲಯದ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಭೇಟಿ ಮಾಡಿ ಅಲ್ಲಿ ಚೀನಾ ದೇಶದ 11 ಜನ ವೈದ್ಯರ ತಂಡವನ್ನು ಭೇಟಿಯಾಗಿ ಒಟ್ಟಿಗೆ 22 ಜನರ ವೈದ್ಯಕೀಯ ತಂಡವಾಗಿ ನಾವು ಶಿಬಿಂಗ್ ಎನ್ನುವ ಒಂದು ಸಣ್ಣ ಪಟ್ಟಣಕ್ಕೆ ಹತ್ತನೇ ತಾರೀಕು ಸೇರಿಕೊಂಡವು.

ವೈದ್ಯಕೀಯ ತಪಾಸಣೆ, ಸಂಸ್ಥೆಗಳ ಭೇಟಿ ಜನರೊಂದಿಗೆ ಸಂವಾದ

ಹತ್ತರಿಂದ ಹನ್ನೆರಡನೆಯ ತಾರೀಖಿನವರೆಗೆ ನಾವು ಶಿಬಿಂಗ್ ಕೌಂಟಿಯ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಿ 'ಶಿಬಿನ್ ಪೀಪಲ್ ಆಸ್ಪತ್ರೆ'ಯಲ್ಲಿ ವೈದ್ಯಕೀಯ ತಪಾಸಣೆಯನ್ನು ಮಾಡಿ ಚೀನಾ ದೇಶದ ಸಾಮಾನ್ಯ ಜನರೊಡನೆ ಬೆರೆತು ಸಕ್ರಿಯವಾಗಿ ಸಂವಾದವನ್ನು ಮಾಡಿದೆವು.

ನಂತರ ಗುಯಾಂಗ್ ನಗರಕ್ಕೆ ಹಿಂತಿರುಗಿ ಅಲ್ಲಿಂದ ಮರುದಿನ ಬೀಜಿಂಗ್ ನಗರವನ್ನು ಸೇರಿಕೊಂಡೆವು. ಅಲ್ಲಿ ಅತಿ ದೊಡ್ಡದಾದ ಚೀನಾ ದೇಶದ ಸಾಂಪ್ರದಾಯಿಕ ವೈದ್ಯಕೀಯ ವಿಶ್ವವಿದ್ಯಾಲಯವನ್ನು ಹಾಗೂ ಚೀನಾ ಸಾಂಪ್ರದಾಯಿಕ ವೈದ್ಯಕೀಯ ಸಂಗ್ರಹಾಲಯವನ್ನು ವೀಕ್ಷಿಸಿದವು. ನಂತರ ವೈದ್ಯಕೀಯ ಕ್ಷೇತ್ರವನ್ನು ಡಿಜಿಟಲೀಕರಣವನ್ನು ಮಾಡಿದ ಒಂದು ಸಂಸ್ಥೆಗೆ ಭೇಟಿ ನೀಡಿ ವಿವಿಧ ಡಿಜಿಟಲೀಕರಣ ಪರಿಕಲ್ಪನೆಗಳನ್ನು ವೀಕ್ಷಿಸಿದವು.

ಪರಂಪರಾ ಮಹಾನ್ ನಗರ ಬೀಜಿಂಗ್ ನಲ್ಲಿ

ಮರುದಿನ ಬೆಳಿಗ್ಗೆ ಒಂದು ಗುಂಪು ಗ್ರೇಟ್ ವಾಲ್ ಆಫ್ ಚೈನಾ ವನ್ನು ಭೇಟಿ ಮಾಡಿದರೆ ಮತ್ತೊಂದು ಗುಂಪು ಚೇರ್ಮನ್ ಮಾವೋ ರವರ ದೇಹ ಇರಿಸಿರುವ ತಿಯಾನ್ ಮನ್ ಚೌಕದಲ್ಲಿರುವ ಮೋಸಲ್ಲಮನ್ನು (ಸಮಾಧಿ) ಭೇಟಿ ಮಾಡಿ ಮಾವೋ ರವರಿಗೆ ಕ್ರಾಂತಿಕಾರಿ ಶ್ರದ್ಧಾಂಜಲಿಗಳನ್ನು ಅರ್ಪಿಸಿದವು.



ಜೂನ್ 9 ನೇ ತಾರೀಕು, ನಾವು 'ಗುಜು ವೈದ್ಯಕೀಯ ಶಿಕ್ಷಣ ಸಂಸ್ಥೆ'ಯಲ್ಲಿ ಅತ್ಯಂತ ಆಧುನಿಕ ಪ್ರಯೋಗಾಲಯವನ್ನು ವೀಕ್ಷಿಸಿದವು. ಹಾಗೂ ಜೆನೆಟಿಕ್ ಸಿಕ್ವೆನ್ಸಿಂಗ್ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಐದು ಅಂತಸ್ತಿನ ಬೃಹತ್ ಕಟ್ಟಡವನ್ನು ಹೊಂದಿರುವ ಒಂದು ವೈದ್ಯಕೀಯ ಸಂಸ್ಥೆಯನ್ನು ಭೇಟಿ ಮಾಡಿದೆವು. ಆ ಸಂಸ್ಥೆಯಲ್ಲಿ ಬಯೋ ಬ್ಯಾಂಕ್ ಹಾಗೂ ವೈದ್ಯಕೀಯ ಮಾಹಿತಿ ಸಂಗ್ರಹ ಕೇಂದ್ರವನ್ನು ವೀಕ್ಷಿಸಿದವು. ಸಂಜೆ ಗುಜೋ ಪ್ರೋವಿನ್ಸ್ ನ ಗವರ್ನರ್ ಆದಂತಹ ಝಾಂಗ್ ಜಿನ್ಪಿಂಗ್ (zhang jinping) ಹಾಗೂ CPAFFC ಯ ಉಪಾಧ್ಯಕ್ಷರಾದ ಯೂಆನ್ ಮಿಂಡ್ನಾವೋ (Yuan Mindao) ರವರು ಜಂಟಿ ವೈದ್ಯಕೀಯ ಮಿಷನ್ 7 ಅನ್ನು ಉದ್ಘಾಟನೆ ಮಾಡಿದರು. ಬಳಿಕ ನಮ್ಮೆಲ್ಲರಿಗೂ ಅತ್ಯುತ್ತಮವಾದ ಔತಣ ಕೂಟವನ್ನು ಏರ್ಪಡಿಸಿದ್ದರು.



ಪೀಪಲ್ಸ್ ಆಸ್ಪತ್ರೆಯಲ್ಲಿ–ಮೈತ್ರಿಯ ಕೊಡುಗೆ

10ನೇ ತಾರೀಕು ಚೀನಾದಿಂದ ಹನ್ನೊಂದು ಜನ ವೈದ್ಯರು ಹಾಗೂ ಭಾರತದಿಂದ 11 ಜನ ವೈದ್ಯರು ಒಟ್ಟು 22 ಜನರ ವೈದ್ಯಕೀಯ ತಂಡವು 'ಶಿಬಿಂಗ್ ಕೌಂಟಿ'ಗೆ ಹೊರಟೆವು. ಶಿಬಿನ್ ಕೌಂಟಿಯನ್ನು ಮಧ್ಯಾಹ್ನ ಒಂದು ಗಂಟೆಗೆ ತಲುಪಿದ ನಂತರ 'ಶಿಬಂಗ್ ಪೀಪಲ್ಸ್ ಆಸ್ಪತ್ರೆ'ಯ ವಾರ್ಡ್ಗಳಲ್ಲಿ ಇರುವಂತಹ ರೋಗಿಗಳನ್ನು ತಪಾಸಣೆ ಮಾಡಿ ಅಲ್ಲಿ ಇರತಕ್ಕಂತಹ ವೈದ್ಯಕೀಯ ಸಿಬ್ಬಂದಿಯೊಡನೆ ಚರ್ಚಿಸಿದೆವು. ಬಳಿಕ ಸುಮಾರು 20 ಸಾವಿರ ಯುವಾನ್ಗಳ ಮೌಲ್ಯದ ಔಷಧಿಗಳನ್ನು ಅವರಿಗೆ ಕೊಡುಗೆಯಾಗಿ ನೀಡಿದೆವು.

11ನೇ ತಾರೀಕು ಶಿಬ್ಬಿಂಗ್ ಪೀಪಲ್ಸ್ ಆಸ್ಪತ್ರೆಯಲ್ಲಿ ಉಚಿತ ವೈದ್ಯಕೀಯ ತಪಾಸಣೆಯ ಶಿಬಿರವನ್ನು ಹಮ್ಮಿಕೊಂಡು ರೋಗಿಗಳನ್ನು ಪರೀಕ್ಷಿಸಿದೆವು ಹಾಗೂ ಚಿಕಿತ್ಸೆಯನ್ನು ನೀಡಿದೆವು. ನಂತರ ಅಲ್ಲಿಂದ ಗುಡ್ಡಗಾಡು ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದೆವು. ಅಲ್ಲಿ ರೈತರೊಡನೆ ಹಾಗೂ ಕಾರ್ಮಿಕರೊಡನೆ ಸಂವಾದವನ್ನು ಮಾಡಿದೆವು.

ಸಾಂಪ್ರದಾಯಿಕ–ಆಧುನಿಕ ವೈದ್ಯ ಪದ್ಧತಿ ಸಮನ್ವಯ

12ನೇ ತಾರೀಕು ವಾಪಸ್ ಗುಯಾಂಗ್ ನಗರಕ್ಕೆ ಬಂದು ಚೀನಾ ಸಾಂಪ್ರದಾಯಿಕ ವೈದ್ಯಕೀಯ ವಿಶ್ವವಿದ್ಯಾಲಯವನ್ನು ಭೇಟಿ ಮಾಡಿ ಅಲ್ಲಿ ಇರುವಂತಹ ಸುಸಜ್ಜಿತವಾದ ಸಾಂಪ್ರದಾಯಿಕ ವೈದ್ಯಕೀಯ ವಿಜ್ಞಾನದ ಸಂಗ್ರಹಾಲಯವನ್ನು ವೀಕ್ಷಿಸಿದೆವು. ಚೀನಾ ದೇಶದ ಆರೋಗ್ಯ ಹಾಗೂ ವೈದ್ಯಕೀಯ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯನ್ನು ಹಾಗೂ ಆಧುನಿಕ ವೈದ್ಯಕೀಯ ಪದ್ಧತಿಯನ್ನು ಸಮತೋಲನವಾಗಿ ಬೆಳೆಸುತ್ತಿರುವುದು ಹಾಗೂ ಬಳಸುತ್ತಿರುವುದನ್ನು ಅಲ್ಲಿ ನೋಡಬಹುದು.

ಡಿಜಿಟಲೀಕರಣ

ಅದಾದ ನಂತರ ಡಿಜಿಟಲ್ ಡಿಜಿಟಲೀಕರಣ ಕಂಪನಿಗೆ ಭೇಟಿ ನೀಡಿ ಚೀನಾ ದೇಶದಲ್ಲಿ ವೈದ್ಯಕೀಯ ಸಲಹೆ ಹಾಗೂ ಆರೈಕೆಯನ್ನು ಡಿಜಿಟಲೀಕರಣ ಮಾಡಿರುವುದನ್ನು ನೋಡಿದೆವು. 39.net ಅನ್ನುವ ಆನ್‌ಲೈನ್ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಜನಸಾಮಾನ್ಯರಿಂದ ಹಿಡಿದು ಗ್ರಾಮೀಣ ಭಾಗದ ಬೆಟ್ಟ ಗುಡ್ಡಗಳಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರುಗಳು ಕೂಡ ಈ ಆನ್ ಲೈನ್ ಆಸ್ಪತ್ರೆಯನ್ನು ಉಪಯೋಗಿಸಿಕೊಳ್ಳಬಹುದು.

ಆಧುನಿಕ ವಿಜ್ಞಾನ–ತಂತ್ರಜ್ಞಾನದ ಅಳವಡಿಕೆ

ಮರುದಿನ ಬೀಜಿಂಗ್ ನಗರಕ್ಕೆ ವಾಪಸ್ಸಾಗಿ ಅಲ್ಲಿ ವಿಶ್ವದ ಪ್ರತಿಷ್ಠಿತ ಕಿವಿ, ಮೂಗು, ಗಂಟಲು ಆಸ್ಪತ್ರೆಗೆ ಭೇಟಿ ಮಾಡಿದೆವು, ಈ ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ವಿಜ್ಞಾನವನ್ನು ಬಳಸುತ್ತಿದೆ. ಹಾಗೂ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಕೂಡ ವಿಶ್ವ ವೈದ್ಯಕೀಯ ಕ್ಷೇತ್ರಕ್ಕೆ ಪರಿಚಯಿಸುತ್ತಿದೆ.

ನಂತರ ಬೀಜಿಂಗ್ ನಗರದಲ್ಲಿ ಇರುವ ಒಂದು 'ಸಮುದಾಯ ಆರೋಗ್ಯ ಕೇಂದ್ರ'ವನ್ನು ನಾವು ಭೇಟಿ ಮಾಡಿದವು. ಆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜನಸಾಮಾನ್ಯರ ಆರೋಗ್ಯ ಆರೈಕೆಗಾಗಿ ಚೀನಾ ದೇಶದ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಹಾಗೂ ಆಧುನಿಕ ವೈದ್ಯಕೀಯ ಪದ್ಧತಿಯನ್ನು ಸಮ್ಮಿಲನ ಮಾಡಿ ಜನರಿಗೆ ಚಿಕಿತ್ಸೆ ನೀಡುತ್ತಿರುವುದನ್ನು ನೋಡಬಹುದು.

ಭ್ರಾತೃತ್ವದ ಮೈತ್ರಿಯ ಬೀಳ್ಕೊಡುಗೆ

ನಂತರ ಸಂಜೆ ಐ.ಸಿ.ಎಫ್.ಎ. ಮತ್ತು ಸಿ.ಪಿ.ಎ.ಎಫ್.ಎಫ್.ಸಿ. ಸಂಸ್ಥೆಯ ಉಪಾಧ್ಯಕ್ಷರು ನಮಗೆಲ್ಲರಿಗೂ ಕೂಡ ಬೀಳ್ಕೊಡುಗೆಯನ್ನು ಕೊಟ್ಟು ಒಂದು ಔತಣವನ್ನು ಅವರ ಕಚೇರಿಯಲ್ಲಿ ವ್ಯವಸ್ಥೆ ಮಾಡಿದರು. ಅಲ್ಲಿ ನಮ್ಮೆಲ್ಲರ ಅಭಿಪ್ರಾಯಗಳನ್ನು ಖುದ್ದಾಗಿ ಪಡೆದ ಅಧ್ಯಕ್ಷರು ಸಿಪಿಎಎಫ್‌ಸಿ ಹಾಗೂ ಐಸಿಎಫ್‌ಎ ನಡುವೆ ಒಂದು ಒಪ್ಪಂದವನ್ನು ಕೂಡ ಮಾಡಿಕೊಂಡರು. ಈ ಒಪ್ಪಂದದಲ್ಲಿ ಮುಂದಿನ ದಿನಗಳಲ್ಲಿ ವೈದ್ಯಕೀಯ ವಿಜ್ಞಾನ, ವೈದ್ಯಕೀಯ ಶಿಕ್ಷಣ ಹಾಗೂ ತಂತ್ರಜ್ಞಾನವನ್ನು ಎರಡು ದೇಶಗಳ ನಡುವೆ ವಿನಿಮಯ ಮಾಡಿಕೊಳ್ಳುವಂತೆ ಹಾಗೂ ಚೀನಾದ ಜನರಿಗೂ ಭಾರತದ ಜನರಿಗೂ ನಡುವೆ ಒಂದು ಸ್ನೇಹಪೂರ್ವಕವಾದಂತಹ ಭ್ರಾತೃತ್ವವನ್ನು ಹೊಂದಿರುವಂತಹ ಮೈತ್ರಿಯನ್ನು ಬೆಳೆಸಲು ಶ್ರಮಿಸಲು ಒಪ್ಪಂದವನ್ನು ಮಾಡಲಾಗಿದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**